


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 5 ಮಂಗಳವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 110 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ದಸರಾ ಉತ್ಸವಕ್ಕೆ ಮುನ್ನುಡಿ

ಗಜಪಡೆ ಪುರ ಪ್ರವೇಶ

- ವೀರನಹೊಸಳ್ಳಿ ಗೇಟ್ ಬಳಿ ಸಾಂಪ್ರದಾಯಿಕ ಗಜಪಯಣಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಚಾಲನೆ
- ಭಾರಿ ಸಂಖ್ಯೆ ಜನರ ನಡುವೆ ಹೆಜ್ಜೆ ಹಾಕಿದ ಗಜಪಡೆ
- ಲಾರಿಗಳಲ್ಲಿ ಸುರಕ್ಷಿತವಾಗಿ ಮೈಸೂರು ಪ್ರವೇಶ; ಅರಣ್ಯ ಭವನದಲ್ಲಿ ಬಿಡಾರ



ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್ ಬಳಿ ದಸರಾ ಗಜಪಡೆಯ ಮೊದಲ ತಂಡದ 9 ಆನೆಗಳಿಗೆ ಸಚಿವ ಈಶ್ವರ್ ಖಂಡ್ರೆ ಪೂಜೆ ಮಾಡಿ, ಗಜಪಯಣಕ್ಕೆ ಚಾಲನೆ ನೀಡಿದರು.

ವೀರನಹೊಸಳ್ಳಿ,ಆ.4(ಎಂಟಿವೈ)– ಈ ಸಾಲಿನ ನಾಡಹಬ್ಬ ದಸರಾ ಮಹೋತ್ಸವ ಪ್ರಕ್ರಿಯೆಗೆ ಇಂದು ದಸರಾ ಗಜಪಯಣ ದೊಂದಿಗೆ ಚಾಲನೆ ದೊರೆಯಿತು. ದಸರಾ ಪ್ರಮುಖ ಆಕರ್ಷಣೆ ಗಜಪಡೆ. ಅಭಿಮನ್ಯು ನೇತೃತ್ವದ ಮೊದಲ ತಂಡದ 9 ಆನೆಗಳಿಗೆ ಹುಣಸೂರು ತಾಲೂಕಿನ ನಾಗರಹೊಳೆ ಅಭಯಾರಣ್ಯದ ವೀರನಹೊಸಳ್ಳಿ ಗೇಟ್ ಬಳಿ ಸೋಮವಾರ ಕಿಕ್ಕಿರಿದು ಸೇರಿದ್ದ ಜನಸ್ತೋಮದ ನಡುವೆ ಪುಷ್ಪಾರ್ಚನೆ ಮೂಲಕ ವಿಧ್ಯುಕ್ತವಾಗಿ ಗಜಪಯಣಕ್ಕೆ ಚಾಲನೆ ದೊರೆಯಿತು.

ಗಜಪಯಣ ಕಾರ್ಯಕ್ರಮಕ್ಕೆ ಹಿಂದೆಂದೂ ಕಂಡರಿಯದಷ್ಟು ಜನ ನೆರೆದಿದ್ದರು. ಅರಮನೆ ಪಂಚಾಂಗದಂತೆ ಸೋಮವಾರ ಮಧ್ಯಾಹ್ನ 12.34ರಿಂದ 12.59ರವರೆಗೆ ಸಲ್ಲುವ ಶುಭ ತುಲಾ(ಅಭಿಜಿನ್) ಲಗ್ನದಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ, ಅಭಿಮನ್ಯು ನೇತೃತ್ವದ 9 ಆನೆಗಳಿಗೂ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮೂಲಕ ಸಾಂಪ್ರದಾಯಿಕ ಗಜಪಯಣ ಉದ್ಘಾಟಿಸಿದರು. ಇಂದು ಸಂಜೆ ಎಲ್ಲಾ ಆನೆಗಳು ಲಾರಿಗಳಲ್ಲಿ ಸುರಕ್ಷಿತವಾಗಿ ಅರಣ್ಯ ಭವನ ತಲುಪಿದವು. ಇದಕ್ಕೂ ಮುನ್ನ ವೀರನಹೊಸಳ್ಳಿ ಗೇಟ್ ಬಳಿ ಎಲ್ಲಾ ಆನೆಗಳ ಮೈ ತೊಳೆದು ಮಾವುತ, ಕಾವಾಡಿಗಳು ಕರೆತಂದರು. ಬೆಳಗ್ಗೆ 11.30ರ ವೇಳೆಗೆ ಎಲ್ಲಾ ಆನೆಗಳಿಗೂ ಗಾದಿ ಕಟ್ಟಿ, ಜೂಲಾ(ಗೌನ್) ಹೊದಿಸಲಾಯಿತು. ನಂತರ 7 ಗಂಡಾನೆಗಳ ದಂತಕ್ಕೆ ಸಿಂಗೋಟಿ ತೊಡಿಸಿ, ಹಣೆಪಟ್ಟಿ ಬಿಗಿದ ನಂತರ ಆನೆಗಳ ಹೆಸರಿನ ಪಟ್ಟಿ ಕಟ್ಟಿ ಅಂತಿಮವಾಗಿ ವೀರನಹೊಸಳ್ಳಿ ಗೇಟ್ ಬಳಿ ಪೂಜಾ ಸ್ಥಳಕ್ಕೆ ಕರೆತಂದು ಸಾಲಾಗಿ ನಿಲ್ಲಿಸಲಾಯಿತು.

ಎಸ್.ವಿ.ಪ್ರಹ್ಲಾದ್‌ರಾವ್ ಅವರು ಮಹಾದ್ವಾರದ ಪೂಜೆ ನೆರವೇರಿಸಿದರು. ಜಯ, ವಿಜಯ ಪೂಜೆ, ದ್ವಾರ ಮಹಾಲಕ್ಷ್ಮಿ ಪೂಜೆ, ಪಾದ ತೊಳೆದು ಅರಿಶಿನ, ಕುಂಕುಮ, ವಿಭೂತಿ, ಗಂಧ ಹಚ್ಚಿ, ಅಕ್ಷತೆ ಹಾಕಿ ಓಂಕಾರ ಬರೆದು ಪೂಜೆ ಆರಂಭಿಸಿದರು. ವನದೇವತೆ ಪ್ರಾರ್ಥನೆ, ಚಾಮುಂಡೇಶ್ವರಿ ಪೂಜೆ ಬಳಿಕ ಗಣಪತಿ ಅರ್ಚನೆ, ಗಣಪತಿ ಅಥರ್ವಶಿಷ್ಯ ಮಂತ್ರ ಪಠಿಸಿ ಸಾಕ್ಷಾತ್ ಗಣಪತಿ ■ 6ನೇ ಪುಟಕ್ಕೆ

ಆ.10ರಂದು ಅರಮನೆಗೆ ಗಜಪಡೆ

"ಆ.10ರಂದು ಸಂಜೆ 6.40ರಿಂದ 7.20ರ ನಡುವೆ ಶುಭ ಮಕರ ಗೋಧೂಳಿ ಲಗ್ನದಲ್ಲಿ ದಸರಾ ಗಜಪಡೆಗೆ ಅರಮನೆಗೆ ಸ್ವಾಗತ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಭಾನುವಾರವೂ ಆಗಿರುವುದರಿಂದ ವರ್ಣರಂಜಿತ ದೀಪಾಲಂಕಾರದ ಮೂಲಕ ಗಜಪಡೆಯನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಗುತ್ತದೆ. ಈ ಸಾಂಪ್ರದಾಯಿಕ ಕಾರ್ಯಕ್ರಮದ ಉಸ್ತುವಾರಿಯನ್ನು ಅರಮನೆ ಮಂಡಳಿ ನಿರ್ವಹಿಸಲಿದೆ.

-ಟಿ.ಎಸ್. ಸುಬ್ರಹ್ಮಣ್ಯ
ಅರಮನೆ ಮಂಡಳಿ ಉಪನಿರ್ದೇಶಕರು.

ಅರಣ್ಯ ಭವನದಲ್ಲಿ ಬಿಡಾರ ಹೂಡಿದ ದಸರಾ ಗಜಪಡೆ

ಮೈಸೂರು, ಆ.4(ಎಂಟಿವೈ)– ಹುಣಸೂರಿನ ನಾಗರಹೊಳೆ ಅರಣ್ಯ ವೀರನಹೊಸಳ್ಳಿ ಗೇಟ್‌ನಿಂದ ಹೊರಟ ಗಜಪಡೆ 9 ಆನೆಗಳು ಸೋಮವಾರ ಸಂಜೆ 6 ಗಂಟೆಗೆ ಸುರಕ್ಷಿತವಾಗಿ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣ ತಲುಪಿದವು.

ವೀರನಹೊಸಳ್ಳಿ ಬಳಿ ನಡೆದ ಸಾಂಪ್ರದಾಯಿಕ ಗಜಪಯಣ ಕಾರ್ಯಕ್ರಮದ ನಂತರ ಎಲ್ಲಾ ಆನೆಗಳನ್ನು ಲಾರಿಗಳಲ್ಲಿ ಮಧ್ಯಾಹ್ನ 3.45 ಬೆಂಗಾವಲು ಪಡೆಯೊಂದಿಗೆ ಮೈಸೂರಿನ ಅರಣ್ಯ ಭವನಕ್ಕೆ ಕರೆತರಲಾಗಿದ್ದು, ಅರಮನೆ ಪ್ರವೇಶದ ವರೆಗೂ ಗಜಪಡೆ ಇಲ್ಲಿಯೇ ವಾಸ್ತವ್ಯ ಹೂಡಲಿದೆ.

ಒಳಮೀಸಲಾತಿ ಸಂಬಂಧ ಸಿಎಂ ಸಿದ್ದರಾಮಯ್ಯಗೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ಸಲ್ಲಿಕೆ

ಆ.7ರ ಸಂಪುಟ ಸಭೆಯಲ್ಲಿ ವರದಿ ಮಂಡಿಸಿ, ಚರ್ಚೆ; ಸಿಎಂ



ಒಳಮೀಸಲಾತಿ ಸಂಬಂಧ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ವರದಿ ಸಲ್ಲಿಸಿದರು.

ಬೆಂಗಳೂರು, ಆ.4– ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ಶಿಫಾರಸು ಮಾಡಲು ರಾಜ್ಯ ಸರ್ಕಾರ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗವು ಶಿಫಾರಸುಗಳನ್ನು ಒಳಗೊಂಡ ತನ್ನ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಸಲ್ಲಿಸಿದೆ.

ರಾಜ್ಯದಾದ್ಯಂತ ಮೇ 5 ರಿಂದ ಜುಲೈ 6 ರವರೆಗೆ ನಡೆದ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮತ್ತು ಸರ್ಕಾರದ ವಿವಿಧ ಇಲಾಖೆ, ನಿಗಮ–ಮಂಡಳಿಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ವಿಶ್ಲೇಷಿಸಿ, ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನದಂತೆ ಪರಿಶಿಷ್ಟ ಜಾತಿ, ಒಳ ಜಾತಿಗಳನ್ನು ವರ್ಗೀಕರಿಸಿ ಲಭ್ಯವಿರುವ ಮೀಸಲಾತಿಯನ್ನು ಆಯೋಗ ಹಂಚಿದೆ. ವರದಿ, ಸಮೀಕ್ಷೆಯ ದತ್ತಾಂಶ ಮತ್ತು ಅನುಬಂಧಗಳು ಒಟ್ಟು ಸೇರಿ ಸುಮಾರು 1,765 ಪುಟಗಳು ಮತ್ತು ಆರು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ನೀಡಿದೆ. ವರದಿ ಸಲ್ಲಿಸಿದ ಸಂದರ್ಭದಲ್ಲಿ ಸಚಿವರಾದ ಡಾ.ಜಿ. ಪರಮೇಶ್ವರ್, ಡಾ.ಹೆಚ್.ಸಿ. ಮಹದೇವಪ್ಪ, ಕೆ.ಹೆಚ್. ಮುನಿಯಪ್ಪ, ಶಿವರಾಜ ತಂಗಡಗಿ, ಆರ್.ಬಿ. ತಿಮ್ಮಾಪುರ್, ಪ್ರಿಯಾಂಕ್ ಖರ್ಗೆ ಮುಂತಾದವರು ಇದ್ದರು. ■ 6ನೇ ಪುಟಕ್ಕೆ

——— ಮುಖ್ಯಮಂತ್ರಿಗಳ ಸಭೆ ವಿಫಲ; ಸಾರಿಗೆ ನೌಕರರ ಮುಷ್ಕರ ———

ಇಂದಿನಿಂದ ಸಾರಿಗೆ ಬಸ್‌ಗಳು ಸ್ಥಗಿತ

- ರಾಜ್ಯದೆಲ್ಲೆಡೆ ಸೋಮವಾರ ಸಂಜೆಯಿಂದಲೇ ಬಸ್ ಸಂಚಾರ ಸ್ಥಗಿತ
- ಖಾಸಗಿ ಬಸ್‌ಗಳ ಕಾರು–ಬಾರು ಶುರು



ಮುಷ್ಕರ ಕೈಬಿಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನೌಕರರ ಜಂಟಿ ಕ್ರಿಯಾ ಸಮಿತಿ ಸಭೆ ನಡೆಯಿತು.

ಬೆಂಗಳೂರು, ಆ.4– ಮೂವತ್ತೆಂಟು ತಿಂಗಳ ವೇತನ ಬಾಕಿ ಸೇರಿದಂತೆ ಸಾರಿಗೆ ನೌಕರರ ಇನ್ನಿತರ ಬೇಡಿಕೆ ಗಳನ್ನು ಈಡೇರಿಸಲು ರಾಜ್ಯ ಸರಕಾರ ನಿರಾಕರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ನೌಕರರ ಜಂಟಿ ಕ್ರಿಯಾ ಸಮಿತಿ, ನಿಗಮಗಳ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳೊಂದಿಗಿನ ಸಂಧಾನ ಸಭೆ ವಿಫಲವಾಗಿದೆ. ಹೀಗಾಗಿ ನೌಕರರು ಕರೆ ನೀಡಿರುವ ಸಾರಿಗೆ ಮುಷ್ಕರ ನಿಶ್ಚಿತವಾಗಿದ್ದು, ನಾಳೆ(ಆ.5) ಬೆಳಗ್ಗೆ 6ಗಂಟೆಯಿಂದಲೇ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು ರಸ್ತೆಗೆ ಇಳಿಯುವುದಿಲ್ಲ.

ಬೆಳಗ್ಗೆ 6ಗಂಟೆಯಿಂದ ಸಾರಿಗೆ ಸಂಸ್ಥೆಗಳ ಯಾವುದೇ ನೌಕರ ಕರ್ತವ್ಯಕ್ಕೆ ಹಾಜರಾಗುವುದಿಲ್ಲ, ಬಸ್‌ಗಳನ್ನು ಓಡಿಸುವುದಿಲ್ಲ. ಸರ್ಕಾರದ ಬೆದರಿಕೆಗಳಿಗೆ ಹೆದರುವ ಪ್ರಶ್ನೆಯೇ ಇಲ್ಲ. ಎಲ್ಲಾ ಬಸ್‌ಗಳನ್ನು ಡಿಪೋಗಳಲ್ಲೇ ನಿಲ್ಲಿಸಿ, ಶಾಂತ ರೀತಿಯಲ್ಲೇ ಮುಷ್ಕರ ನಡೆಸಲಿದ್ದೇವೆ' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಹೆಚ್.ವಿ.ಅನಂತಸುಬ್ಬರಾವ್ ಘೋಷಿಸಿದ್ದಾರೆ. ಸೋಮವಾರ ವಿಧಾನಸೌಧದ 3ನೇ ಮಹಡಿಯಲ್ಲಿನ ಸಮಿತಿ ಕೊಠಡಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್, ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಹೆಚ್.ವಿ.ಅನಂತ ಸುಬ್ಬರಾವ್, ಕೆಎಸ್‌ಆರ್‌ಟಿಸಿ ಸಂಘಟನೆಗಳ ಒಕ್ಕೂಟದ ಮಂಜುನಾಥ್ ಉಪಸ್ಥಿತಿಯಲ್ಲಿ ಸುದೀರ್ಘ ಸಭೆ ನಡೆಸಿದರು.

ಮುಷ್ಕರ ಹಿಂಪಡೆಯಲು ಸಿಎಂ ಮನವಿ: ಸಾರಿಗೆ ನಿಗಮದ ವಿವಿಧ ಸಂಘಟನೆಗಳ ಪ್ರತಿನಿಧಿಗಳ ಜತೆ ಈಗಾಗಲೇ ಹಲವು ಸುತ್ತಿನ ಸಭೆ ನಡೆಸಲಾಗಿದೆ. ಪರಸ್ಪರ ಮಾತುಕತೆ ಮೂಲಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ. ಹೀಗಾಗಿ ನಾಳೆ ಕರೆದಿರುವ ಮುಷ್ಕರವನ್ನು ಹಿಂಪಡೆಯ ಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಸಭೆಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, 2016ರಲ್ಲಿ ನಾನು ಸಿಎಂ ಆಗಿದ್ದಾಗ ವೇತನ ಪರಿಷ್ಕರಣೆ ಮಾಡಿದ್ದೆ. ಆಗ ಶೇ.12.5 ರಷ್ಟು ಹೆಚ್ಚಳ ಮಾಡಲಾಗಿತ್ತು. ಬಳಿಕ 2020 ರಲ್ಲಿ ಕೋವಿಡ್ ಕಾರಣಕ್ಕೆ ಅಂದಿನ ಸರ್ಕಾರ ವೇತನ ಪರಿಷ್ಕರಣೆ ಮಾಡಿಲ್ಲ. 2023ರ ಮಾರ್ಚ್ 1ರಂದು ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ವೇತನ ಪರಿಷ್ಕರಣೆ ಒಪ್ಪಂದವಾಗಿತ್ತು. ಆಗ ಮೂಲವೇತನ ಶೇ.15ರಷ್ಟು ಪರಿಷ್ಕರಣೆ ಮಾಡಲು ತೀರ್ಮಾನವಾಗಿತ್ತು. ಆ ಬಳಿಕ ನೌಕರರ ವೇತನ ಪರಿಷ್ಕರಣೆ ಕುರಿತಾಗಿ ಶ್ರೀನಿವಾಸ ಮೂರ್ತಿ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ 2022ರ ಜನವರಿ 1ರಿಂದ 2023ರ ■ 6ನೇ ಪುಟಕ್ಕೆ

ಸಾರಿಗೆ ನೌಕರರ ಮುಷ್ಕರ; ಸರ್ಕಾರದ ಪರ್ಯಾಯ ವ್ಯವಸ್ಥೆ

ಬೆಂಗಳೂರು, ಆ.4– ನಾಳೆ(ಆ.5)ಯಿಂದ ಸಾರಿಗೆ ನೌಕರರ ಮುಷ್ಕರ ಘೋಷಿಸಲಾಗಿದ್ದು, ಸರ್ಕಾರ ಪರ್ಯಾಯ ವ್ಯವಸ್ಥೆಗೆ ಮುಂದಾಗಿದೆ. ಖಾಸಗಿ ಬಸ್‌ಗಳನ್ನು ರಸ್ತೆಗಿಳಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಇಷ್ಟೇ ಅಲ್ಲದೇ ಐಟಿ ನೌಕರರಿಗೆ ವರ್ಕ್ ಫ್ರಮ್ ಹೋಮ್ ನೀಡಲು ಮನವಿ ಮಾಡಿದೆ.

ಸಾರಿಗೆ ನೌಕರರ ಮುಷ್ಕರದಿಂದ ಪ್ರತಿ ದಿನ ಕೆಲಸಕ್ಕಾಗಿ ಕಚೇರಿಗೆ ಹಾಜರಾಗುವ ಉದ್ಯೋಗಿಗಳಿಗೂ ಸಮಸ್ಯೆಯಾಗಲಿದೆ. ಈ ಸಮಸ್ಯೆ ಪ್ರಮಾಣ ತಗ್ಗಿಸಲು ಇದೀಗ ಐಟಿ ಕ್ಷೇತ್ರಗಳ ನೌಕರರಿಗೆ ವರ್ಕ್ ಫ್ರಮ್ ಹೋಮ್ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಸಾರಿಗೆ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ಕೈಗೊಂಡಿರುವ ಕಾರಣ ವರ್ಕ್ ಫ್ರಮ್ ಹೋಮ್ ಸಾಧ್ಯವಿರುವ ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಕಂಪನಿಗಳಿಗೆ ಮನವಿ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. 4 ಸಾವಿರ ಖಾಸಗಿ ಬಸ್ ರಸ್ತೆಗಿಳಿಸಲು ಸರ್ಕಾರ ಸಜ್ಜಾಗಿದ್ದು, ಟಿಕೆಟ್ ಬೆಲೆ, ಮಾರ್ಗ ಸೇರಿದಂತೆ ಎಲ್ಲಾ ವಿವರಗಳ ಕುರಿತು ಚರ್ಚೆ ನಡೆಸಲಾಗಿದೆ. ಖಾಸಗಿ ಬಸ್ ಮೂಲಕ ಸೇವೆ ನೀಡಲು ಸರ್ಕಾರ ಪರ್ಯಾಯವಾಗಿ ವ್ಯವಸ್ಥೆ ಮಾಡಿಕೊಳ್ಳುತ್ತಿದೆ. ಪರ್ಯಾಯ ಮಾರ್ಗ ಹುಡುಕಲು ಹಾಗೂ ಇರವ ಮಾರ್ಗ ಗಳ ಬಳಕೆ ಮಾಡಲು ಸಾರಿಗೆ ಇಲಾಖೆ ಮುಖ್ಯ ಕಾರ್ಯದರ್ಶಿಗಳು ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ■ 6ನೇ ಪುಟಕ್ಕೆ

ಹಿರಿಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸ ಪ್ರಸಾದ್ ಅವರ 78ನೇ ಜನ್ಮದಿನಾಚರಣೆ ಪ್ರಯುಕ್ತ

ಆ.6ರಂದು ವಿಚಾರ ಮಂಥನ

ವಿ.ಶ್ರೀನಿವಾಸಪ್ರಸಾದ್ ಕೊಡುಗೆ-ಸಾಧನೆಗಳ ಕುರಿತು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಂ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಂದ ವಿಷಯ ಮಂಡನೆ

ಮೈಸೂರು,ಆ.4(ಪಿಎಂ)- ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಡಾ.ಬಿ.ಆರ್. ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ, ಸಮಾನತೆ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಆ.6ರಂದು ಹಿರಿಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸ ಪ್ರಸಾದ್ ಅವರ 78ನೇ ಜನ್ಮದಿನಾಚರಣೆಯ ಅಂಗವಾಗಿ ವಿಚಾರ ಮಂಥನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.


ವಿ.ಶ್ರೀನಿವಾಸ ಪ್ರಸಾದ್

ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಪಶುಸಂಗೋಪನಾ ಇಲಾಖೆ ಸಚಿವರೂ ಆದ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. 'ವಿ.ಶ್ರೀನಿವಾಸಪ್ರಸಾದ್ ; ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾಳಜಿಗಳು' ಕುರಿತು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ ವಿಷಯ ಮಂಡಿಸಲಿದ್ದಾರೆ. ಅಲ್ಲದೆ, 'ವಿ.ಶ್ರೀನಿವಾಸ ಪ್ರಸಾದ್ ; ರಾಜಕೀಯ ಬದ್ಧತೆ' ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿಷಯ ಮಂಡಿಸಲಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತಾರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಸಿ.ಬಸವರಾಜು, ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಸಂಚಾಲಕಿ ಪ್ರತಿಮಾ ಪ್ರಸಾದ್, ಸಮಾನತೆ ಪ್ರಕಾಶನದ ಪ್ರಕಾಶಕ ಭರತ್ ರಾಮಸ್ವಾಮಿ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀವತ್ಸ ಕಚೇರಿಗೆ ಬ್ರಾಹ್ಮಣ ಸಭಾ ಅಧ್ಯಕ್ಷ ರಘುನಾಥ್ ಭೇಟಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್ ಅವರು ಮೈಸೂರಿನ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಕಚೇರಿಗೆ ಭೇಟಿ ನೀಡಿದರು. ಚಿತ್ರದಲ್ಲಿ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ವೀರ ರಾಘವಾಚಾರ್, ಸಿಇಓ ಕೆ.ಆರ್.ಯೋಗಾನರಸಿಂಹನ್ (ಮುರುಳಿ), ಎಕೆಬಿಎಂಎಸ್ ರಾಜ್ಯ ಜಂಟಿ ಕಾರ್ಯದರ್ಶಿ ಬಾಲಕೃಷ್ಣ, ಕಲ್ಕೆರೆ ನಾಗರಾಜ್, ಟಿ.ಎಸ್.ಅರುಣ್, ಮಾಜಿ ಪಾಲಿಕೆ ಸದಸ್ಯ ಎಂ.ಡಿ.ಪಾರ್ಥಸಾರಥಿ, ಅಗಸ್ತ್ಯ ಸೊಸೈಟಿ ನಿರ್ದೇಶಕ ವಿಕ್ರಂ ಅಯ್ಯಂಗಾರ್, ಶಾಂತರಾಮ್ ಅವರನ್ನು ಕಾಣಬಹುದು.

ಕ್ರೀಡಾಕೂಟ ಉದ್ಘಾಟನೆ




ಮೈಸೂರಿನ ಆದಿಚುಂಚನಗಿರಿ ರಸ್ತೆಯ ವಿವೇಕಾನಂದ ಕ್ರೀಡಾಂಗಣದಲ್ಲಿ ಕುವೆಂಪು ನಗರದ ಒಕ್ಕಲಿಗರ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ದಿವಂಗತ ಮಾಜಿ ಶಾಸಕ ಕೆಂಪೀರೇಗೌಡರ ಸ್ಮರಣಾರ್ಥ ಶಾಲಾ ಮಕ್ಕಳು, ಹಿರಿಯ ನಾಗರಿಕರ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಹೆಚ್.ಕೆ.ರಾಮು, ಪ್ರಸಾರಾಂಗದ ಮಾಜಿ ನಿರ್ದೇಶಕ ಕೆ.ಟಿ.ವೀರಪ್ಪ, ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಟ್ರಸ್ಟ್‌ನ ಸಂಚಾಲಕ ಬೂಕನಕೆರೆ ವಿಜೇಂದ್ರ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಮಾಯಕ ಭಗಿನಿಯರ ವಿರುದ್ಧದ ಪ್ರಕರಣ ಕೈಬಿಡಲು ಪ್ರಧಾನಿಗೆ ಡಾ.ಬರ್ನಾಡ್ ಮೊರಾಸ್ ಮನವಿ

ಮೈಸೂರು ಜಿಲ್ಲಾಡಳಿತದ ಮೂಲಕ ಮನವಿ ಸಲ್ಲಿಕೆ

ಮೈಸೂರು, ಆ.4- ಛತ್ತೀಸ್ ಘಡದಲ್ಲಿ ಮಾನವ ಕಳ್ಳಸಾಗಣೆ ಹಾಗೂ ಬಲವಂತ ಮತಾಂತರದ ಆಧಾರರಹಿತ ಆರೋಪಗಳಡಿ ಅಮಾಯಕ ಭಗಿನಿಯರಾದ ಸಿಸ್ಟರ್ ವಂದನಾ ಫ್ರಾನ್ಸಿಸ್, ಸಿಸ್ಟರ್ ಪ್ರೀತಿ ಮೇರಿ ಹಾಗೂ ಇತರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆಯುವಂತೆ ಆಗ್ರಹಿಸಿರುವ ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಅವರು, ಅಲ್ಪಸಂಖ್ಯಾತ ಕ್ರೈಸ್ತರ ಹಿತರಕ್ಷಣೆಯನ್ನು ಕೋರಿ ಪ್ರಧಾನಿ ಮೋದಿ ಅವರಿಗೆ ಜಿಲ್ಲಾಡಳಿತದ ಮೂಲಕ ಮನವಿ ಸಲ್ಲಿಸಿದ್ದಾರೆ.



ಇತ್ತೀಚೆಗೆ ಜು.25ರಂದು ಛತ್ತೀಸ್‌ಘಡದಲ್ಲಿ ನಡೆದಿರುವ ಘಟನೆ ಆಘಾತಕಾರಿಯಾಗಿದೆ. ಕೇರಳದ ಸಿಸ್ಟರ್ ಆಫ್ ಮೇರಿ ಇಮ್ಯಾಕ್ಯುಲೇಟ್ ಆಫ್ ಅಸ್ಸಿಸಿಯ ಸದಸ್ಯರಾದ ಸಿಸ್ಟ್ ವಂದನಾ ಫ್ರಾನ್ಸಿಸ್ ಮತ್ತು ಸಿಸ್ಟರ್ ಪ್ರೀತಿ ಮೇರಿ ಎಂಬ ಇಬ್ಬರು ಧಾರ್ಮಿಕ ಭಗಿನಿಯರು, ನಾರಾಯಣಪುರ ಜಿಲ್ಲೆಯ ಮೂವರು ಮಹಿಳೆಯರನ್ನು ರೈಲು ನಿಲ್ದಾಣದ ಬಳಿ ಬಂಧಿಸಲಾಯಿತು. ಕಿಡಿಗೇಡಿಗಳು ಬಲವಂತವಾಗಿ ಸುಳ್ಳು ಹೇಳಿಕೆಗಳನ್ನು ನೀಡಲು ಒತ್ತಡ ಹೇರಿ ಅವರ ಮಾನಸಿಕ ಸ್ಥೈರ್ಯವನ್ನು ಕುಗ್ಗಿಸಿದರು. ವಾಸ್ತವಾಂಶ ತಿಳಿಸಿದರೂ ಧಾರ್ಮಿಕ ಮತಾಂತರದ ಆಧಾರ ರಹಿತ ಸುಳ್ಳು ಆಪಾದನೆ ಹೊರಿಸಿ ಬಂಧಿಸಿದ್ದು, ಮನುಕುಲವೇ ತಲೆತಗ್ಗಿಸುವಂತದ್ದು.

ಇದರ ಬೆನ್ನಲ್ಲೇ ದೇಶದಾದ್ಯಂತ ಪ್ರತಿಭಟನೆ ಹಾಗೂ ಶಾಂತಿಯುತ ಚಳವಳಿಗಳು ಆರಂಭವಾದಾಗ ಈ ಧಾರ್ಮಿಕ ಭಗಿನಿಯರು ಹಾಗೂ ಇತರ ಮಹಿಳೆಯರಿಗೆ ಕೆಲವು ಷರತ್ತುಗಳೊಂದಿಗೆ ಜಾಮೀನು ನೀಡಲಾಗಿದೆ. ಸುಳ್ಳು ಆರೋಪದಡಿ ಬಂಧಿಸಿ, ಷರತ್ತು ವಿಧಿಸಿ ಜಾಮೀನು ನೀಡಿರುವುದು ನಿಜಕ್ಕೂ ನಮಗೆ ಅತೀವ ನೋವನ್ನುಂಟು ಮಾಡಿದೆ. ಕೂಡಲೇ ಈ ಧಾರ್ಮಿಕ ಭಗಿನಿಯರ ಮೇಲೆ ಹಾಕಲಾಗಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕು ಎಂದು ಅಲ್ಲಿನ ಸರ್ಕಾರವನ್ನು ನಾವು ಒತ್ತಾಯಿಸುತ್ತೇವೆ.

ಭಾರತೀಯ ಕ್ರೈಸ್ತರಾದ ನಾವು ದೇಶ ಪ್ರೇಮಿಗಳು ಹಾಗೂ ಶಾಂತಿಪ್ರಿಯರು. ಕ್ರೈಸ್ತ ಧರ್ಮವು ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಾ ಬಂದಿದೆ. ಜಾತಿ, ಮತ ಭೇದವಿಲ್ಲದೆ ಸರ್ವಧರ್ಮ ಸಮನ್ವಯತೆಯನ್ನು ಕಾಯುತ್ತಾ ಬರುತ್ತಿದ್ದರೂ ಅಲ್ಪಸಂಖ್ಯಾತ ಭಾರತೀಯ ಕ್ರೈಸ್ತರ ಪ್ರಾರ್ಥನಾ ಮಂದಿರಗಳು, ಶಿಕ್ಷಣ ಸಂಸ್ಥೆಗಳು, ಕ್ರೈಸ್ತ ಧಾರ್ಮಿಕ ಗುರುಗಳು ಹಾಗೂ ಧಾರ್ಮಿಕ ಸಹೋದರಿಯರ ಮೇಲೆ ಹಲ್ಲೆ, ದೌರ್ಜನ್ಯ ನಡೆಯುತ್ತಿರುವುದು ಖಂಡನೀಯ.

ಕೆಲ ಪಟ್ಟಭದ್ರ ಹಿತಾಸಕ್ತಿಗಳು, ಸಮಾಜಘಾತುಕರು ಆಗಾಗ್ಗೆ ಸಮಾಜದ ಶಾಂತಿ ಸೌಹಾರ್ದತೆಯನ್ನು ಕದಡುವ ಹೇಯಕೃತ್ಯಗಳನ್ನು ನಡೆಸುತ್ತಿರುವುದು ಶೋಚನೀಯ. ಇಂತಹ ದುಷ್ಟಶಕ್ತಿಗಳ ವಿರುದ್ಧ ಧರ್ಮಗುರುಗಳು, ಧಾರ್ಮಿಕ ಭಗಿನಿಯರು ಹಾಗೂ ಕ್ರೈಸ್ತ ಸಮುದಾಯದವರು ಒಕ್ಕೊರಲಿನಿಂದ ಖಂಡಿಸುತ್ತೇವೆ. ಕಳೆದ ಕೆಲವು ವರ್ಷಗಳಿಂದ ಮಣಿಪುರ, ಒರಿಸ್ಸಾ ಇನ್ನಿತರ ರಾಜ್ಯಗಳಲ್ಲಿ ನಿರಪರಾಧಿಗಳಾಗಿರುವ ಕ್ರೈಸ್ತ ಧರ್ಮೀಯರು ಭಯಭೀತರಾಗಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ನಮ್ಮ ಭಾರತದಲ್ಲಿ ಇಂತಹ ದುಷ್ಕೃತ್ಯಗಳನ್ನು ಎಸಗುವವರ ವಿರುದ್ಧ ಕ್ರಮಕ್ಕೆ ರಾಜ್ಯ ಸರ್ಕಾರಗಳು ಮುಂದಾಗಬೇಕು. ಅಂತಹ ಕೃತ್ಯಗಳು ಮರುಕಳಿಸದಂತೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೆಆರ್‌ಎಸ್‌ಗೆ ಅಡಿಪಾಯ ಹಾಕಿದ್ದು ಟಿಪ್ಪು ಹೇಳಿಕೆ ಖಂಡಿಸಿ ಸಚಿವ ಮಹದೇವಪ್ಪ ವಿರುದ್ಧ ಪ್ರತಿಭಟನೆ

ಮೈಸೂರು, ಆ.4(ಜಿಎ)-ಕನ್ನಂಬಾಡಿ ಕಟ್ಟೆಗೆ ಮೊದಲು ಅಡಿಪಾಯ ಹಾಕಿದ್ದು ಟಿಪ್ಪುಸುಲ್ತಾನ್ ಎನ್ನುವ ಮೂಲಕ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಟಿಪ್ಪುಸುಲ್ತಾನರನ್ನು ವೈಭವೀಕರಿಸುವ ಭರದಲ್ಲಿ ಇತಿಹಾಸವನ್ನು ತಿರುಚಿದ್ದಾರೆ ಎಂದು ಆರೋಪಿಸಿ ಸಚಿವರ ಹೇಳಿಕೆಯನ್ನು ಖಂಡಿಸಿ ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ ನಡೆಯಿತು.

ಮೈಸೂರಿನ ಗಾಂಧಿ ವೃತ್ತದಲ್ಲಿ ಜಮಾಯಿಸಿದ ವೇದಿಕೆ ಕಾರ್ಯಕರ್ತರು ಸಚಿವ ಹೆಚ್.ಸಿ.ಮಹದೇವಪ್ಪ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರಿನ ಗಾಂಧಿಚೌಕದ ಮುಂಭಾಗ ಕೆಆರ್‌ಎಸ್‌ಗೆ ಅಡಿಪಾಯ ಹಾಕಿದ್ದು ಟಿಪ್ಪು ಹೇಳಿಕೆ ಖಂಡಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಸಚಿವ ಮಹದೇವಪ್ಪ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ವೇದಿಕೆ ಅಧ್ಯಕ್ಷ ಬಿ.ಬಿ.ರಾಜಶೇಖರ್ ಮಾತನಾಡಿ, ಟಿಪ್ಪುಗೂ ಮೊದಲು ಮೈಸೂರು ಅರಸರು ಜಲಾಶಯ ನಿರ್ಮಿಸಲು ಯೋಜನೆ ರೂಪಿಸಿದ್ದರು. ಕ್ರಿ.ಶ.1595ರಲ್ಲಿ ದಳವಾಯಿ ಕುಮಾರರಾಮ, 1659-1673ರ ನಡುವೆ ಕಂಠೀರವ ನರಸರಾಜ ಒಡೆಯರ್ ಶ್ರೀರಂಗಪಟ್ಟಣದ ಉತ್ತರದಲ್ಲಿ ಅಣೆಕಟ್ಟನ್ನು ನಿರ್ಮಿಸಿದ್ದರು. 1638-1659ರಲ್ಲಿ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ಕಾವೇರಿಗೆ ಒಂದು ಅಣೆಕಟ್ಟು ಕಟ್ಟಲು ಪ್ರಯತ್ನಿಸಿದ್ದರು. ತದನಂತರ ಟಿಪ್ಪುಸುಲ್ತಾನ್ ಕೂಡ ಅಣೆಕಟ್ಟೆ ಕಟ್ಟಲು ಶಂಕುಸ್ಥಾಪನೆ ನೆರವೇರಿಸಿದ್ದರು. ಈ ಬಗ್ಗೆ ಪರ್ಶಿಯನ್ ಭಾಷೆಯಲ್ಲಿ ಅವರು ಬರೆಸಿದ್ದ ಶಾಸನ 1911ರಲ್ಲಿ ಪತ್ತೆಯಾಗಿತ್ತು. ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೆಆರ್‌ಎಸ್ ಜಲಾಶಯ ನಿರ್ಮಿಸುವಾಗ ಅಲ್ಲಿ ಸಿಕ್ಕಿದ ಟಿಪ್ಪು ಶಾಸನವನ್ನು ಕನ್ನಡದಲ್ಲಿ ಬರೆಸಿ ಜಲಾಶಯದ ದ್ವಾರದ ಬಳಿ ಇರಿಸಿದ್ದು ಸಹ ನಾಲ್ವಡಿ ಅವರ ಹೆಗ್ಗಳಿಕೆ. ಇಂತಹ ಇತಿಹಾಸ ತಿಳಿಯದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು, ಕೇವಲ ಟಿಪ್ಪುಸುಲ್ತಾನ್ ಅವರನ್ನು ಮಾತ್ರ ನೆನಪಿಸಿಕೊಳ್ಳುವುದು ಸರಿಯಲ್ಲ, ಅದಕ್ಕೂ ಮೊದಲು ಜಲಾಶಯ ಕಟ್ಟಲು ನಿರ್ಧರಿಸಿದ್ದ ಮೈಸೂರು ಅರಸರನ್ನೂ ನೆನಪಿಸಿಕೊಳ್ಳಬೇಕಿತ್ತು ಎಂದು ಆಗ್ರಹಿಸಿದರಲ್ಲದೇ, ಇತಿಹಾಸ ತಿರುಚುವ ಪ್ರಯತ್ನದ ವಿರುದ್ಧ ನಮ್ಮ ಪ್ರತಿಭಟನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಆರ್‌ಎಸ್ ಜಲಾಶಯದ ಇತಿಹಾಸವನ್ನು ತಜ್ಞರು ಸಂಶೋಧನೆ ನಡೆಸಿ ದಳವಾಯಿ ಕುಮಾರರಾಮ, ಚಿಕ್ಕದೇವರಾಜ ಒಡೆಯರು, ಕಂಠೀರವ ನರಸರಾಜ ಒಡೆಯರ್ ಇವರು ಸಹ ಅಣೆಕಟ್ಟನ್ನು ನಿರ್ಮಿಸಲು ಪ್ರಯತ್ನಿಸಿದರು ಎಂಬುದಾಗಿ ಇತಿಹಾಸದಲ್ಲಿ ದಾಖಲಿಸಿದ್ದಾರೆ. ಇವರ ಹೆಸರುಗಳನ್ನು ಬಿಟ್ಟು ಟಿಪ್ಪು ಸುಲ್ತಾನ್ ಅಡಿಪಾಯ ಹಾಕಿದರು ಎನ್ನುವ ಹೇಳಿಕೆ ನೀಡಿ ಒಂದು ಸಮುದಾಯ ಅಥವಾ ಒಂದು ವರ್ಗವನ್ನು ಓಲೈಕೆ ಮಾಡುವುದು ಸರಿಯಲ್ಲ. ಇದನ್ನು ಕನ್ನಾಡಂಬೆ ರಕ್ಷಣಾ ವೇದಿಕೆ ತೀವ್ರವಾಗಿ ಖಂಡಿಸುತ್ತದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ನಂಜುಂಡ, ಸಂತೋಷ್, ಮಂಜುಳ, ಅನುರಾಜ್, ಡಿ.ಪಿ.ಕೆ ಪರಮೇಶ್, ಸಿಂಧುವಳ್ಳಿ ಶಿವಕುಮಾರ್, ಕೃಷ್ಣೇಗೌಡ, ಲೋಕೇಶ್, ಲಕ್ಷ್ಮಿ, ನೇಹ, ಮಹದೇವಸ್ವಾಮಿ, ಆರ್.ಸಿದ್ದೇಗೌಡ, ಹೊನ್ನೇಗೌಡ, ಪ್ರತಾಪ್, ಹೇಮಲತಾ ಪ್ರಕಾಶ್, ಗೌತಮ್, ಅಶೋಕ್ ಮತ್ತಿತರರು ಪಾಲ್ಗೊಂಡಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ

ಮೈಸೂರು, ಆ.4(ಜಿಎ)-ಮೈಸೂರಿನ ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ನಡೆದ ವಿಪ್ರಮಿಲನ ಸಮ್ಮೇಳನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನವನ್ನು ನಡೆಸಲಾಯಿತು.

ನೂತನ ಸದಸ್ಯತ್ವದ ಅರ್ಜಿಗಳನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಅವರಿಗೆ ಮೈಸೂರಿನ ಎಕೆಬಿಎಂಎಸ್ ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ ತಂಡದಿಂದ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಎಕೆಬಿಎಂಎಸ್‌ನ ರಾಜ್ಯ ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮಿಕಾಂತ್, ರಾಜ್ಯ ಉಪಾಧ್ಯಕ್ಷರಾದ ಹೆಚ್.ವಿ.ರಾಜೀವ್, ಡಿ.ಟಿ.ಪ್ರಕಾಶ್, ಜೆ.ಹೆಚ್.ಅನಿಲ್ ಕುಮಾರ್, ರಥಯಾತ್ರೆ ಸುರೇಶ್, ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್, ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀನಿವಾಸ್‌ಪ್ರಸಾದ್, ಅಭಿಯಾನ ತಂಡದ ಸದಸ್ಯರಾದ ಎಂ.ಎಸ್.ಪ್ರಶಾಂತ್, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಎನ್.ವಿಶ್ವನಾಥ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ಅನುಪಮಾ, ರಾಧಾ, ನಾಗಭೂಷಣ್, ರಾಮಾನುಜ ಅಭ್ಯುದಯ ಸಂಘದ ಅಧ್ಯಕ್ಷ ರಾಜಗೋಪಾಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನ ನಡೆಸಲಾಯಿತು.

ಕಲ್ಪವೃಕ್ಷ ಕ್ಷೇತ್ರದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ

ಮೈಸೂರು, ಆ.4- ಮೈಸೂರಿನ ನಿರ್ಮಾಣ ನಗರ ಎಂ.ಜಿ.ಹಳ್ಳಿ ರಸ್ತೆ, ಜಂತಗಳ್ಳಿ ಗ್ರಾಮದಲ್ಲಿರುವ ಕಲ್ಪವೃಕ್ಷ ಕ್ಷೇತ್ರ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ 354ನೇ ರಾಯರ ಆರಾಧನಾ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಆ.9 (ಶನಿವಾರ)ರಂದು ಧನ, ಧಾನ್ಯ, ಪೂಜೆ ಸಂಜೆ 6ಕ್ಕೆ ಧಾನ್ಯ ಪೂಜೆ ಹಾಗೂ ಪ್ರಾರ್ಥನೋತ್ಸವವಿರುತ್ತದೆ.

ಆ.10 (ಭಾನುವಾರ) ರಂದು ರಾಯರ ಪೂರ್ವಾರಾಧನೆ ಬೆಳಿಗ್ಗೆ 7 ಗಂಟೆಗೆ ಪಂಚಾಮೃತ, ಮಧ್ಯಾಹ್ನ 12 ಗಂಟೆಗೆ ಹಸ್ತೋದಕ ಮಹಾಮಂಗಳಾರತಿ ತೀರ್ಥ ಪ್ರಸಾದ. ರಾಯರ 354ನೇ ಆರಾಧನಾ ಮಹೋತ್ಸವದ ಅಂಗವಾಗಿ ಸಂಜೆ 6.30ಕ್ಕೆ ವಿಶೇಷ ದಿವ್ಯ ಸಾನ್ನಿಧ್ಯವನ್ನು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮವಾಗಿ ಸಂಜೆ 5.30ರಿಂದ 7ರವರೆಗೆ ನಂಜನಗೂಡು ನಟರಾಜ ನಾಟ್ಯ ಶಾಲೆಯ ವಿದುಷಿ ಶ್ರೀಮತಿ ರಮ್ಯಾ ಎಸ್.ರಾಘವೇಂದ್ರ ಮತ್ತು ಶಿಷ್ಯರಿಂದ ಭರತನಾಟ್ಯ ಕಾರ್ಯಕ್ರಮವಿರುತ್ತದೆ.



ಆ.11 (ಸೋಮವಾರ) ರಂದು ಮಧ್ಯಾರಾಧನೆ ಅಂಗವಾಗಿ ಬೆಳಿಗ್ಗೆ 7ಕ್ಕೆ ಪಂಚಾಮೃತ ಮಧ್ಯಾಹ್ನ 12 ಹಸ್ತೋದಕ ಮಹಾಮಂಗಳಾರತಿ, ತೀರ್ಥ ಪ್ರಸಾದ, ಸಂಜೆ 7ಕ್ಕೆ ಗಜ ವಾಹನೋತ್ಸವ ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗ. ಸಾಂಸ್ಕೃತಿಕ ಕಾರ್ಯಕ್ರಮವು ಸಂಜೆ 5.30 ರಿಂದ 7 ಗಂಟೆಯವರೆಗೆ ಸರಸ್ವತಿ ವಾದ್ಯವೃಂದ ವಿದ್ವಾನ್ ಡಾ.ಎಂ.ಆರ್.ಹನುಮಂತರಾಜು ಮತ್ತು ತಂಡದವರಿಂದ ಲಯನಾದ ತರಂಗ. ಆ.12 (ಮಂಗಳವಾರ) ರಂದು ಉತ್ತರಾಧನೆ. ಬೆಳಗ್ಗೆ 7ಕ್ಕೆ ಪಂಚಾಮೃತ. 10 ಗಂಟೆಗೆ ನಿರ್ಮಾಣ ನಗರದ ಮುಖ್ಯ ರಸ್ತೆಯಲ್ಲಿ ಶ್ರೀ ರಾಯರಿಗೆ ಮಹಾ ರಥೋತ್ಸವದ ನಂತರ ಡೋಲೋತ್ಸವ ಮಧ್ಯಾಹ್ನ 12.00 ಗಂಟೆಗೆ ಹಸ್ತೋದಕ ಮಹಾಮಂಗಳಾರತಿ ತೀರ್ಥಪ್ರಸಾದ. ಸಂಜೆ 5.30 ರಿಂದ 8 ರವರೆಗೆ ವಿದ್ವಾನ್ ಸಾಗರ್ ಚಕ್ರವರ್ತಿ ಸಿ. ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ. ಆ.13 (ಬುಧವಾರ) ರಂದು ಶ್ರೀ ಸುಜ್ಞಾನೇಂದ್ರ ತೀರ್ಥರ ಆರಾಧನೆ ಬೆಳಗ್ಗೆ 7 ಗಂಟೆಗೆ ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ ಮಹಾಮಂಗಳಾರತಿ ತೀರ್ಥಪ್ರಸಾದ ವಿತರಣೆ.


ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.4-ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಕಾಲೇಜು, ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ 2025-26ನೇ ಸಾಲಿಗೆ ಎಸ್‌ಎಸ್‌ಪಿ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಲೇಜು, ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ https://ssp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಕಚೇರಿ ಮೈಸೂರು ತಾಲೂಕು, ನಂ.40. ಶ್ರೀ ಮಹರ್ಷಿ ವಾಲ್ಮೀಕಿ ಭವನ, ಕರ್ನಾಟಕ ಗ್ರಾಮೀಣ ಬ್ಯಾಂಕ್ (ಕೇಂದ್ರ ಕಚೇರಿ) ಎದುರು, ವಿಜಯನಗರ, 2ನೇ ಹಂತ ಮೈಸೂರು. ದೂ: 0821-2543076/8105763300 ಹಾಗೂ ಇ-ಮೇಲ್ ttwomys@gmail.com ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.08.2025 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** 95ನೇ ವರ್ಷದ ವಿಶೇಷ ಕರಗ ಮಹೋತ್ಸವ, ತಮಿಳುನಾಡಿನ ಕಲೈಮಾಮಣಿ ಶ್ರೀ ವೀರಮಣಿ ರಾಜು ಮತ್ತು ಶ್ರೀ ಅಭಿಷೇಕ್‌ರಾಜು ವೃಂದದವರಿಂದ ಭಕ್ತಿ ಗೀತೆಗಳು, ಸ್ಥಳ: ದೇವಸ್ಥಾನದ ಸಮೀಪ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಸೂತ್ರ ಆಯುರ್ಧಾಮ :** ವೆರಿಕೋಸ್ ಸಮಸ್ಯೆಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಆರೋಗ್ಯ ಭಾರತಿ, ಸುಯೋಗ್ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಔಷಧಿ ವಿತರಣೆ, ಸ್ಥಳ: 136, 2ನೇ ಮೇನ್ ರೋಡ್, 11ನೇ ಕ್ರಾಸ್, ಜಯನಗರ, ಬೆಳಗ್ಗೆ 10 ರಿಂದ.

■ **ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ :** ವಾರ್ಷಿಕೋತ್ಸವ ಸಮಾರಂಭ ಹಾಗೂ ಚಾಲಕರ ಅದ್ಧೂರಿ ಸಮಾವೇಶ, ಉದ್ಘಾಟನೆ : ಶಾಸಕ ಜಿ.ಡಿ. ಹರೀಶ್‌ಗೌಡ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಲಾಂಛನ ಬಿಡುಗಡೆ : ಚಲನಚಿತ್ರ ನಟ ಧ್ರುವ ಸರ್ಜಾ, ವಿಶೇಷ ಆಹ್ವಾನಿತರು : ಉಮಾಪತಿ ಶ್ರೀನಿವಾಸ್‌ಗೌಡ, ವಿಶೇಷ ಆಹ್ವಾನಿತರು : ಮಹೇಂದ್ರ ಮುಣೋತ್, ಕೆ.ವಿ. ಚೇತನ್, ಸ್ಥಳ: ಜಯದೇವ ಆಸ್ಪತ್ರೆ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಆದಿ ಕರ್ನಾಟಕ (ಛಲವಾದಿ) ಮಹಾಸಂಸ್ಥಾನ ಗುರುಪೀಠ :** ಡಾ. ಜ್ಞಾನ ಸ್ವರೂಪಾನಂದ ಸ್ವಾಮೀಜಿ ಅವರ ಪ್ರಥಮ ವರ್ಷದ ಸನ್ಯಾಸ ದೀಕ್ಷಾ ಕಾರ್ಯಕ್ರಮದ ಪ್ರಯುಕ್ತ ಸಮಾಜದ ಏಳಿಗೆಗಾಗಿ ಚಿಂತನ-ಮಂಥನ ವಿಚಾರ ಸಂಕಿರಣ, ಸಾನ್ನಿಧ್ಯ : ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ : ಪುರುಷೋತ್ತಮ್, ಮುಖ್ಯ ಅತಿಥಿಗಳು : ಮಾ. ವೆಂಕಟರಾಮು, ವಿ. ರಾಮಸ್ವಾಮಿ, ಬಿ. ಸಿದ್ದರಾಜು, ವಿ. ಶೈಲೇಂದ್ರ, ಮಹದೇವ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ನಿತಿನ್ ರಾಜಾರಾಂ ಶಾಸ್ತ್ರೀ, ಪಿ. ಎಸ್. ರಂಜನಿ ಹಾಗೂ ಸಿ. ವಿಶ್ವನಾಥ್, ವ್ಯಾಖ್ಯಾನ - ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90-ನೆನಪುಗಳ ಹೊತ್ತು ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ ಅವರೊಂದಿಗೆ ಸಂದರ್ಶನ, ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 9.00 ಕರೆಗೊಂದು ಗೀತೆ-ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ-ಕೆ.ಎಮ್. ಸುರೇಂದ್ರ-ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ- ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ.ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ - ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಡಿ. ಸುಮತಿ ಮುರಾರಿ - ಹಾಡುಗಾರಿಕೆ, 4.00 ಕಥಾಕಾಲಕ್ಷೇಪ-ಹನುಮದ್ ವ್ರತ, ಪ್ರಸ್ತುತಿ- ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ - ಕಿಸಾನ್‌ವಾಣಿ-ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನುಗಾರಿಕಾ ಇಲಾಖೆ ಅಭಿವೃದ್ಧಿ ಯೋಜನೆಗಳನ್ನು ಕುರಿತ ನೇರ ಫೋನ್-ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ-ಮೈಸೂರಿನ ಮೀನುಗಾರಿಕಾ ಇಲಾಖೆಯ ಉಪನಿರ್ದೇಶಕರಾದ ಜಿ.ಹೆಚ್. ಮಂಜುನಾಥ್ ಮತ್ತು ಕೆ. ಆರ್. ನಗರ ತಾಲೂಕು ಮೀನುಗಾರಿಕಾ ಸಹಾಯಕ ನಿರ್ದೇಶಕರಾದ ಹೆಚ್.ವಿ.ಶಿವರಂಜನ್, ಪ್ರಸ್ತುತಿ - ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್-ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಬಿ. ದಿಗ್ವಿಜಯ್, 8.00 ಸಂಸತ್ ಸಮೀಕ್ಷಾ, 8.15 ನಾಟಕ-ಬಯಲಾಟ, ರಚನೆ-ಅಲಕ ಕಟ್ಟೆಮನೆ, ನಿರ್ಮಾಣ ಮತ್ತು ನಿರ್ದೇಶನ-ಪ್ರಭುಸ್ವಾಮಿ ಮಳಿಮಠ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ-ಚಿಟ್ಟಿಬಾಬು - ವೀಣಾವಾದನ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

■ **ಜನಚೈತನ್ಯ ಫೌಂಡೇಷನ್ :** ಓ ನನ್ನ ಚೇತನ ಆಗು ನೀ ಅನಿಕೇತನ... ಭಾವಗೀತೆ ಮತ್ತು ಜನಪದ ಗೀತೆ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ. ನಾಗರಾಜು ವಿ. ಬೈರಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎನ್. ಚೆಲುವರಾಜು, ಸಾಹಿತಿ ವಿಜಯಚಂದ್ರ ಮೌಳೇಶ್ವರ್, ಶ್ರೀಮತಿ ಪ್ರತಿಮಾ ಅರುಣ್, ಪ್ರಾಸ್ತಾವಿಕ ನುಡಿ : ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4.30 ರಿಂದ.

■ **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗ ಸಮಾಜದ ಸದಸ್ಯ ಎಚ್.ಎಸ್. ಸುರೇಶ್‌ಬಾಬು, ನಿರ್ದೇಶಕ ಆಶಿಫ್ ಕ್ಷತ್ರಿಯ, ನಿರ್ದೇಶಕಿ ಶ್ವೇತಾ ಶ್ರೀನಿವಾಸ್, ರಂಗಭೂಮಿ ನಿರ್ದೇಶಕ ದೀಪಕ್ ಮೈಸೂರು. ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30ರಿಂದ.

ಸಿಎಂ ಸಿದ್ದರಾಮಯ್ಯರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದ ಜಿಟಿಡಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 78ನೇ ಹುಟ್ಟುಹಬ್ಬದ ಪ್ರಯುಕ್ತ ಬೆಂಗಳೂರಿನ ಅವರ ನಿವಾಸದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಸಹಕಾರ ಮಹಾಮಂಡಲದ ಅಧ್ಯಕ್ಷ ಜಿ.ಟಿ. ದೇವೇಗೌಡರು ಶಾಲು ಹೊದಿಸಿ, ಫಲ-ಪುಷ್ಪ, ತಾಂಬೂಲ ನೀಡಿ ಸನ್ಮಾನಿಸಿ, ಶುಭಾಶಯ ಕೋರಿದರು.

ಜಾರ್ಖಂಡ್ ಮಾಜಿ ಸಿಎಂ ಶಿಬು ಸೋರೇನ್ ನಿಧನ



ನವದೆಹಲಿ: ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನಾಯಕ ಶಿಬು ಸೊರೇನ್ ಅವರು ಸೋಮವಾರ ನಿಧನರಾಗಿದ್ದಾರೆ.

ಮೂತ್ರಪಿಂಡ ಸಂಬಂಧಿತ ಸಮಸ್ಯೆಯಿಂದ ಬಳಲುತ್ತಿದ್ದ ಸೋರೇನ್ ಅವರನ್ನು ಜೂನ್ ಕೊನೆಯ ವಾರದಲ್ಲಿ ದೆಹಲಿಯ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಅಂದಿನಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಇಂದು ಇಹಲೋಕ ತ್ಯಜಿಸಿದ್ದಾರೆ.

ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಸ್ಥಾಪಕ ಪೋಷಕರಾಗಿರುವ ಶಿಬು ಸೊರೇನ್ 38 ವರ್ಷಗಳ ಕಾಲ ಪಕ್ಷವನ್ನು ಮುನ್ನಡೆಸಿದ್ದರು. ಅಲ್ಲದೆ ಜಾರ್ಖಂಡ್‌ನಲ್ಲಿ ಮೂರೂ ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

2005 ರಲ್ಲಿ ಮೊದಲ ಬಾರಿಗೆ 10 ದಿನಗಳ ಕಾಲ ಸೇವೆ ಸಲ್ಲಿಸಿದ್ದರೆ ನಂತರ 2008 ರಿಂದ 2009 ರವರೆಗೆ ಎರಡನೇ ಬಾರಿ ಮುಖ್ಯಮಂತ್ರಿಯಾದರೆ, 2009 ರಿಂದ 2010 ರವರೆಗೆ ಮೂರನೇ ಬಾರಿ ಮುಖ್ಯಮಂತ್ರಿಯಾಗಿ ರಾಜ್ಯವನ್ನು ಮುನ್ನಡೆಸಿದ್ದರು.

ಶಿಬು ಸೊರೇನ್ ನಿಧನದ ಶೋಕಾಚರಣೆ ಹಿನ್ನೆಲೆ

ಮತಗಳ್ಳತನ ವಿರುದ್ಧದ ರಾಹುಲ್ ಗಾಂಧಿ ಪ್ರತಿಭಟನಾ ಸಭೆ ಆ.8ಕ್ಕೆ ಮುಂದೂಡಿಕೆ



ಬೆಂಗಳೂರು, ಆ. 4(ಕೆಎಂಶಿ)- ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ನಿಧನಕ್ಕೆ ಮೂರು ದಿನಗಳ ಶೋಕಾಚರಣೆ ಹಿನ್ನೆಲೆಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದ ಮತಗಳ್ಳತನ ವಿರುದ್ಧದ ಪ್ರತಿಭಟನಾ ಸಭೆಯನ್ನು ಆಗಸ್ಟ್ 8ಕ್ಕೆ ಮುಂದೂಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಬು ಸೊರೇನ್ ಪಾರ್ಥಿವ ಶರೀರದ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಹಿನ್ನೆಲೆಯಲ್ಲಿ ಶೋಕಾಚರಣೆ ದಿನ ದೇಶಕ್ಕೆ ಸಂದೇಶ ನೀಡುವ ಕಾರ್ಯಕ್ರಮ ಬೇಡ ಎಂದು ನಿರ್ಧರಿಸಿ, ತೀರ್ಮಾನ ಕೈಗೊಳ್ಳಲಾಗಿದೆ. ಈ ತಿಂಗಳ 8ರಂದು ಅದೇ ಸ್ಥಳ ಹಾಗೂ ಸಮಯಕ್ಕೆ ಕಾರ್ಯಕ್ರಮ ನಡೆಯಲಿದೆ ಎಂದರು. ಕಾಂಗ್ರೆಸ್ ಪ್ರತಿಭಟನೆಗೆ ಪ್ರತಿಯಾಗಿ ಬಿಜೆಪಿ ಚುನಾವಣಾ ಆಯೋಗದ ಪರ ಹೋರಾಟ ನಡೆಸುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟಿಸುವವರು, ಟೀಕಿಸುವವರನ್ನು ಸ್ವಾಗತಿಸುತ್ತೇವೆ. ಅವರು ಏನು ಹೇಳಬೇಕೋ ಹೇಳಲಿ, ಚುನಾವಣಾ ಆಯೋಗ ಸರ್ಕಾರದ ಭಾಗವಾಗಿದೆ.

ಚುನಾವಣಾ ಆಯೋಗ ನಿಷ್ಪಕ್ಷಪಾತ ಹಾಗೂ ನ್ಯಾಯಪೀಠ ಸ್ಥಾನದಲ್ಲಿ ಇರಬೇಕು. ಅನ್ಯಾಯ ಆಗಬಾರದು, ಎಲ್ಲರಿಗೂ ನ್ಯಾಯ ಸಿಗಬೇಕು ಎಂಬುದೇ ನಮ್ಮ ಆಶಯ. ಕಾರ್ಯಕ್ರಮದ ಉದ್ದೇಶಕ್ಕೆ ಬೆಂಗಳೂರಿಗೆ ಆಗಮಿಸುತ್ತಿರುವ ಶಾಸಕರ ಜೊತೆ ಚರ್ಚೆ ಮಾಡಲು ನಾಯಕರು ಹೇಳಿದ್ದಾರೆ ಎಂದರು.

ದಸರಾ ಪ್ರಾರಂಭಿಸಿದ್ದು ಟಿಪ್ಪು ಎಂದು ಹೇಳಿಬಿಡಿ ಮಹದೇವಪ್ಪನವರೇ...

ಕೆಆರ್‌ಎಸ್ ಅಣೆಕಟ್ಟೆಗೆ ಟಿಪ್ಪು ಅಡಿಗಲ್ಲಾಕಿದ್ದ ಹೇಳಿಕೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ತಿರುಗೇಟು



ಮೈಸೂರು, ಆ.4- ದಸರಾ ಪ್ರಾರಂಭ ಮಾಡಿದ್ದು ಕೂಡ ಟಿಪ್ಪುಸುಲ್ತಾನ್ ಎಂದು ಹೇಳಿಬಿಡಿ, ಮೈಸೂರಿನ ಜನ ಧನ್ಯರಾಗುತ್ತಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ತಿರುಗೇಟು ನೀಡಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆಗೆ ಅಡಿಗಲ್ಲು ಇಟ್ಟಿದ್ದೇ ಟಿಪ್ಪು ಎಂಬ ಡಾ.ಮಹದೇವಪ್ಪ ಅವರ ಹೇಳಿಕೆ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕಳೆದ ವಾರ ಡಾ.ಯತೀಂದ್ರ ನಾಲ್ವಡಿ ಅವರಿಗಿಂತ ನಮ್ಮಪ್ಪನೇ ದೊಡ್ಡ ವ್ಯಕ್ತಿ ಎಂಬ ಹೇಳಿಕೆ ಕೊಟ್ಟರು. ಈ ವಾರ ಡಾ.ಮಹದೇವಪ್ಪನವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮನೆ ಮಂದಿಯ ಒಡವೆಯನ್ನು ಅಡವಿಟ್ಟು ಕಟ್ಟಿದ ಕನ್ನಂಬಾಡಿ ಅಣೆಕಟ್ಟೆಗೆ ಅಡಿಗಲ್ಲು ಇಟ್ಟವನು ಟಿಪ್ಪು ಎಂದಿದ್ದಾರೆ. ಜೂನಿಯರ್ ಡಾಕ್ಟರ್ ಹೊಸ ಇತಿಹಾಸ ಬರೆಯಲು ಹೊರಟರೆ, ಸೀನಿಯರ್ ಡಾಕ್ಟರ್ ಇತಿಹಾಸ ತಿರುಚಲು ಮುಂದಾಗಿದ್ದಾರೆ ಎಂದು ವ್ಯಂಗ್ಯವಾಡಿದರು.

ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಸಂಸದ ರಾಘವೇಂದ್ರ ಅವರ ಪರಿಶ್ರಮದಿಂದ ನಿರ್ಮಾಣವಾಗಿ ಇತ್ತೀಚೆಗಷ್ಟೇ ಉದ್ಘಾಟನೆಯಾದ ಸಿಗಂಧೂರು ಸೇತುವೆಗೂ ಡಿಪಿಆರ್ ಮಾಡಿದ್ದು ನಾವೇ ಎಂದು ಕ್ರೆಡಿಟ್ ಪಡೆಯಲು ಪ್ರಯತ್ನಿಸಿದಿರಿ. ಡಿಪಿಆರ್ ಇಲ್ಲದೆ ಏನನ್ನೂ ಕಟ್ಟಲಾಗುವುದಿಲ್ಲ. ಹಾಗಾದರೆ ಟಿಪ್ಪು ಕನ್ನಂಬಾಡಿಗೆ ಅಡಿಗಲ್ಲು ಇಟ್ಟಿದ್ದು ನಿಜವಾದರೆ ಅದಕ್ಕೆ ಡಿಪಿಆರ್ ಮಾಡಿದ್ದು ಯಾರು?. ಅವರ ಹೆಸರನ್ನೂ ಹೇಳಿದರೆ ಹೊಸ ಇತಿಹಾಸದ ಬಗ್ಗೆ ಜನರಿಗೆ ಜ್ಞಾನಾರ್ಜನೆಯಾದಂತಾಗುತ್ತದೆ. ನಿಮ್ಮಿಂದ ಈ ಹೇಳಿಕೆಯನ್ನು ನಿರೀಕ್ಷೆ ಮಾಡಿರಲಿಲ್ಲ ಎಂದರು.

ಟಿಪ್ಪು ಇದ್ದಾಗ ವಿಶ್ವೇಶ್ವರಯ್ಯನವರು ಹುಟ್ಟೇ ಇರಲಿಲ್ಲ. ನಾಲ್ವಡಿ ಅವರಂತಹ ಜನಾನುರಾಗಿ ದೊರೆ ಹಾಗೂ ವಿಶ್ವೇಶ್ವರಯ್ಯ ಅವರಂತಹ ಜಗದ್ವಿಖ್ಯಾತ ಇಂಜಿನಿಯರ್ ಇಲ್ಲದಿದ್ದರೆ ಕನ್ನಂಬಾಡಿ ಕಟ್ಟೆ ನಿರ್ಮಾಣ ಸಾಧ್ಯವಾಗುತ್ತಿರಲಿಲ್ಲ. ಟಿಪ್ಪು 1799ರಲ್ಲೇ ಮೃತಪಟ್ಟರು. ಅಣೆಕಟ್ಟೆ ನಿರ್ಮಾಣ ಪ್ರಾರಂಭ ಮಾಡಿದ್ದು 1911ರಲ್ಲಿ. ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಯಾರು ಏನು ಮಾಡುತ್ತಿದ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಬರೆಯುವುದಕ್ಕಿಂತ ಸಾಕಷ್ಟು ಮೊದಲೇ ದಲಿತ ಸಮುದಾಯಕ್ಕೆ ಮೀಸಲಾತಿ ಕೊಟ್ಟು ದೇಶಕ್ಕೆ ಮಾದರಿಯಾದ ನಾಲ್ವಡಿ ಅವರ ಬಗ್ಗೆ ನಿಮಗ್ಯಾಕಿಷ್ಟು ಕೋಪ. ಇಂತಹ ದೊಡ್ಡ ವ್ಯಕ್ತಿ ಮೇಲೂ ಯಾಕೆ ದ್ವೇಷ ಕಾರುತ್ತಿದ್ದೀರಿ ಎಂದು ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯನವರೇ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಾಯ್ದೆ ತರುತ್ತೇನೆಂದು ಹೇಳುತ್ತಲೇ ಇದ್ದೀರಿ. ದಯವಿಟ್ಟು ಆದಷ್ಟು ಬೇಗ ಕಾಯ್ದೆ ತನ್ನಿ. ಸುಳ್ಳು ಹೇಳುತ್ತಿರುವ ಡಾ.ಮಹದೇವಪ್ಪ, ಡಾ.ಯತೀಂದ್ರ, ಸಂತೋಷ್ ಲಾಡ್, ಪ್ರಿಯಾಂಕ ಖರ್ಗೆ ಮೇಲೆ ಮೊದಲ ಕೇಸ್ ಹಾಕಿ. ಆಗ ಸುಳ್ಳು ಹೇಳುವ, ಇತಿಹಾಸ ತಿರುಚುವ ಪ್ರಯತ್ನಗಳು ನಿಲ್ಲುತ್ತವೆ. ನಿಮ್ಮ ಮಗ, ಕ್ಯಾಬಿನೆಟ್ ಸದಸ್ಯರು ಮಹಾರಾಜರ ವಿರುದ್ಧ ಹೇಳಿಕೆ ನೀಡಿ, ಅವರ ಕೊಡುಗೆಯನ್ನೇ ಅಲ್ಲಗಳೆಯುತ್ತಿರುವುದನ್ನು ನೋಡಿದರೆ ನಿಮಗೆ ರಕ್ತಗತವಾಗಿ ದ್ವೇಷ ಬಂದಿದೆ. ಅದರ ಮೇಲೇ ರಾಜಕಾರಣ ಮಾಡುತ್ತಿದ್ದೀರಿ ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಮೈಸೂರಿನ ಜನ ಸಹಿಸುವುದಿಲ್ಲ ಎಂದು ಕಿಡಿಕಾರಿದ್ದಾರೆ.

ಮೈಸೂರಿಗೆ ಬಂದಿಳಿದ ದಸರಾ ಆನೆಗಳು

ಅರಣ್ಯ ಭವನ ಆವರಣದಲ್ಲಿ ರಿಲ್ಯಾಕ್ಸ್ ಮೂಡ್‌ಗೆ ಜಾರಿದ ಗಜಪಡೆಯ ಮೊದಲ ತಂಡ

ಗಜಪಡೆಯ ಗತ್ತು ಗಾಂಭೀರ್ಯ ಕಂಡು ಸಂಭ್ರಮಿಸಿದ ಜನಸ್ತೋಮ



ಅರಣ್ಯ ಭವನ ಆವರಣದಲ್ಲಿ ಸಾಗುತ್ತಿರುವ ಅಭಿಮನ್ಯು



ಲಾರಿಯಲ್ಲಿ ಅರಣ್ಯ ಭವನಕ್ಕೆ ಬಂದ ಗಜರಾಜ

ಮೈಸೂರು,ಆ.4(ಪಿಎಂ)- ಗಜಪಡೆಯ ಗತ್ತು ಗಾಂಭೀರ್ಯ ಕಂಡು ಸಂಭ್ರಮಿಸಿದ ಜನಸ್ತೋಮ... ಹೌದು, ದಸರಾ ಮಹೋತ್ಸವದ ಕೇಂದ್ರ ಬಿಂದುವೇ ಆದ ಗಜಪಡೆಯ ಮೊದಲ ತಂಡ ಸೋಮವಾರ ಸಂಜೆ ವೇಳೆಗೆ ಮೈಸೂರಿಗೆ ಆಗಮಿಸಿದ ಕ್ಷಣಗಳ ಸಡಗರವಿದು.

ಲಾರಿಗಳಲ್ಲಿ ತಲಾ ಒಂದರಂತೆ ಕರೆತರುತ್ತಿದ್ದ ಆನೆಗಳನ್ನು ನೋಡಲು ರಸ್ತೆಬದಿಗಳಲ್ಲಿ ಸಾಲಾಗಿ ಸೇರಿದ್ದವರಲ್ಲಿ ಮಕ್ಕಳ ಸಂಭ್ರಮ ವಿಶೇಷವಾಗಿ ಗಮನ ಸೆಳೆಯಿತು. ಬೃಹತ್ ಗಾತ್ರದ ಆನೆಗಳನ್ನು ಕಂಡು ಚಿಣ್ಣರು ಸಂಭ್ರಮಿಸಿದರು. ಹುಣಸೂರು ತಾಲೂಕು ವೀರನಹೊಸಳ್ಳಿಯಲ್ಲಿ ಸೋಮವಾರ ಬೆಳಗ್ಗೆ ಗಜಪಯಣ ಸಮಾರಂಭದಲ್ಲಿ ಪೂಜಾ ವಿಧಿವಿಧಾನ ಸ್ವೀಕರಿಸಿದ ಗಜಪಡೆಯು, ಬಳಿಕ ಲಾರಿಗಳನ್ನೇರಿ ಸಂಜೆ ವೇಳೆಗೆ ಸುರಕ್ಷಿತವಾಗಿ ಮೈಸೂರಿಗೆ ಆಗಮಿಸಿದವು.

ನಂತರ ಇಲ್ಲಿನ ಅರಣ್ಯ ಭವನ ಆವರಣದಲ್ಲಿ ಜನದಟ್ಟಣೆ ನಡುವೆಯೂ ಯಾವುದೇ ಅಳುಕು-ಅಂಜಿಕೆ ಇಲ್ಲದೆ ಅಭಿಮನ್ಯು ನೇತೃತ್ವದ ಎಲ್ಲಾ 9 ಆನೆಗಳು ಸುರಕ್ಷಿತವಾಗಿ ಲಾರಿಗಳಿಂದ ಇಳಿದವು. ಇಲ್ಲಿ ಸಜ್ಜುಗೊಳಿಸಿದ್ದ ಜಾಗದಲ್ಲಿ ತಮ್ಮ ಮಾವುತ ಹಾಗೂ ಕಾವಾಡಿಗಳೊಂದಿಗೆ ವಿಶ್ರಾಂತಿಗೆ ಜಾರಿದವು.

ಪೊಲೀಸ್ ಹಾಗೂ ಅರಣ್ಯ ಇಲಾಖೆಯ ಬೆಂಗಾವಲು ವಾಹನಗಳೊಂದಿಗೆ ಲಾರಿಗಳಲ್ಲಿ ಆನೆಗಳನ್ನು ಸುರಕ್ಷಿತವಾಗಿ ಕರೆತರಲಾಯಿತು. ಹುಣಸೂರು ರಸ್ತೆ ಮೂಲಕ ಮೈಸೂರು ನಗರಕ್ಕೆ ಪ್ರವೇಶ ಪಡೆದ ಆನೆಗಳನ್ನು ಹೊತ್ತ ಲಾರಿಗಳು ರಸ್ತೆಗಳಲ್ಲಿ ಸಾಗುತ್ತಿದ್ದರೆ ಅವುಗಳನ್ನು ನೋಡಲು ಜನರ ದಂಡೇ ನೆರೆದಿತ್ತು.

ಕೃಷ್ಣರಾಜ ಬುಲೇವಾರ್ಡ್ ರಸ್ತೆ ಮೂಲಕ ಅಶೋಕಪುರಂನಲ್ಲಿರುವ ಅರಣ್ಯ ಇಲಾಖೆಯ ಅರಣ್ಯ ಭವನ ಆವರಣ ತಲುಪುತ್ತಿದ್ದಂತೆ ಇಲ್ಲಿಯೂ ನೆರೆದಿದ್ದ ಜನಸ್ತೋಮವು ಕೌತುಕದ ಕಣ್ಣುಗಳಿಂದ ಆನೆಗಳನ್ನು ನೋಡಿ ಸಂಭ್ರಮಿಸಿತು. ಅಲ್ಲದೆ, ಇಲ್ಲಿ ನೆರೆದಿದ್ದ ಜನತೆ ತಮ್ಮ ಮೊಬೈಲ್ ಕ್ಯಾಮರಾಗಳಲ್ಲಿ ಅವುಗಳನ್ನು ಚಿತ್ರೀಕರಿಸಿ ಸಂತಸಪಟ್ಟರು. ಜೊತೆಗೆ ದಾರಿಯುದ್ದಕ್ಕೂ ಅಸಂಖ್ಯಾತ ಜನರ ಮೊಬೈಲ್ ಕ್ಯಾಮರಾಗಳಲ್ಲಿ ಗಜಪಡೆ ಸೆರೆಯಾಯಿತು.

ರಿಲ್ಯಾಕ್ಸ್ ಮೂಡ್‌ಗೆ ಗಜಪಡೆ: ಅರಣ್ಯ ಭವನ ಆವರಣದಲ್ಲಿ ಸದ್ಯ ರಿಲ್ಯಾಕ್ಸ್ ಮೂಡ್‌ಗೆ ಜಾರಿರುವ ಗಜಪಡೆಗೆ ಅರಣ್ಯ ಇಲಾಖೆ ವಿಶೇಷ ಕಾಳಜಿ ವಹಿಸಿ ತಾಲೀಮಿಗೆ ಸಜ್ಜುಗೊಳಿಸಲು ಸಿದ್ಧತೆ ನಡೆಸಿದೆ. ಇಲ್ಲಿ ವಾಸ್ತವ್ಯ ಹೂಡಿರುವ ಗಜಪಡೆಗೆ ನಿಗದಿಗೊಳಿಸುವ ದಿನದಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ವಿಜೃಂಭಣೆಯಿಂದ ಅರಮನೆಗೆ ಬೀಳ್ಕೊಡಲಾಗುತ್ತದೆ. ನಂತರ ಕಾಲ್ನಡಿಗೆಯಲ್ಲಿ ಅರಮನೆಯತ್ತ ಸಾಗುವ ಗಜಪಡೆಗೆ ಜಿಲ್ಲಾಡಳಿತದಿಂದ ಅರಮನೆ ಜಯಮಾರ್ತಾಂಡ ದ್ವಾರದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸ್ವಾಗತಿಸಲಾಗುತ್ತದೆ. ಈಗಾಗಲೇ ಅರಮನೆ ಆವರಣದಲ್ಲಿ ಗಜಪಡೆ ವಾಸ್ತವ್ಯಕ್ಕಾಗಿ ಶೆಡ್‌ಗಳನ್ನು ನಿರ್ಮಿಸಲಾಗಿದ್ದು, ಅರಮನೆ ಆವರಣಕ್ಕೆ ತಲುಪಿದ ನಂತರದ ದಿನಗಳಲ್ಲಿ ಗಜಪಡೆಗೆ ಜಂಬೂಸವಾರಿ ಮೆರವಣಿಗೆಯ ತಾಲೀಮು ಶುರುವಾಗಲಿದೆ. ಈಗ ಬಂದಿರುವ 9 ಆನೆಗಳು ಸೇರಿದಂತೆ ಎರಡನೇ ತಂಡದಲ್ಲಿ ಆಗಮಿಸುವ 5 ಆನೆಗಳು ಒಳಗೊಂಡಂತೆ ಒಟ್ಟು 14 ಆನೆಗಳು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಆಕರ್ಷಿಸಲಿವೆ.

ಸುರಕ್ಷಿತವಾಗಿ ಇಳಿದವು: ಎಲ್ಲಾ ಆನೆಗಳು ಸುರಕ್ಷಿತವಾಗಿ ಲಾರಿಯಿಂದ ಇಳಿದವು. ಬೃಹದಾಕಾರದ ಆನೆಗಳನ್ನು ಲಾರಿಗಳಿಂದ ಎಲ್ಲಾ ಸುರಕ್ಷಿತ ಕ್ರಮಗಳೊಂದಿಗೆ ಅರಣ್ಯ ಭವನದ ಆವರಣದಲ್ಲಿ ಇಳಿಸಲಾಯಿತು. ಇಲ್ಲಿನ ಉದ್ಯಾನವನದ ಕಾಂಕ್ರೀಟ್ ಮೆಟ್ಟಿಲುಗಳ ಮೇಲೆ ಹೆಜ್ಜೆ ಹೂರುವಂತೆ ಮಾಡಿ ಅತ್ಯಂತ ಜಾಗರೂಕತೆಯಿಂದ ಎಲ್ಲಾ ಆನೆಗಳನ್ನು ಕೆಳಗಿಳಿಸಲಾಯಿತು.

ಮೊದಲ ತಂಡದಲ್ಲಿ ಆಗಮಿಸಿದ ಗಂಡಾನೆಗಳಾದ ಅಭಿಮನ್ಯು, ಧನಂಜಯ, ಭೀಮ, ಕಂಜನ್, ಏಕಲವ್ಯ, ಪ್ರಶಾಂತ, ಮಹೇಂದ್ರ, ಹೆಣ್ಣಾನೆಗಳಾದ ಕಾವೇರಿ, ಬಳ್ಳೆ ಲಕ್ಷ್ಮಿಯನ್ನು ಸುರಕ್ಷಿತ ಹಾಗೂ ಸುಸೂತ್ರವಾಗಿ ಲಾರಿಗಳಿಂದ ಕೆಳಕ್ಕೆ ಇಳಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಯಿತು. ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ ಸೇರಿದಂತೆ ಅಧಿಕಾರಿಗಳು ಸ್ಥಳದಲ್ಲಿದ್ದು, ಆನೆಗಳನ್ನು ಸುರಕ್ಷಿತವಾಗಿ ಬರಮಾಡಿಕೊಂಡರು.

ಅಭಿಮನ್ಯು ಜೊತೆಗೆ ಪ್ರಶಾಂತ, ಮಹೇಂದ್ರ, ಧನಂಜಯ ಆನೆಗಳಿಗೂ ಅಂಬಾರಿ ತಾಲೀಮು

ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ



ಮೈಸೂರು,ಆ.4(ಪಿಎಂ)- ಈ ಬಾರಿಯೂ ಅಂಬಾರಿ ಆನೆ ಅಭಿಮನ್ಯು. ಇದರ ಜೊತೆಗೆ ಪ್ರಶಾಂತ, ಮಹೇಂದ್ರ ಮತ್ತು ಧನಂಜಯ ಆನೆಗಳಿಗೂ ಅಂಬಾರಿ ತಾಲೀಮು ನಡೆಸಲಾಗುವುದು ಎಂದು ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ ತಿಳಿಸಿದರು.

ಅರಣ್ಯ ಭವನ ಆವರಣಕ್ಕೆ ದಸರಾ ಗಜಪಡೆಯ ಮೊದಲ ತಂಡದ ಆನೆಗಳ ಆಗಮಿಸಿದ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಈ ಬಾರಿಯೂ ಅಂಬಾರಿ ಆನೆ ಅಭಿಮನ್ಯುವೇ ಆಗಿದೆ. ಅದರಲ್ಲಿ ಯಾವುದೇ ಸಂಶಯವಿಲ್ಲ. ಪ್ರತಿವರ್ಷ ನಾವು 3ರಿಂದ 4 ಆನೆಗಳನ್ನು ಇದಕ್ಕೆ ಪರ್ಯಾಯವಾಗಿ ಸಿದ್ಧತೆ ಮಾಡಿಕೊಂಡಿರುತ್ತೇವೆ. ಅದೇ ರೀತಿಯಲ್ಲಿ ಪ್ರಶಾಂತ, ಮಹೇಂದ್ರ ಮತ್ತು ಧನಂಜಯ ಆನೆಗಳಿಗೂ ಅಂಬಾರಿ ಹೊರುವ ತಾಲೀಮು ಮಾಡಿಸಲಾಗುತ್ತದೆ ಎಂದು ತಿಳಿಸಿದರು.

ಎಲ್ಲಾ ಆನೆಗಳೂ ಆರೋಗ್ಯವಾಗಿವೆ. ಯಾವುದೇ ತೊಂದರೆ ಇಲ್ಲ. ಈ ವರ್ಷವೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಪರೀಕ್ಷೆಗಳನ್ನು ಆನೆಗಳಿಗೆ ನಡೆಸಲಾಗಿದೆ. ಒಟ್ಟು 14 ಆನೆಗಳು ದಸರಾದಲ್ಲಿ ಪಾಲ್ಗೊಳ್ಳಲಿದ್ದು, ಅದರಲ್ಲಿ ಮೊದಲ ತಂಡದಲ್ಲಿ ಇಂದು 9 ಆನೆಗಳು ಬಂದಿವೆ. ಎರಡನೇ ತಂಡದಲ್ಲಿ 5 ಆನೆಗಳು ಬರಲಿವೆ. ಆ.8ರಿಂದ ಆನೆಗಳಿಗೆ ವಿಶೇಷ ಆಹಾರ ನೀಡುವ ಪ್ರಕ್ರಿಯೆ ಆರಂಭಿಸಲು ಉದ್ದೇಶಿಸಲಾಗಿದೆ. ಅರಮನೆ ತಲುಪಿ ಅವುಗಳ ತೂಕ ಪರಿಶೀಲನೆ ಬಳಿಕ ಈ ವಿಶೇಷ ಆಹಾರ ನೀಡುವ ಪ್ರಕ್ರಿಯೆ ಆರಂಭಿಸಲಿದ್ದೇವೆ. ಬಹುಶಃ ಆ.8ರ ಬೆಳಗ್ಗೆ ತೂಕ ಪರಿಶೀಲನೆ ಪ್ರಕ್ರಿಯೆ ನಡೆಯಬಹುದು ಎಂದರು.

ಈಗ ಬಂದಿರುವ ಎಲ್ಲಾ 9 ಆನೆಗಳು ಈಗಾಗಲೇ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಅನುಭವ ಹೊಂದಿವೆ. ಕಾವೇರಿ ಕಳೆದ ಬಾರಿ ಬಂದಿರಲಿಲ್ಲ. ಆದರೆ ಅದಕ್ಕೂ ಹಿಂದಿನ ವರ್ಷಗಳಲ್ಲಿ ಜಂಬೂಸವಾರಿಯಲ್ಲಿ ಅದು ಭಾಗವಹಿಸಿತ್ತು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಡ್ರಗ್ಸ್ ಫ್ಯಾಕ್ಟ್ರಿ ಇಂಪ್ಯಾಕ್ಟ್: ಮತ್ತೊಬ್ಬ ಸಿಬ್ಬಂದಿ ಅಮಾನತು

ಮೈಸೂರು, ಆ.4- ಮಾದಕ ವಸ್ತು ಕಾರ್ಯಾಚರಣೆ ವೇಳೆ ಅಶಿಸ್ತು ಹಾಗೂ ಕರ್ತವ್ಯಲೋಪವೆಸಗಿದ ಆರೋಪದಡಿ ಸಿಬ್ಬಂದಿಯೊಬ್ಬರನ್ನು ಅಮಾನತುಗೊಳಿಸಲಾಗಿದೆ.

ದೇವರಾಜ ಎಸಿಪಿ ಸ್ಕ್ವಾಡ್ ಸಿಬ್ಬಂದಿ ಪ್ರದೀಪ್ ಅವರನ್ನು ಅಮಾನತುಗೊಳಿಸಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶಿಸಿದ್ದಾರೆ.

ಎನ್.ಆರ್.ಪೊಲೀಸ್ ಠಾಣೆ ವ್ಯಾಪ್ತಿಯ ಬೆಲವತ್ತ ಬಳಿ ಡ್ರಗ್ಸ್ ಫ್ಯಾಕ್ಟ್ರಿ ಪತ್ತೆಯಾದ ಬಳಿಕ ಪೊಲೀಸರು ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಈ ವೇಳೆ ಪ್ರದೀಪ್ ಕೆಲ ಮಾಹಿತಿಯನ್ನು ಮರೆಮಾಚಿದ್ದರು ಎನ್ನಲಾಗಿದೆ. ಆದರೆ ಈ ಬಗ್ಗೆ ಸ್ಪಷ್ಟನೆಗೆ ಮೇಲಧಿಕಾರಿಗಳ ಸಂಪರ್ಕ ಸಾಧ್ಯವಾಗಲಿಲ್ಲ.

ಡ್ರಗ್ಸ್ ಫ್ಯಾಕ್ಟರಿ ಪತ್ತೆಯಾದ ಬೆನ್ನಲ್ಲೇ ಎನ್.ಆರ್.ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್ ಅವರನ್ನು ಅಮಾನತುಗೊಳಿಸಿ, ಮರುದಿನವೇ ಅಮಾನತು ಆದೇಶ ಹಿಂಪಡೆಯಲಾಯಿತು. ನಂತರ ಬನ್ನಿಮಂಟಪ ಗಸ್ತು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿ ಅನಿಲ್ ಹಾಗೂ ಆಂಜನೇಯ ಅಮಾನತುಗೊಂಡರು.

ಆ.9, ಇಸ್ಕಾನ್‌ನಲ್ಲಿ ಬಲರಾಮ ಜಯಂತಿ

ಮೈಸೂರು,ಆ.4-ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಆ.9ರಂದು ಬಲರಾಮ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಯಂತಿ ಪ್ರಯುಕ್ತ ಅಂದು ಮಧ್ಯಾಹ್ನದವರೆಗೆ ಉಪವಾಸ ವ್ರತ ಪಾಲಿಸುವುದರೊಂದಿಗೆ, ದೇವಸ್ಥಾನದಲ್ಲಿ ವಿಶೇಷ ಕಾರ್ಯಕ್ರಮಗಳ ಆಯೋಜಿಸಲಾಗಿದೆ. ಸಂಜೆ 6 ಗಂಟೆಯಿಂದ ಶ್ರೀಧಾಮ ಹಾಲ್‌ನಲ್ಲಿ ಕೃಷ್ಣ-ಬಲರಾಮರ ವಿಗ್ರಹಗಳಿಗೆ ಮಹಾಭಿಷೇಕ, ಪುಷ್ಪಾರ್ಚನೆಯೊಂದಿಗೆ ಮಂಗಳಾರತಿ ಹಾಗೂ ಸುಶ್ರಾವ್ಯ ಕೀರ್ತನೆಗಳನ್ನು ಹಾಡಲಾಗುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಶ್ರೀ ಕೃಷ್ಣ-ಬಲರಾಮರ ಕೃಪೆಗೆ ಪಾತ್ರರಾಗಬೇಕೆಂದು ದೇವಾಲಯದ ವ್ಯವಸ್ಥಾಪಕರು ಕೋರಿದ್ದಾರೆ.

ವನ್ಯಜೀವಿ ಸಂರಕ್ಷಣೆಗೆ ಕೈಜೋಡಿಸಲು ಅರಣ್ಯ ಸಚಿವರ ಮನವಿ



ಗಜಪಯಣದ ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆ ವತಿಯಿಂದ ಮೊದಲ ತಂಡದ 9 ಆನೆಗಳ ಮಾವುತರು, ಕಾವಾಡಿಗಳನ್ನು ಸನ್ಮಾನಿಸಲಾಯಿತು.

ವೀರನಹೊಸಹಳ್ಳಿ, ಆ.4(ಎಂಟಿವೈ)- ದಸರಾ ಜಂಬೂಸವಾರಿಯಲ್ಲಿ ಸಾಗುವ ಅಲಂಕೃತ ಗಜಪಡೆ ಹಾಗೂ ವಿವಿಧ ಸಫಾರಿ ವಲಯದಲ್ಲಿ ವನ್ಯಜೀವಿಗಳನ್ನು ನೋಡಿ ಆನಂದಿಸುವ ನಾವು ವನ್ಯಜೀವಿ ಸಂರಕ್ಷಣೆಗೆ ಕೈಜೋಡಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಮನವಿ ಮಾಡಿದ್ದಾರೆ.

ಹುಣಸೂರು ತಾಲೂಕಿನ ವೀರನಹೊಸಹಳ್ಳಿಯಲ್ಲಿ ಗಜಪಯಣಕ್ಕೆ ಸಾಂಪ್ರದಾಯಿಕವಾಗಿ ಚಾಲನೆ ನೀಡಿ ಮಾತನಾಡಿದ ಅವರು, ಪ್ರಕೃತಿ ಪರಿಸರದ ಸಮತೋಲನಕ್ಕೆ ವನ್ಯಜೀವಿಗಳು ಅತ್ಯವಶ್ಯಕ. ಅವುಗಳ ರಕ್ಷಣೆಗೆ ನಾವೆಲ್ಲರೂ ಕಟಿಬದ್ಧರಾಗಬೇಕು. ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳನ್ನು ಕಣ್ತುಂಬಿಕೊಳ್ಳಲು ಎಲ್ಲರೂ ಬಯಸುತ್ತಾರೆ. ಅಲ್ಲದೆ, ವಿವಿಧ ಅರಣ್ಯ ಪ್ರದೇಶದಲ್ಲಿ ಸಫಾರಿಗೆ ತೆರಳಿ ವನ್ಯಜೀವಿಗಳನ್ನು ನೋಡಿ ಆನಂದಿಸುತ್ತಾರೆ. ಅದೇ ಉತ್ಸಾಹ ವನ್ಯಜೀವಿಗಳ ಸಂರಕ್ಷಣೆಯಲ್ಲೂ ಇರಬೇಕು. ಅರಣ್ಯ ಇಲಾಖೆಗೆ ಸಹಕಾರ ನೀಡಿ ವನ್ಯಸಂಪತ್ತಿನ ಸಂರಕ್ಷಣೆ ಮಾಡಿ, ಮುಂದಿನ ಪೀಳಿಗೆಗೆ ಕೊಡುಗೆ ನೀಡಬೇಕು ಎಂದರು. ರಾಜ್ಯದ ವಿವಿಧೆಡೆ ಹೊಲ, ತೋಟಗಳ ಬೇಲಿಗೆ ಅಕ್ರಮ ವಿದ್ಯುತ್ ಸಂಪರ್ಕ ಕಲ್ಪಿಸಿರುವುದರಿಂದ ವಿದ್ಯುತ್ ಸ್ಪರ್ಶಿಸಿ ಕಾಡಾನೆಗಳು ಮೃತಪಡುತ್ತಿದ್ದರೆ, ಉರುಳಿಗೆ ಚಿರತೆಗಳು ಸಿಲುಕಿ ಸಾಯುತ್ತಿವೆ. ಇತ್ತೀಚೆಗೆ ಮಲೆ ಮಹದೇಶ್ವರ ಬೆಟ್ಟದ ವನ್ಯಜೀವಿಧಾಮದಲ್ಲಿ ವಿಷ ಪ್ರಾಶನದಿಂದ ಐದು ಹುಲಿಗಳು ಮೃತಪಟ್ಟಿವೆ. ಈ ಭೂಮಿಯಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ವನ್ಯಜೀವಿಗಳ ಜಾಗವನ್ನು ಆಕ್ರಮಿಸಿರುವ ನಾವು ಅವುಗಳನ್ನು ನಿರ್ದಯವಾಗಿ ಕೊಲ್ಲದೆ, ಅವುಗಳ ಸಂರಕ್ಷಣೆಗೆ ಸಂಕಲ್ಪ ಮಾಡ ಬೇಕು ಎಂದು ಹೇಳಿದರು.

ಹೊರರಾಜ್ಯದಿಂದ ಸಾವಿರಾರು ಸಂಖ್ಯೆಯಲ್ಲಿ ದನಕರುಗಳನ್ನು ತಂದು ನಮ್ಮ ರಾಜ್ಯದ ಅರಣ್ಯ ಪ್ರದೇಶದಲ್ಲಿ ಮೇಯಿಸುತ್ತಿರುವುದರಿಂದ ವನ್ಯಜೀವಿಗಳಿಗೆ ಕಾಡಿನಲ್ಲಿ ಆಹಾರ ಲಭಿಸದಂತಾಗಿದೆ. ಹೀಗಾಗಿ ಹೊರರಾಜ್ಯದಿಂದ ತಂದು ದನಕರು ಮೇಯಿಸುವುದನ್ನು ಮಾತ್ರವೇ ನಿಷೇಧಿಸಲು ಕ್ರಮವಹಿಸಲಾಗಿದೆ ಎಂದರು.

ಆನೆ ಸೇರಿದಂತೆ ವನ್ಯಜೀವಿ-ಮಾನವ ಸಂಘರ್ಷ ನಿಯಂತ್ರಣಕ್ಕೆ ಸರ್ಕಾರ ಅನೇಕ ಕ್ರಮ ಕೈಗೊಂಡಿದೆ. ಸೋಲಾರ್ ತಂತಿಬೇಲಿ, ಟೆಂಟಕಲ್ ಫೆನ್ಸಿಂಗ್, ಆನೆ ಕಂದಕಗಳ ಸಮರ್ಪಕ ನಿರ್ವಹಣೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಾನು ಅರಣ್ಯ ಸಚಿವನಾಗುವ ಮೊದಲು 2023ರ ಜೂನ್‌ವರೆಗೆ ರಾಜ್ಯದಲ್ಲಿ 312.918 ಕಿ.ಮೀ ಮಾತ್ರ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗಿತ್ತು. ನಾನು ಸಚಿವನಾದ ಬಳಿಕ ಕಳೆದ 2 ವರ್ಷದಲ್ಲಿ 115.085 ಕಿ.ಮೀ ರೈಲ್ವೆ ಬ್ಯಾರಿಕೇಡ್ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಇನ್ನೂ 193 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಅನುಮೋದನೆ ನೀಡಲಾಗಿದೆ. ಮುಂದಿನ ಒಂದೆರಡು ವರ್ಷದಲ್ಲಿ 500 ಕೋಟಿ ರೂ. ವೆಚ್ಚದಲ್ಲಿ ಅಗತ್ಯವಿರುವ ಅರಣ್ಯದಂಚಿನ ಪ್ರದೇಶದಲ್ಲೂ ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಪ್ರಕೃತಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದ ಅವರು ಅರಣ್ಯವನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಆದಿವಾಸಿಗಳಿಗೆ, ಅರಣ್ಯ ವಾಸಿಗಳ ಸಮಸ್ಯೆಗೆ ಸ್ಪಂದಿಸಲಾಗುವುದು. ಜಂಟಿ ಸಮೀಕ್ಷೆ ನಡೆಸಿ 2015ಕ್ಕೆ ಮೊದಲು ಪಟ್ಟಾ ಜಮೀನೂ ಸೇರಿ 3 ಎಕರೆಗಿಂತ ಕಡಿಮೆ ಅರಣ್ಯ ಭೂಮಿಯಲ್ಲಿ ಉಳಿಮೆ ಮಾಡುತ್ತಿರುವ ಹಾಗೂ ಮನೆ ನಿರ್ಮಿಸಿಕೊಂಡಿರುವವರಿಗೆ ತೊಂದರೆ ನೀಡದಂತೆ ಸೂಚಿಸಲಾಗಿದೆ ಎಂದರು.

ಪೋಸ್ಟರ್ ಬಿಡುಗಡೆ: ಇದೇ ಸಂದರ್ಭದಲ್ಲಿ ಈ ಬಾರಿಯ ದಸರಾದಲ್ಲಿ ಪಾಲ್ಗೊಳ್ಳುವ ಆನೆಗಳ ಕಿರು ಪರಿಚಯದ ಕೈಪಿಡಿ ಮತ್ತು ಪೋಸ್ಟರ್ ಬಿಡುಗಡೆ ಮಾಡಿದರು. ಅಲ್ಲದೆ, ಮೊದಲ ತಂಡದ 9 ಆನೆಗಳ ಮಾವುತ, ಕಾವಾಡಿಗಳಿಗೆ ಸಾಂಪ್ರದಾಯಿಕವಾಗಿ ಸನ್ಮಾನಿಸಿ, ದಸರಾ ಮಹೋತ್ಸವದ ಯಶಸ್ಸಿಗೆ ಸಹಕರಿಸುವಂತೆ ಕೋರಲಾಯಿತು. ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ನೆರೆದಿದ್ದವರನ್ನು ರಂಜಿಸಿತು.

ಕಾರ್ಯಕ್ರಮದಲ್ಲಿ ರೇಷ್ಮೆ ಮತ್ತು ಪಶುಸಂಗೋಪನಾ ಖಾತೆ ಸಚಿವ ಕೆ.ವೆಂಕಟೇಶ್, ಶಾಸಕರುಗಳಾದ ಜಿ.ಡಿ.ಹರೀಶ್ ಗೌಡ, ತನ್ವೀರ್ ಸೇಠ್, ಡಿ.ರವಿಶಂಕರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಪಿಸಿಸಿಎಫ್ ಮೀನಾಕ್ಷಿ ನೇಗಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ವೃತ್ತದ ಸಿಎಫ್ ರವಿಶಂಕರ್, ಕೊಡಗು ವೃತ್ತ ಸಿಎಫ್ ಸೋನಲ್ ವೃಷ್ಣಿ, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಜಿ.ಪಂ ಸಿಇಒ ಎಸ್.ಯುಕೇಶ್ ಕುಮಾರ್, ದೊಡ್ಡ ಹೆಜ್ಜೂರು ಗ್ರಾ.ಪಂ. ಅಧ್ಯಕ್ಷೆ ಅಂಬಿಕಾ ಲೋಕೇಶ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಪಶುವೈದ್ಯ ಡಾ.ಆದರ್ಶ್ ಮತ್ತಿತರರು ಉಪಸ್ಥಿತರಿದ್ದರು.

ಭೀಮನ ಮಾವುತ, ಕಾವಾಡಿಗೆ ಅರ್ಜುನ ಪ್ರಶಸ್ತಿ ಪ್ರದಾನ



ಗಜಪಯಣ ಕಾರ್ಯಕ್ರಮದಲ್ಲಿ ಅರ್ಜುನ ಪ್ರಶಸ್ತಿಯನ್ನು ಭೀಮನ ಮಾವುತ ಗುಂಡಣ್ಣ, ಕಾವಾಡಿ ನಂಜುಂಡಸ್ವಾಮಿಗೆ ಪ್ರದಾನ ಮಾಡಲಾಯಿತು.

ಇದೇ ವೇಳೆ ಅರಣ್ಯ ಇಲಾಖೆ ಈ ಸಾಲಿನಿಂದ ಸ್ಥಾಪಿಸಿರುವ 'ಅರ್ಜುನ' ಪ್ರಶಸ್ತಿಯನ್ನು ದಸರಾ ಆನೆ ಭೀಮ ಆನೆಯ ಮಾವುತ ಗುಂಡಣ್ಣ ಹಾಗೂ ಕಾವಾಡಿ ನಂಜುಂಡಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು.

ಪ್ರಶಸ್ತಿ ವಿತರಿಸಿದ ಬಳಿಕ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಅರ್ಜುನ ಪ್ರಶಸ್ತಿಯನ್ನು ಪ್ರತಿವರ್ಷದ ಸಾಕಾನೆಯನ್ನು ಅತ್ಯುತ್ತಮವಾಗಿ ಪಾಲನೆ ಮಾಡಿದ ಮಾವುತ, ಕಾವಾಡಿಗೆ ನೀಡಲಾಗುತ್ತದೆ. ಈ ಪ್ರಶಸ್ತಿ ಪ್ರಶಂಸನಾ ಪತ್ರ ಹಾಗೂ ತಲಾ 10 ಸಾವಿರ ರೂ. ಗೌರವಧನ ಒಳಗೊಂಡಿರುತ್ತದೆ. ಸಮಿತಿಯೊಂದನ್ನು ರಚಿಸಿ, ಈ ಪ್ರಶಸ್ತಿಗೆ ಪ್ರತಿವರ್ಷ ಅರ್ಹರನ್ನು ಆಯ್ಕೆ ಮಾಡಲಾಗುವುದು, ಗಜಪಯಣದ ದಿನ ಪ್ರಶಸ್ತಿ ಪ್ರದಾನ ನೆರವೇರಲಿದೆ ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಜೀವನದಲ್ಲಿ ಏನಾದರೂ ಸಾಧನೆ ಮಾಡುವುದಾದರೆ ಮದುವೆಗಿಂತ ಮೊದಲೇ ಮಾಡಿ. ನಂತರ ಏನೇ ಸಾಧನೆ ಮಾಡಿದರೂ ಜನ ಅದೆಲ್ಲಾ ಹೆಂಡತಿ ಕಾಲ್ಗುಣ ಎನ್ನುತ್ತಾರೆ! ನೀನು ಮತ್ತು ನಿನ್ನ ತಂದೆ–ತಾಯಿ ಪಟ್ಟ ಕಷ್ಟಕ್ಕೆ ಸ್ವಲ್ಪವೂ ಬೆಲೆನೇ ಇಲ್ಲ...!!

ಮೈಸೂರು ಮಿತ್ರ

ಮಂಗಳವಾರ, 5 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಒಳ್ಳೆಯ ಮಾತುಗಳನ್ನು ಆಡಿದರೆ ಸಾಲದು. ಆ ಮಾತುಗಳು ಒಳ್ಳೆಯ ಕೆಲಸಗಳನ್ನು ಪ್ರೇರೇಪಿಸುವಂತೆ ಇರಬೇಕು. – ಡಿ.ವಿ. ಗುಂಡಪ್ಪ

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಈ ಜಗತ್ತಲ್ಲಿ ದುಡ್ಡೆ ದೊಡ್ಡಪ್ಪ

ನಿಮ್ಮ ಪತ್ರಗಳು

ಮೈಸೂರು ರಾಜ್ಯವನ್ನಾಳಿದ ರಾಜವಂಶಸ್ಥರಿಗೆ ಅವಮಾನ

ಮಾನ್ಯರೆ,

ಕೆ.ಆರ್.ಎಸ್. ಅಣೆಕಟ್ಟೆಗೆ ಅಡಿಗಲ್ಲು ಹಾಕಿದ್ದು ಮೈಸೂರು ರಾಜ್ಯದ ಚಕ್ರವರ್ತಿಗಳಾಗಿದ್ದ ನಾಲ್ವಡಿಯವರು, ಟಿಪ್ಪು ವಲ್ಲ ಎಂಬುದು ಜನತೆಗೆ ಗೊತ್ತಿರುವ ವಿಷಯವಾಗಿದೆ. ಆ ಅಣೆಕಟ್ಟನ್ನು ಕಟ್ಟುತ್ತಿರುವ ಸಮಯದಲ್ಲಿ ಹಣದ ಕೊರತೆಯಾಗಿ ತಮ್ಮ ಹೆಂಡತಿಯ ಒಡವೆಗಳನ್ನೇ ಅಡವಿಟ್ಟು ಹಣವನ್ನು ತಂದು ಅಣೆಕಟ್ಟೆಯ ಕೆಲಸಗಳನ್ನು ಪೂರ್ತಿ ಮಾಡಿದ್ದನ್ನು ಮೈಸೂರು ಇತಿಹಾಸವು ಸಾರುತ್ತದೆ. ಕೆಆರ್‌ಎಸ್ ಅಣೆಕಟ್ಟೆಯನ್ನು ಕಟ್ಟಲು ತ್ಯಾಗಮಾಡಿ, ಜನರಿಗೆ ಮಾಡಿದ ಉಪಕಾರವನ್ನು ಯಾರೂ ಮರೆಯಲಾಗದು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೆ.ಆರ್.ಎಸ್. ಅಣೆಕಟ್ಟೆಗೆ ಅಡಿಗಲ್ಲು ಹಾಕಿದ್ದು ಟಿಪ್ಪು ಎಂದು ಹೇಳುವ ಮೂಲಕ ಮೈಸೂರು ಇತಿಹಾಸಕ್ಕೂ, ಮೈಸೂರು ರಾಜ್ಯವನ್ನಾಳಿದ ರಾಜವಂಶಸ್ಥರಿಗೂ ಅವಮಾನವನ್ನುಂಟು ಮಾಡಿದ್ದಾರೆ. ಈ ಮೂಲಕ ತಮ್ಮ ಬಾಯಿ ಚಪಲವನ್ನು ತೀರಿಸಿಕೊಂಡಿದ್ದಾರೆ. ಮಹದೇವಪ್ಪ ಅವರು ಕೆ.ಆರ್.ಎಸ್. ಅಣೆಕಟ್ಟೆಗೆ ಅಡಿಗಲ್ಲು ಹಾಕಿದ್ದು ಟಿಪ್ಪು ಎಂದು ಹಸಿಸುಳ್ಳನ್ನು ಆಡುತ್ತಿರುವುದು ಕೇವಲ ಒಂದು ಸಮುದಾಯದ ಓಟಿಗೋಸ್ಕರ.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು.

ಮಹಾರಾಣಿ ವಾಣಿಜ್ಯ ಕಾಲೇಜು ಮುಂಭಾಗದ ಗುಂಡಿ ಮುಚ್ಚಿ

ಮಾನ್ಯರೆ,

ಮೈಸೂರು–ಹುಣಸೂರು ಮುಖ್ಯ ರಸ್ತೆಯಲ್ಲಿ ಮಹಾರಾಣಿ ವಾಣಿಜ್ಯ ಕಾಲೇಜು ಬಳಿ ಕಲಾಮಂದಿರದ ಕಡೆಗೆ ಚಲಿಸುವ ರಸ್ತೆಯಲ್ಲಿ ಆಳ, ದೊಡ್ಡದಾದ ಗುಂಡಿಯೊಂದು ಬಿದ್ದು, ಈ ರಸ್ತೆ ಸದಾ ಅತೀ ಹೆಚ್ಚು ವಾಹನ ದಟ್ಟಣೆಯಿಂದ ಕೂಡಿದ್ದು ಮುಖ್ಯ ರಸ್ತೆಯಾದ ಕಾರಣ ಸಾಮಾನ್ಯವಾಗಿ ವಾಹನಗಳು ವೇಗವಾಗಿ ಚಲಿಸುತ್ತವೆ. ದ್ವಿಚಕ್ರ ವಾಹನ ಸವಾರರು ಮಳೆ ನೀರು ತುಂಬಿದ ವೇಳೆ ಅರಿಯದೆ ಈ ಗುಂಡಿಗೆ ವಾಹನ ಇಳಿಸಿದರೆ ಅಪಘಾತವಾಗುವುದರಲ್ಲಿ ಸಂದೇಹವಿಲ್ಲ.

ಬೃಹತ್ ವಾಹನಗಳು ಈ ಗುಂಡಿಯ ಕಡೆ ವೇಗವಾಗಿ ಚಲಿಸಿದರೆ ಅಪಘಾತದ ಸಂಭವ ಹೆಚ್ಚು. ಮೈಸೂರು ಮಹಾನಗರಪಾಲಿಕೆಯ ವತಿಯಿಂದ ಇಂತಹ ಗುಂಡಿಗಳಿಗೆ ಬರಿಯ ಮಣ್ಣು ತುಂಬುವ ಕಾರ್ಯ ನಡೆಯುತ್ತಿದ್ದು, ಮಳೆಯ ಕಾರಣ ಅದು ಸಫಲವಾಗುತ್ತಿಲ್ಲ. ಆದ ಕಾರಣ ಇಂತಹ ಅಪಾಯದ ಗುಂಡಿಗಳಿಗೆ ಗುಣಮಟ್ಟದ ಡಾಂಬರೀಕರಣ ಮಾಡಿ ವಾಹನ ಸವಾರರ ಸುರಕ್ಷತೆಯನ್ನು ಕಾಪಾಡಬೇಕಾಗಿದೆ. **–ಮಂಜೇಶ್ ದೇವಗಳ್ಳಿ, ಮೈಸೂರು.**

ಸುಂಕದವನ ಮುಂದೆ...!

ಮಾನ್ಯರೆ,

ಕೊನೆಗೂ ಅಮೆರಿಕದ ಅಧ್ಯಕ್ಷ ಟ್ರಂಪ್ ಭಾರತದ ಮೇಲೆ ಶೇ 25ರ ಸುಂಕದ ಗದಾಪ್ರಹಾರ ಮಾಡಿದ್ದಾರೆ. ಅಮೆರಿಕದ ವಸ್ತುಗಳಿಗೆ ಭಾರತ ಅತೀ ಹೆಚ್ಚಿನ ಸುಂಕ ವಿಧಿಸುತ್ತಿದೆ ಎನ್ನುವುದು ಟ್ರಂಪ್ ಅವರ ಮುಖ್ಯ ಅಪವಾದವಾದರೆ, ಭಾರತ ರಷ್ಯಾದಿಂದ ಅಗ್ಗದ ದರದಲ್ಲಿ ತೈಲ ಹಾಗೂ ಶಸ್ತ್ರಾಸ್ತ್ರ ಖರೀದಿಸುತ್ತಿರುವುದು ಅವರ ಕೋಪಕ್ಕೆ ಇನ್ನೊಂದು ಕಾರಣವಾಗಿದೆ. ಕಳೆದ ಏಪ್ರಿಲ್‌ನಿಂದಲೂ ಈ ವ್ಯವಹಾರ ಕಣ್ಣಾಮುಚ್ಚಾಲೆಯಂತೆ ನಡೆಯುತ್ತಿತ್ತು.

ಪಹಲ್ಗಾವ್ ದಾಳಿಯ ನಂತರ ನಡೆದ ಭಾರತ –ಪಾಕ್ ಯುದ್ಧವನ್ನು ನಾನೇ ತಡೆದೆ ಎಂದು ಟ್ರಂಪ್ ಸತತ 32ನೇ ಬಾರಿಗೆ ಹೇಳಿದ್ದಾರೆ. ಸಂಸತ್‌ನಲ್ಲಿ ನಡೆದ ಚರ್ಚೆ ವೇಳೆಯಲ್ಲಿ ಟ್ರಂಪ್ ಬಗ್ಗೆ ನೇರವಾಗಿ ಹೇಳದೆ ವಿಶ್ವದ ಯಾವ ನಾಯಕರೂ ಯುದ್ಧ ತಡೆಯಲಿಲ್ಲ ಎಂದು ಹೇಳಿದರು. ಟ್ರಂಪ್ ಹೆಸರು ಹೇಳಲು ಮದುವೆ ಹೆಣ್ಣಿನಂತೆ ಅಷ್ಟೊಂದು ಸಂಕೋಚವೇಕೆ ಎನ್ನುವುದು ಅರ್ಥವಾಗದ ಸಂಗತಿ.

ಟ್ರಂಪ್ ನನ್ನ ಸ್ನೇಹಿತ ಎಂದು ಪ್ರಧಾನಿ ಮೋದಿ ಹೇಳಿದರೆ, ಪಾಕಿಸ್ತಾನ ನನ್ನ ಮಿತ್ರ ಎಂದು ಟ್ರಂಪ್ ಆಪರೇಷನ್ ಸಿಂಧೂರದ ಸಮಯದಲ್ಲೇ ಹೇಳಿದ್ದರು. ಈಗ ಟ್ರಂಪ್ ಭಾರತದಿಂದ ರಫ್ತಾಗುವ ವಸ್ತುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದ್ದಾರೆ. ಪಾಕಿಸ್ತಾನಕ್ಕೆ ನೇರವಾಗಿ ನೆರವು ಘೋಷಣೆ ಜೊತೆಗೆ, ಮುಂದೊಂದು ದಿನ ಭಾರತ ಪಾಕ್‌ನಿಂದ ತೈಲ ಖರೀದಿಸುವ ಸಮಯ ಬರಲಿದೆ. ಭಾರತದ್ದು ಸತ್ತ ಆರ್ಥಿಕತೆ ಎನ್ನುವ ಮೂಲಕ ತಮ್ಮ ಅಂತರಂಗವನ್ನು ತೆರೆದಿಟ್ಟಿದ್ದಾರೆ. ಭಾರತವು ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎನ್ನುವಂತೆ ಅಮೆರಿಕಾ ಮತ್ತು ರಷ್ಯಾ ನಡುವೆ ವ್ಯವಹಾರ ಮಾಡುತ್ತಿದೆ. ಭಾರತದ ಸ್ಥಿತಿ ಸುಂಕದವನ ಮುಂದೆ ಸುಖ–ದುಃಖ ಹೇಳಿಕೊಂಡಂತೆ ಆಗಿದೆ... ತೆರಿಗೆ ವಿಷಯದಲ್ಲಿ ಭಾರತದ ಜನರ ಸ್ಥಿತಿ ಕೂಡ ಹೀಗೆಯೇ ಇದೆ ಎನ್ನುವುದು ಕೂಡ ವಾಸ್ತವ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ವಿದ್ಯುತ್ ಕಣ್ಣಾಮುಚ್ಚಾಲೆ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಕನಕದಾಸನಗರ ದಟ್ಟಗಳ್ಳಿ 3ನೇ ಹಂತ G ಬ್ಲಾಕ್ ಹೆಸರಿಗೆ ರಿಂಗ್ ರಸ್ತೆಯ ಒಳಗಡೆ ಮೈಸೂರು ಸಿಟಿ ಕಾರ್ಪೊರೇಷನ್‌ಗೆ ಒಳಪಟ್ಟಿದ್ದರೂ ಯಾವುದೋ ಗ್ರಾಮೀಣ ಭಾಗದಂತೆ ಪ್ರತಿನಿತ್ಯ ದಿನಕ್ಕೆ 3 ಬಾರಿ ವಿದ್ಯುತ್ ನಿಲುಗಡೆ ಆಗುತ್ತಲೇ ಇರುತ್ತದೆ. ಅದಲ್ಲದೇ ಹಲವು ಬಾರಿ ಶಾರ್ಟ್ ಸರ್ಕ್ಯೂಟ್ ಹಾಗೂ ಅತೀ ಹೆಚ್ಚು ವಿದ್ಯುತ್ ಪ್ರಸರಣದಿಂದ ಮನೆಯ ಹಲವು ವಿದ್ಯುತ್ ಉಪಕರಣಗಳು ಸುಟ್ಟು ಹೋಗಿವೆ. ಹಲವು ಬಾರಿ ಕಂಪ್ಲೇಂಟ್ ಕೊಟ್ಟರೂ ಯಾವುದೇ ಅಧಿಕಾರಿಗಳು ಇತ್ತ ಗಮನಹರಿಸುತ್ತಿಲ್ಲ. ಅವರು ಹೊಸ ಟ್ರಾನ್ಸ್‌ಫಾರ್ಮರ್ ಲಭ್ಯವಿಲ್ಲದೇ ಇರುವ ಕಾರಣ ಇರುವ ಟ್ರಾನ್ಸ್‌ಫಾರ್ಮರ್‌ಗೆ ಹೆಚ್ಚು ಲೋಡ್ ಕೊಟ್ಟಿರುವುದರಿಂದ ಹೀಗಾಗಿದೆ ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಿದ್ದಾರೆ. ದಯವಿಟ್ಟು ಚೆಸ್ಕಾಂ ಅಧಿಕಾರಿಗಳು ಇತ್ತ ಗಮನಹರಿಸಬೇಕೆಂದು ಮನವಿ.

– ರಾಘವೇಂದ್ರ, ದಟ್ಟಗಳ್ಳಿ, ಮೈಸೂರು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಸಾಧನೆ ಮತ್ತು ಶೋಧನೆ

ಈ ಜೀವನವೆಂಬ ಮ್ಯಾರಥಾನ್‌ನಲ್ಲಿ ನಾವೆಲ್ಲಾ ಓದಿ, ನೋಡಿ, ಕೇಳಿ, Inspire ಆಗೋದು ಯಾಕೆ ಗೊತ್ತಾ? ನಾವಂದುಕೊಂಡ ಯಾವುದಾದರೂ ಒಂದೊಂದರಲ್ಲಿ ಒಬ್ಬೊಬ್ಬರು ಯಶಸ್ಸು ಕಾಣಬೇಕು ಎನ್ನುವ ಆಶಯದಿಂದ. ನಮ್ಮ ನಮ್ಮ Identityಯ ಮೂಲಕ ಈ ಜಗತ್ತಿನಲ್ಲಿ ನಮ್ಮದೊಂದು ಶಾಶ್ವತ ಮುದ್ರೆ ಒತ್ತಿ, ನಾವು ನಮ್ಮ ದಾರಿಯಲ್ಲಿ ನಡೆದು ಸಾಧಕರಾಗಬೇಕು, ಎಲ್ಲರೂ ಮೆಚ್ಚುವಂತೆ ನಾವಿರಬೇಕು ಎಂದುಕೊಳ್ಳುವ ಅಸಂಖ್ಯಾತ ಮನಸ್ಸುಗಳು ನಮ್ಮ ಸುತ್ತಲೂ ಇವೆ. ಆದರೆ ತಾವು ಅಂದುಕೊಂಡಂತೆ ಎಲ್ಲವೂ ನಡೆದು ಹೋಗಿ ಬದುಕಿನಲ್ಲಿ ಒಂದು ಸಾಧನೆಯ ಔನ್ನತ್ಯವನ್ನು ಕಂಡುಕೊಂಡ ಅನೇಕರು ಮತ್ತೇ ನನ್ನ ಯೋಚಿಸ ಬಹುದು ಎನ್ನುವ ವಿಲಕ್ಷಣವಾದ ಪ್ರಶ್ನೆ ಯಾವತ್ತಾದರೂ ನಿಮ್ಮನ್ನ ಕಾಡಿದೆಯಾ? ಆದರೆ ಅದುಸತ್ಯ

ತೇನಸಿಂಗ್ ಹಿಮಾಲಯ ಹತ್ತಿ ಗೌರಿಶಂಕರ ಶಿಖರದ ಮೇಲೆ ಬಾವುಟ ನೆಟ್ಟು, ವಿಜಯದ ನಗೆ ಬೀರಿದ ಮೇಲೂ, ಗೌರೀಶಂಕರದ ನೆತ್ತಿಯ ಮೇಲೆ ಆಕಾಶ ನಗುತಿತ್ತಲ್ಲ! ಅದು ಆತನ Egoವನ್ನು ಕೆಣಕಲಿಲ್ಲವೆ? ಬುದ್ಧ ಜಗತ್ತಿಗೆ ಆಸೆಯೇ ದುಃಖದ ಮೂಲ– ಎಂಬುದರ ಅರಿವಿನ ಪೂರ್ಣಪಾಠ ಹೇಳಿದ ಮೇಲೂ ಜನ ಕಲ್ಯಾಣದ ಮೋಹಪಾಶಕ್ಕೆ ಸಿಕ್ಕ ಮೇಲೂ ಬುದ್ದ ನಗುತ್ತಲೇ ಇದ್ದ. ಇದು ವಿಚಿತ್ರ ಅಲ್ಲವೇ? ಇಂಥ ಪ್ರಶ್ನೆ ಕೇಳಿಕೊಳ್ಳಲಿಕ್ಕೆ ದೊಡ್ಡ ಚಿಂತಕರಾಗಬೇಕಿಲ್ಲ. ನಮ್ಮ ಬದುಕಿನ ಏಕಾಂತದ ಕ್ಷಣಗಳನ್ನು ಎಣಿಸುತ್ತಾ ಕೂತಾಗ ಇಂತಹ ವಿಲಕ್ಷಣ ಪ್ರಶ್ನೆಗಳು ನಮ್ಮನ್ನ ಕಾಡುತ್ತವೆ.

ಆಗ ನಮ್ಮಲ್ಲಿ ಹುಟ್ಟುವ ವಿವೇಕ ವರ್ತುಲದಲ್ಲಿ ಇಂತಹ ಅನೇಕ ವಿಲಕ್ಷಣ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪದಬಂಧ ಸೃಷ್ಟಿಯಾಗುತ್ತದೆ. ಎಷ್ಟೇ ಆಗಲಿ ಮನುಷ್ಯ ನೂರು ಭಾವನೆಗಳ ಸರದಾರ. ಅವುಗಳ ಹಕ್ಕು ಮಂಡಿಸುವ ಹಮ್ಮೀರ! ಕೆಲವೊಮ್ಮೆ ಏರುತ್ತಾನೆ. ಅದೇ ಅವರ ಸಾಧನೆ! ಕೆಲವೊಮ್ಮೆ ಎಡವುತ್ತಾನೆ ಅದೇ ಅವನ ವೇದನೆ! ಈ ಸಾಧನೆ ಮತ್ತು ವೇದನೆಗಳ ನಡುವೆ ನಾವೇ ಹಾಕಿಕೊಳ್ಳುವ Ego ಎಂಬ ಈ ಅಹಮಿಕೆಯ ಕಿರೀಟ ಒಮ್ಮೊಮ್ಮೆ ನಮ್ಮನ್ನು ಬಾಳೆಯಂತೆ ಬಾಗಿಸುತ್ತದೆ, ಇಲ್ಲದಿದ್ದರೆ ಅದೇ ಸಾಧನೆಯೆಂಬ ಅಹಮಿಕೆ ದೇಹಕ್ಕಂಟಿದ ವ್ರಣದಂತೆ ಬಾಧಿಸುತ್ತದೆ. ಹೀಗೆ ಬಾಗಿದ ಮತ್ತು ಬಾಧಿಸಿದ ಪ್ರಸಂಗವೊಂದು ಜಗತ್ತಿಗೇ ಗೀತೋಪದೇಶ ಮಾಡಿದ ಕೃಷ್ಣನ ಆಸುಪಾಸಿನಲ್ಲಿ ನಡೆಯುತ್ತದೆ. ಅದು ಬಹಳ ತಮಾಷೆ, ಅದೇ ನಮ್ಮ ತರ್ಕದ ಪ್ರಶ್ನೆಗೆ ಉತ್ತರದ ಹುಡುಕಾಟ.

ಸಾಕ್ಷಾತ್ ಕೃಷ್ಣನ ಬೆರಳ ತುದಿಯಲ್ಲೇ ಸದಾ ಇರುತ್ತಿದ್ದ, ಕೃಷ್ಣನ ಆಜ್ಞಾನುವರ್ತಿಯಾಗಿ, ಸಕಲ ದಿಗ್ವಿಜಯಗಳ ಸ್ಪಷ್ಟ ಸಂದೇಶದಂತೆ ಕಂಗೊಳಿಸಿದ ಸುದರ್ಶನ (ಚಕ್ರ) ತನ್ನಸಾಧನೆ, ತನ್ನ ಅದಮ್ಯ ಶಕ್ತಿಯ ಬಗ್ಗೆ ತಾನೇ ಅಭಿಮಾನ ಪಟ್ಟುಕೊಂಡು ತನ್ನ ಶಕ್ತಿಯ ಮುಂದೆ, ತನ್ನ ಸಾಹಸ ಪ್ರಹಾರದ ಪ್ರವೃತ್ತಿಯ ಮುಂದೆ ಈ ಭೂ ಮಂಡಲದೊಳಗೆ ತನ್ನನ್ನ ಮೀರಿಸುವವರು ಯಾರಿದ್ದಾರೆ? ಎಂಬ ಅಹಮಿಕೆ ಸುದರ್ಶನನ ತಲೆಯಲ್ಲಿ ಬಂದು ಬಿಡುತ್ತದೆ. ಅದನ್ನ ಹೇಗಾದರೂ ಮಾಡಿ ಕೃಷ್ಣನ ಬಳಿ ನಿವೇದಿಸಿಕೊಂಡು ತಾನು ತನ್ನ ಪರಾಕ್ರಮದ ಮುಂದೆ ಇಡೀ ಭೂಮಂಡಲದಲ್ಲೇ ಯಾರು ಇಲ್ಲ! ತನ್ನ ಸರಿಸಮ ಇಲ್ಲಿ ಯಾರಿದ್ದಾರೆ? ಹಾಗಂತ ಸ್ವತಃ ಕೃಷ್ಣನ ಬಾಯಲ್ಲಿ ಹೇಳಿಸಿಕೊಂಡರೆ ತನ್ನ ಸಾರ್ಥಕ್ಯ ಇನ್ನೂ ಹೆಚ್ಚಾದೀತು ಎಂಬ ನಿರೀಕ್ಷೆಯೊಂದಿಗೆ ಒಮ್ಮೆ ಸಾಕ್ಷಾತ್ ಕೃಷ್ಣ ಪರಮಾತ್ಮನಲ್ಲಿ ಹೇಳಿಯೇ ಬಿಟ್ಟಿತು ಸುದರ್ಶನ.

ಪರಮಾತ್ಮ ಜಗತ್ತಿನಲ್ಲಿ ನಿನ್ನ ಕೈ ಬೆರಳುಗಳಿಂದ ಪ್ರಯೋಗಿಸಲ್ಪಟ್ಟ ನಾನು ಅಂದರೆ ಈ ಸುದರ್ಶನ ಚಕ್ರಕ್ಕಿಂತ, ಶಕ್ತಿಯುತ ಆಯುಧ ಯಾವುದಾದರೂ ಇದೆಯೇ? ನನಗೆ ಸರಿಸಾಟಿ ಯಾರು? ಎಂದು ಪ್ರಶ್ನೆ ಕೇಳುತ್ತದೆ. ಕೃಷ್ಣ ಸುದರ್ಶನನ ಪ್ರಶ್ನೆಗೆ ಉತ್ತರ ಹೇಳುವಷ್ಟರಲ್ಲಿ ವಾಯುವೇಗದಲ್ಲಿ ಬಂದ ಗರುಡನಿಗೂ ಅಂದು ಏಕೋಕಾಣೆ ಆವತ್ತೇ ಒಂದು ಪ್ರಶ್ನೆ ಹೊಳೆದಿದೆ, ಮಹಾಕಾವ್ಯಗಳಿಂದ ಹಿಡಿದು ಮಹಾರಥಿಗಳ ದಿವ್ಯಾಸ್ತ್ರಗಳ ವೇಗಕ್ಕಿಂತ ವಾಯುವೇಗದಲ್ಲಿ ಪ್ರವಹಿಸಿ ಗೆಲುವಿನ ದಿಕ್ಕು ತಲುಪುವವನು ನಾನು, ಗರುಡಪುರಾಣವೆಂಬ ಮಹಾಕಾವ್ಯಕ್ಕೆ ನಾಮಾಂಕಿತನಾದ ನಾನು ಮತ್ತು ನನ್ನ ಶಕ್ತಿ ಸಾಮಾನ್ಯವೆ! ಜಗತ್ತಿನ ಅಸಾಮಾನ್ಯ ಶಕ್ತಿವಂತರಲ್ಲಿ ಗರುಡನಾದ ನಾನು ಅಗ್ರಗಣ್ಯನೇ ಸರಿ! ಎನಿಸತೊಡಗಿದೆ ಅಲ್ಲವೇ ಪರಮಾತ್ಮ ಎನ್ನುತ್ತದೆ. ಕೂಡಲೆ ಇದಕ್ಕೆ ಉತ್ತರ ಪಡೆದುಕೊಳ್ಳುವ ಮಹದಾಸೆಯಿಂದ ಸಾಕ್ಷಾತ್ ಕೃಷ್ಣ ಪರಮಾತ್ಮನಲ್ಲಿ ಗರುಡ ತನ್ನ ಪ್ರಶ್ನೆಯನ್ನು ಮತ್ತೆಮತ್ತೆ ನಿವೇದಿಸಿಕೊಂಡಿದೆ. ಪರಮಾತ್ಮ ವಾಯುವೇಗದಲ್ಲಿ ಹೊರಟು ಅಪ್ರತಿಮವಾದ ಕೆಲಸವನ್ನು ಕ್ಷಣ ಮಾತ್ರದಲ್ಲೇ ಗುರಿತಲುಪಿ ಸಾಧಿಸಿ ಬರುವ ಛಲ ನನಗಿಲ್ಲವೇ ಎನ್ನುವ ಪ್ರಶ್ನೆ ಕೇಳಿ ಉತ್ತರಕ್ಕಾಗಿ ಕಾಯುತ್ತಿದೆ ಗರುಡ. ಅಷ್ಟರಲ್ಲೇ ಅಲ್ಲಿಗೆ ಬಂದ ಕೃಷ್ಣನ ಅಂತರಂಗದ ಸಾಧ್ವಿ ಸತ್ಯಭಾಮೆ ಪರಮಾತ್ಮನಲ್ಲಿಗೆ ಬಂದು ಎಂದೂ ಕೇಳದ ಒಂದು ಪ್ರಶ್ನೆಯನ್ನ ಕೇಳುತ್ತಾಳೆ. ಸ್ವಾಮಿ, ನಾನು ನನ್ನನ್ನು ಅಪ್ರತಿಮ ಸೌಂದರ್ಯವತಿ ಎಂದುಕೊಳ್ಳಬಹುದೆ. ಸಾಕ್ಷಾತ್ ಜಾನಕೀರೂಪವನ್ನು ಹೋಲುತ್ತೇನೆಂದುಕೊಳ್ಳಲೇ? ಎಂಬ ತಾರ್ಕಿಕ ಪ್ರಶ್ನೆಯನ್ನು ಹಾಕಿ ಉತ್ತರವನ್ನು ನಿರೀಕ್ಷಿಸುವ ಸತ್ಯಭಾಮೆಯ ತುಂಟ ಪ್ರಶ್ನೆಗೆ ಕೃಷ್ಣ ನಗುತ್ತಾನೆ. ಅದರಲ್ಲಡಗಿರುವ Ego centric– ಅಂಶದ ಪರಿಮಾಣವನ್ನು ತೂಕ ಹಾಕಿದ ಕೃಷ್ಣ ಪ್ರಶ್ನೆ ಹಾಕಿದ ಸುದರ್ಶನ, ಗರುಡ, ಸತ್ಯಭಾಮೆಯರಿಗೆ ಒಂದೇ ತರಹದ ಪ್ರಶ್ನೆ ಎದ್ದಿದೆ, ಸುದರ್ಶನನಿಗೆ ತನ್ನ ಶಕ್ತಿ, ಗರುಡನಿಗೆ ತನ್ನ ವೇಗ, ಸತ್ಯಭಾಮೆಗೆ ಜಾನಕಿಯನ್ನ ಹೋಲುವ ಅಪ್ರತಿಮ ತೇಜಸ್ಸು– ಹೀಗೆ ಅವರವರ Identity ಹಾಗೂ ಸಾಧನೆ ಮತ್ತು ಶೋಧನೆಗಳ ಬಗ್ಗೆ ಅವರವರಿಗೆ ಹುಟ್ಟಿದ ಅಹಮಿಕೆಯ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಸಂದರ್ಭ ಸೃಷ್ಟಿಯಾಗುತ್ತದೆ ಕೃಷ್ಣನಿಗೆ.

ಆಗ ಕೃಷ್ಣನಿಗೆ ನೆನಪಾಗುವ ಪಾತ್ರವೇ ರಾಮಾಯಣದ ಆಂಜನೇಯ, ರಾಮಭಕ್ತ ಹನುಮಂತ. ಲಂಕೆಯಲ್ಲಿದ್ದ ಸೀತೆಗೆ ಉಂಗುರಕೊಟ್ಟು ರಾಮನ ಅಭಯ ನೀಡಿ ಸೀಮೋಲ್ಲಂಘನ–ಮಾಡುವ ಶಕ್ತಿ ಯಾರಿಗಿದೆ ಎಂದು ವಾನರ ಸೇನೆ ಸಮುದ್ರ ತೀರದಲ್ಲಿ ಚರ್ಚಿಸಿದ ಸಂದರ್ಭವದು. ಸಂಪಾತಿ ಹೇಳಿದ ಸೀತಾ ವನವಾಸದ ಮುಕ್ತಿಗೆ ಸಮುದ್ರ ಹಾರಲು ತಯಾರಾದ ವಾನರಸೇನೆ ತಮ್ಮ ತಮ್ಮ ಶಕ್ತಿಸಂಚಯನದ ಪರಿಮಾಣದ ಲೆಕ್ಕ ಹೇಳುತ್ತಿತ್ತು.

ಗಜ ತಾನು ಹತ್ತು ಯೋಜನ ಹಾರಬಲ್ಲೆ ಎಂದ, ಗವಾಕ್ಷ 20 ಯೋಜನ, ಗವಯ ಮೂವತ್ತು ಯೋಜನ, ಶರಭ ನಲವತ್ತು ಯೋಜನ, ಗಂಧ ಮಾದನ–50 ಯೋಜನ, ಮಹಿಂದ–60 ಯೋಜನ, ದ್ವಿವಿದ–70 ಯೋಜನ, ಸುಸೇಷಣ–80 ಯೋಜನ, ಅಂಗದ 100 ಯೋಜನ ಹೀಗೆ ವಾನರ ಸೇನೆ ತಮ್ಮ ತಮ್ಮ ಶಕ್ತಿ ಸಾಮರ್ಥ್ಯದ ಬಗ್ಗೆ ಮಾತಾ ಡುತ್ತಿದ್ದರೆ ಇಡೀ ಸಮುದ್ರವನ್ನು ಹಾರಬಲ್ಲ ತಾಕತ್ತಿದ್ದ ಹನುಮಂತ ಆಕಾಶದ ಕಡೆ ನೋಡುತ್ತಾ ಕಲ್ಲು ಬಂಡೆಯಂತೆ ಒಬ್ಬನೇ ಕುಳಿತಿದ್ದ, ಕಡೆಗೆ ಸಮುದ್ರ ಹಾರಿದ್ದು ಹನುಮಂತನೆ!

ಸೀತೆಯನ್ನ ಸಂಧಿಸಿದ್ದು ಹನುಮಂತನೆ! ಆದರೆ ತನ್ನೊಳಗಿನ ಶಕ್ತಿಯನ್ನ ಅರಿಯದೇ ಕುಳಿತ ವಿನಮ್ರ ರಾಮಭಕ್ತ ಹನುಮ ಇಲ್ಲಿ ಕೃಷ್ಣನಿಗೆ ನೆನಪಾದ. ಅಹಮಿಕೆಯ ಪ್ರಶ್ನೆಗಳಿಗೆ ಹನುಮಂತನೇ ಸೂಕ್ತ ಉತ್ತರ ಎಂದೆನಿಸಿ ಗರುಡ, ಸುದರ್ಶನ, ಸತ್ಯಭಾಮೆ ಮೂವರನ್ನೂ ಒಂದು ಪ್ರಹಸನಕ್ಕೆ ಸಿದ್ದವಾಗುವಂತೆ ಹೇಳಿದ ಕೃಷ್ಣ.

ತಾನು ರಾಮನಂತೆ ಪರಕಾಯ ಪ್ರವೇಶ ಮಾಡಿ ಸತ್ಯಭಾಮೆಯನ್ನ ಸೀತೆಯಂತೆ ತನ್ನ ಪಕ್ಕದಲ್ಲೇ ಕುಳ್ಳಿರಿಸಿಕೊಂಡು ಸುದರ್ಶನನನ್ನು ಬಾಗಿಲಿಗೆ ಕಾವಲು ಹಾಕಿ, ಹನುಮಂತನನ್ನು ಕರೆತರಲು ಗರುಡನನ್ನು ಕಳುಹಿಸಿದ. ಕ್ಷಣಾರ್ಧದಲ್ಲಿ ರಾಮನ ರೂಪದಲ್ಲಿದ್ದ ಕೃಷ್ಣನ ಮುಂದೆ ಹನುಮಂತ ಪ್ರತ್ಯಕ್ಷನಾದ. ಹಾಗೆ ಬಂದವನೇ ರಾಮನ ರೂಪದಲ್ಲಿದ್ದ ಕೃಷ್ಣನಿಗೆ ಭಕ್ತಿ ಪೂರ್ವಕವಾಗಿ ನಮಸ್ಕರಿಸಿದ.

ಕೃಷ್ಣ ಕೇಳಿದ ಹನುಮಂತನಿಗೆ, ನಿನ್ನನ್ನ ಕರೆತರಲು ಬಂದ ನಮ್ಮ ವಾಯುವೇಗದ ಗರುಡ ನಿನಗೆ ಸಿಗಲಿಲ್ಲವೆ? ಎಂದು. ಕೂಡಲೇ ಹನುಮಂತ ಗರುಡ ಹಿಂದೆ ಎಲ್ಲೋ ಬರುತ್ತಿರಬೇಕು ಪ್ರಭು, ನಿನ್ನನ್ನು ಕಾಣುವ ಅತೀ ಆಸೆಯಿಂದ ನಾನು ಬೇಗ ಬಂದುಬಿಟ್ಟೆ ಎಂದ, ಗರುಡನ ವಾಯುವೇಗಕ್ಕಿಂತ ಮತ್ತೊಬ್ಬರಿದ್ದಾರೆಂಬ ಉತ್ತರ ಅಷ್ಟೊತ್ತಿಗಾಗಲೇ ಗರುಡನಿಗೆ ಸಿಕ್ಕಿಹೋಗಿತ್ತು, ಇನ್ನು ಬಾಗಿಲಿನಲ್ಲಿ ನಮ್ಮ ಸುದರ್ಶನ ನಿನ್ನನ್ನು ತಡೆಯಲಿಲ್ಲವೇ? ಎಂಬ ಕೃಷ್ಣನ ಮುಗುಳುನಗೆಯ ಮರು ಪ್ರಶ್ನೆಗೆ ಹನುಮಂತ ಹೇಳಿದ, ಹೌದು ಪ್ರಭು ನಿನ್ನ ಅನುಮತಿ ಕೇಳಿ ಬಂದು ನಂತರ ನನ್ನನ್ನು ನಿನ್ನ ಬಳಿಗೆ ಬಿಡುತ್ತೇನೆಂದು ಹೇಳಿದ ಸುದರ್ಶನ! ಆದರೆ ನನಗೆ ನಿನ್ನನ್ನು ಕಾಣುವ ತವಕ ಹೆಚ್ಚಾಗಿ ಅಷ್ಟು ಸಮಯ ನಾನು ಕಾಯಲಾರೆ ಎನ್ನಿಸಿ. ಸಮಯ ವ್ಯರ್ಥಮಾಡದೆ ನನ್ನನು ತಡೆಯಲು ಬಂದ ಸುದರ್ಶನನನ್ನೇ ನುಂಗಿಬಿಟ್ಟೆ ಎಂದ ಹನುಮಂತ. ಅಲ್ಲಿಗೆ ಸುದರ್ಶನನಿಗೂ ಜಗತ್ತಿನಲ್ಲಿ ತಾನೇ ಶಕ್ತಿವಂತ ಎಂಬ ಬೀಗುವಿಕೆಗೆ ಹನುಮಂತನ ಹೊಟ್ಟೆಯಲ್ಲಿ ಉತ್ತರ ಸಿಕ್ಕಿತು. ಇನ್ನೂ ಸಾಧ್ವಿ ಸತ್ಯಭಾಮೆಯನ್ನು ಸೀತೆಯ ರೂಪದಲ್ಲಿ ಕಂಡ ಹನುಮಂತ ಕೂಡಲೇ ಗುರುತಿಸಿ ಜಾನಕಿಯ ತೇಜಸ್ವಿ ಗೌರವ ವರ್ಣದ ಪ್ರಭೆ ಎಲ್ಲಿ ಹೋಯಿತು ಪ್ರಭು, ತಾಯಿ ಜಾನಕಿ ಎಲ್ಲಿ? ಎಂದು ಕೇಳಿಯೆಬಿಟ್ಟ ಅಲ್ಲಿಗೆ ಸತ್ಯಭಾಮೆಯ ಪ್ರಶ್ನೆಗೆ ಉತ್ತರ ಸಿಕ್ಕಿತ್ತು. ಅದಕ್ಕೇ ಕುಮಾರ ವ್ಯಾಸ ಬರೆದದ್ದು ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ ನೆಲಕೆ ಪಂಚಮ ಶೃತಿಯನೊರೆವೆ ಎಂದು.

ಹೀಗೆ ಸಾಧಕರಾದವರು ಏರಿದ ಎತ್ತರಕ್ಕೆ, ಹಾರಿದ ಅಗಲಕ್ಕೆ, ನಿಂತ ನೆಲಕ್ಕೆ ನೆಲೆನಿಂತ ಮೇಲೆ, ವಿನಯ, ವಿಶ್ವಾಸ, ಸಪ್ರೇಮ, ಸ್ವನೀತಿ, ಸಂಪದಗಳು ಮೇಳವಿಸಿ ಬಾಳೆಯಂತೆ ಬಾಗಬೇಕೇ ಹೊರತು ವ್ರಣದಂತೆ ಬಾಧಿಸಿ ಅದು ರೋಧಿಸಬಾರದು. ಎಲ್ಲವೂ ಕೈಗೂಡಿದ ಮೇಲೆ ಇತಿಮಿತಿಯಲ್ಲಿ ಬದುಕು ಸೊಗಸು! ಅಹಮಿಕೆಗಳು ತುಸು ಕಹಿಗನಸು–ಹೀಗೆ ಅನೇಕರು ಬದುಕಿನಲ್ಲಿ ಅಂತಸ್ತು, ಅಧಿಕಾರ, ಕೀರ್ತಿ, ಯೌವ್ವನ, ಸೌಂದರ್ಯ, ಒಂದೇ ಎರಡೇ ಸಕಲ ಭೂಮಂಡಲದಲ್ಲೇ ಪ್ರಸಿದ್ಧರಾದರೂ ತೃಪ್ತರಾಗದೆ ಪರಿತಪಿಸಿರುವವರನ್ನು ಈ ಜಗತ್ತಿನ ಚರಿತ್ರೆ ಕಂಡಿದೆ. ಆದರೆ ಇಲ್ಲಿ ಪ್ರಾಸಂಗಿಕವಾಗಿ ತನ್ನವರನ್ನೂ ಬಿಡದೆ ಕಾಡಿದ ಪ್ರಶ್ನೆಗಳಿಗೆ ವಿನೋದದಿಂದಲೇ ಉತ್ತರಿಸಿದ ಕೃಷ್ಣನ ಮುಗುಳ್ನಗೆ ಉತ್ತರದ ಸೊಬಗಿಗೆ ತಲೆದೂಗದವರಾರು. ಏನಂತೀರಿ?



> “ ಅನೇಕರು ಬದುಕಿನಲ್ಲಿ ಅಂತಸ್ತು, ಅಧಿಕಾರ, ಕೀರ್ತಿ, ಯೌವ್ವನ, ಸೌಂದರ್ಯ, ಒಂದೇ ಎರಡೇ ಸಕಲ ಭೂಮಂಡಲದಲ್ಲೇ ಪ್ರಸಿದ್ಧರಾದರೂ ತೃಪ್ತರಾಗದೆ ಪರಿತಪಿಸಿರುವವರನ್ನು ಈ ಜಗತ್ತಿನ ಚರಿತ್ರೆ ಕಂಡಿದೆ. ಆದರೆ ಇಲ್ಲಿ ಪ್ರಾಸಂಗಿಕವಾಗಿ ತನ್ನವರನ್ನೂ ಬಿಡದೆ ಕಾಡಿದ ಪ್ರಶ್ನೆಗಳಿಗೆ ವಿನೋದದಿಂದಲೇ ಉತ್ತರಿಸಿದ ಕೃಷ್ಣನ ಮುಗುಳ್ನಗೆ ಉತ್ತರದ ಸೊಬಗಿಗೆ ತಲೆದೂಗದವರಾರು?

ಸೆ.1ರಿಂದ ಸ್ಪೀಡ್ ಪೋಸ್ಟ್‌ನಲ್ಲಿ ರಿಜಿಸ್ಟರ್ಡ್ ಪೋಸ್ಟ್ ವಿಲೀನ

● ನಂಬಿಕೆ, ವಿಶ್ವಾಸಾರ್ಹತೆಗೆ ಹೆಸರಾಗಿದ್ದ ರಿಜಿಸ್ಟರ್ಡ್ ಪೋಸ್ಟ್ ● ದುಬಾರಿಯಾದರೂ ಈಗ ಸ್ಪೀಡ್ ಪೋಸ್ಟ್ ಅನಿವಾರ್ಯ ಆಯ್ಕೆ

● ಬಾಪುಲಿಂಗರಾಜ್ ಅರಸ್

ಮೈಸೂರು, ಆ.4– ನಂಬಿಕೆ ಹಾಗೂ ವಿಶ್ವಾಸಾರ್ಹತೆಗೆ ಹೆಸರಾಗಿದ್ದ ಅಂಚೆ ಇಲಾಖೆಯ ರಿಜಿಸ್ಟರ್ ಪೋಸ್ಟ್ ಯುಗಾಂತ್ಯವಾಗುತ್ತಿದೆ.



ಖಾಸಗಿ ಕೊರಿಯರ್‌ಗಳು, ಡಿಜಿಟಲ್ ಅಳವಡಿಕೆ ಹಾಗೂ ಇ–ಕಾಮರ್ಸ್ ಲಾಜಿಸ್ಟಿಕ್ ಸ್ಪರ್ಧೆಯನ್ನು ಎದುರಿಸಲಾಗದೇ ಕೇಂದ್ರ ಸರ್ಕಾರದ ಸಂಪರ್ಕ ಖಾತೆ ಸಚಿವಾಲಯ ಸೆಪ್ಟಂಬರ್ 1ರಿಂದ ರಿಜಿಸ್ಟರ್ಡ್ ಪೋಸ್ಟ್ ಸೇವೆಯನ್ನು ಸ್ಪೀಡ್ ಪೋಸ್ಟ್‌ನಲ್ಲಿ ವಿಲೀನಗೊಳಿಸುತ್ತಿದೆ.

ಅಂಚೆ ಇಲಾಖೆಯ ಹಲವು ಸೇವೆಗಳಲ್ಲಿ ರಿಜಿಸ್ಟರ್ಡ್ ಪೋಸ್ಟ್ ಪ್ರಮುಖ ಪಾತ್ರವಹಿಸುತ್ತಿದೆ. ಸಾರ್ವಜನಿಕರು ಹಾಗೂ ಸರ್ಕಾರದ ಸಂದೇಶಗಳು, ದಾಖಲಾತಿಗಳು ಸೇರಿದಂತೆ ಇತರೆ ಮಹತ್ವದ ಮಾಹಿತಿಯುಳ್ಳ ಪತ್ರಗಳು ರಿಜಿಸ್ಟರ್ಡ್ ಪೋಸ್ಟ್ ಮೂಲಕ ರವಾನೆಯಾಗುತ್ತಿದೆ. ಯಾರ ಹೆಸರಿಗೆ ರಿಜಿಸ್ಟರ್ಡ್ ಪೋಸ್ಟ್ ರವಾನೆ ಆಗಿರುತ್ತದೆಯೋ ಅವರೇ ಅದನ್ನು ಸ್ವೀಕರಿಸುವುದು ಅಂಚೆ ಇಲಾಖೆಯ ಕಟ್ಟುನಿಟ್ಟಿನ ನಿಯಮ.

ವಿಳಾಸ ನಮೂದಿತ ವ್ಯಕ್ತಿ ಲಭ್ಯವಾಗಲಿಲ್ಲವೆಂದರೆ ಯಾರು ರಿಜಿಸ್ಟರ್ ಪೋಸ್ಟ್ ಕಳುಹಿಸಿರುತ್ತಾರೊ ಅವರಿಗೆ ವಾಯಿದೆ ನಂತರ ವಾಪಸು ಹೋಗುತ್ತದೆ. ಇದರಿಂದ ರಿಜಿಸ್ಟರ್ಡ್ ಪೋಸ್ಟ್ ಅನ್ನು ಯಾರೂ ದುರುಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ. ಅಷ್ಟರ ಮಟ್ಟಿಗೆ ರಿಜಿಸ್ಟರ್ ಪೋಸ್ಟ್ ನಂಬಿಕೆ ಹಾಗೂ ವಿಶ್ವಾಸಾರ್ಹವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ನ್ಯಾಯಾಲಯಗಳ ಸಂದೇಶ, ಸೂಚನೆ, ಆದೇಶ, ಉದ್ಯೋಗ ನೇಮಕಾತಿ ಪತ್ರ, ಬ್ಯಾಂಕಿಂಗ್ ವ್ಯವಹಾರ ಸೇರಿದಂತೆ ಸರ್ಕಾರದ ಪ್ರಮುಖ ಪತ್ರ ವ್ಯವಹಾರಗಳು ಅಂಚೆ ಇಲಾಖೆಯ ರಿಜಿಸ್ಟರ್ ಪೋಸ್ಟ್ ಮೂಲಕವೇ ನಡೆಯುತ್ತಿತ್ತು. ಇಂತಹ ಪ್ರಮುಖ ಸಂವಹನವನ್ನು ಸ್ಥಗಿತ ಮಾಡಲು ಕೇಂದ್ರ ಸರ್ಕಾರಕ್ಕೆ ಕಾರಣವೂ ಇದೆ.

2011–12ರಲ್ಲಿ 244.4 ಮಿಲಿಯನ್ ಇದ್ದ ರಿಜಿಸ್ಟರ್ ಪೋಸ್ಟ್‌ಗಳ ಸಂಖ್ಯೆ 2019–20ರಲ್ಲಿ 184.6 ಮಿಲಿಯನ್‌ಗೆ ಕುಸಿಯಿತು. ಈ ಮೂಲಕ ಶೇ.25ರಷ್ಟು ರಿಜಿಸ್ಟರ್ಡ್ ಪೋಸ್ಟ್‌ಗಳ ಸಂಖ್ಯೆ ಕಡಿಮೆಯಾಯಿತು. 2024–25ರಲ್ಲಿ ಈ ಸಂಖ್ಯೆ ಮತ್ತಷ್ಟು ಕಡಿಮೆಯಾಗಿತ್ತು. ಈ ಹಿನ್ನೆಲೆ ಕೇಂದ್ರ ಸರ್ಕಾರ ರಿಜಿಸ್ಟರ್ಡ್ ಪೋಸ್ಟ್ ಸೇವೆ ಸ್ಥಗಿತಗೊಳಿಸುತ್ತಿದೆ. ಆದರೆ ಇದಕ್ಕೆ ಅಂಚೆ ಇಲಾಖೆ ಪರ್ಯಾಯ ಮಾರ್ಗ ಪರಿಚಯಿಸಿದೆ. ಖಾಸಗಿ ಕೊರಿಯರ್‌ಗಳು, ಡಿಜಿಟಲ್ ಅಳವಡಿಕೆ, ಇ–ಕಾಮರ್ಸ್ ಲಾಜಿಸ್ಟಿಕ್ ಸ್ಪರ್ಧೆಗಳಲ್ಲಿ ನಡೆಸುವ ಪತ್ರ ವ್ಯವಹಾರ ದುರುಪಯೋಗವಾಗುವ ಸಾಧ್ಯತೆ ಇದೆ. ಯಾವ ವಿಳಾಸಕ್ಕೆ ಪತ್ರ ಕಳುಹಿಸಲಾಗುತ್ತದೆಯೋ ಆ ವಿಳಾಸಕ್ಕೆ ಬಂದು ತಲುಪಲಿದೆ. ಆ ವೇಳೆ ಅದನ್ನು ಯಾರು ಬೇಕಾದರೂ ಪಡೆಯಬಹುದು. ಇದರಿಂದ ಈ ಎಲ್ಲಾ ಸಂವಹನವು ನಂಬಿಕಾರ್ಹವಲ್ಲ. ಎಲ್ಲದಕ್ಕಿಂತ ಪ್ರಮುಖವಾಗಿ ಅದು ದುರುಪಯೋಗವಾಗುವ ಸಾಧ್ಯತೆ ಹೆಚ್ಚು. ಆದರೆ ರಿಜಿಸ್ಟರ್ಡ್ ಪೋಸ್ಟ್ ಅತ್ಯಂತ ಸುರಕ್ಷೆ ಹಾಗೂ ವಿಶ್ವಾಸಾರ್ಹವಾದ್ದರಿಂದ ಅಪಾರ ಜನರ ನಂಬಿಕೆಗೆ ಪಾತ್ರವಾಗಿತ್ತು.

ಸ್ಪೀಡ್ ಪೋಸ್ಟ್‌ನಲ್ಲೇ ರಿಜಿಸ್ಟರ್ಡ್ ಪೋಸ್ಟ್ ವಿಲೀನ

ರಿಜಿಸ್ಟರ್ಡ್ ಪೋಸ್ಟ್ ಸೇವೆ ಸ್ಥಗಿತವಾಗಿದೆ ಎಂದು ಯಾರೂ ಆತಂಕ ಪಡುವ ಅಗತ್ಯವಿಲ್ಲ. ಏಕೆಂದರೆ ರಿಜಿಸ್ಟರ್ಡ್ ಪೋಸ್ಟ್ ಸೇವೆಯನ್ನು ಸ್ಪೀಡ್ ಪೋಸ್ಟ್‌ನೊಂದಿಗೆ ಕೇಂದ್ರ ಸರ್ಕಾರ ವಿಲೀನಗೊಳಿಸುತ್ತಿದೆ. ಆದರೆ, ರಿಜಿಸ್ಟರ್ ಪೋಸ್ಟ್ ಯಾರಿಗೆ ಅಡ್ರೆಸ್ ಮಾಡುತ್ತೇವೋ ಅವರೇ ಪಡೆಯಬೇಕು. ಆದರೆ ಸ್ಪೀಡ್ ಪೋಸ್ಟ್ ಯಾರದ್ದು, ಯಾರು ಬೇಕಾದರೂ ಪಡೆಯಬಹುದು. ಸದ್ಯ ಕೇಂದ್ರ ಸರ್ಕಾರ ರಿಜಿಸ್ಟರ್ಡ್ ಪೋಸ್ಟ್ ಸೇವೆಯನ್ನು ಸೆಪ್ಟಂಬರ್ 1ರಿಂದ ಸ್ಥಗಿತಗೊಳಿಸುತ್ತಿದೆ. ಅಷ್ಟರಲ್ಲಿ ಸ್ಪೀಡ್ ಪೋಸ್ಟ್‌ಗೂ ರಿಜಿಸ್ಟರ್ಡ್ ಪೋಸ್ಟ್ ಮಾದರಿ ಅನುಸರಿಸಬೇಕು ಎಂಬ ನಿಯಮಗಳು ಜಾರಿಗೊಳ್ಳುವ ಸಾಧ್ಯತೆ ಇದೆ. ಆದರೆ ರಿಜಿಸ್ಟರ್ಡ್ ಪೋಸ್ಟ್‌ಗಿಂತ ಸ್ಪೀಡ್ ಪೋಸ್ಟ್ ದುಬಾರಿಯಾಗಿದೆ. ರಿಜಿಸ್ಟರ್ಡ್ ಪೋಸ್ಟ್‌ನಲ್ಲಿ ಆರಂಭಿಕ ಶುಲ್ಕ 25.96 ರೂ. ನಿಗದಿಯಾಗಿದೆ. ಅದೇ ಸ್ಪೀಡ್ ಪೋಸ್ಟ್ ಆರಂಭಿಕ ಶುಲ್ಕ 41 ರೂ. ಶೇ.25ರಷ್ಟು ದರ ಹೆಚ್ಚಾಗಲಿದೆ. ಖಾಸಗಿ ಕೋರಿಯರ್‌ಗಳು, ಡಿಜಿಟಲ್ ಅಳವಡಿಕೆ ಹಾಗೂ ಇ ಕಾಮರ್ಸ್ ಲಾಜಿಸ್ಟಿಕ್ ಸ್ಪರ್ಧೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಅಂಚೆ ಇಲಾಖೆ ಸ್ಪೀಡ್ ಪೋಸ್ಟ್‌ನಲ್ಲಿ ಕೆಲವು ಸುಧಾರಣೆ ತರಲಿದೆ.

ಇಂಡಿಯಾ ಪೋಸ್ಟ್ ವೆಬ್‌ಸೈಟ್‌ನಲ್ಲಿ ಮಾಹಿತಿ

ಇಂಡಿಯಾ ಪೋಸ್ಟ್ ವೆಬ್‌ಸೈಟ್‌ನಲ್ಲಿ ರಿಜಿಸ್ಟರ್ಡ್ ಪೋಸ್ಟ್ ಅನ್ನು ಸ್ಪೀಡ್ ಪೋಸ್ಟ್‌ನಲ್ಲಿ ವಿಲೀನ ಮಾಡುತ್ತಿರುವ ವಿವರಣೆ ಇದೆ. ಆದರೆ ಅಂಚೆ ಇಲಾಖೆಯ ಪ್ರಧಾನ ಕಚೇರಿಯಿಂದ ನಮಗೆ ಈ ಕುರಿತಂತೆ ಯಾವುದೇ ಸರ್ಕ್ಯೂಲರ್ ಇನ್ನು ಬಂದಿಲ್ಲ. ಹಾಗಾಗಿ ಈ ವಿಚಾರದ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡಲಾಗದು. **– ಜಿ.ಹರೀಶ್, ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸ್, ಮೈಸೂರು ವಿಭಾಗ**

ಅಂಚೆ ಇಲಾಖೆಗೆ ಬ್ರಿಟಿಷ್ ಆಡಳಿತಾವಧಿಯ ಇತಿಹಾಸ

ಅಂಚೆ ಇಲಾಖೆಯ ಪ್ರಮುಖ ಸೇವೆಯಾದ ರಿಜಿಸ್ಟರ್ಡ್ ಪೋಸ್ಟ್ 1986ರಿಂದ ಕಾರ್ಯನಿರ್ವಹಿಸುತ್ತಿತ್ತು. ಇದಕ್ಕೂ ಮೊದಲು ಬ್ರಿಟಿಷರ ಕಾಲದಲ್ಲೂ ಇದು ಚಾಲ್ತಿಯಲ್ಲಿತ್ತು ಎನ್ನಲಾಗಿದೆ.

ಭಾರತದಲ್ಲಿ ಬ್ರಿಟಿಷರ ಅಧಿಕಾರಾವಧಿಯಲ್ಲಿ ಅಂಚೆ ಸೇವೆಯನ್ನು ಪರಿಚಯಿಸಲಾಯಿತು. ಬ್ರಿಟಿಷರಿಗೆ ಮಾತ್ರ ಸೀಮಿತವಾಗಿದ್ದ ಅಂಚೆ ಸೇವೆಯನ್ನು 1774 ರಲ್ಲಿ ಬ್ರಿಟಿಷ್ ಅಧಿಕಾರಿ ವಾರೆನ್ ಹೇಸ್ಟಿಂಗ್ಸ್ ಸಾರ್ವಜನಿಕರಿಗೂ ವಿಸ್ತರಿಸಿದರು.

ತರುವಾಯ ಬ್ರಿಟಿಷರ ಆಡಳಿತದಲ್ಲಿ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಡಾಲ್ ಹೌಸಿ ಅವರು ಅಕ್ಟೋಬರ್ 1, 1854 ರಲ್ಲಿ ಅಂಚೆ ಕಾಯ್ದೆ ಜಾರಿಗೊಳಿಸಿ ಭಾರತದ ಅಂಚೆ ಇಲಾಖೆಯನ್ನು ಸ್ಥಾಪನೆ ಮಾಡಿದರು. ಈ ಮೂಲಕ ಅಂಚೆ ಇಲಾಖೆಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದ ಡಾಲ್ ಹೌಸಿ, ದೇಶದಲ್ಲಿ ಏಕ ದರ ಜಾರಿಗೊಳಿಸಿದರು. ಈ ಸಂದರ್ಭದಲ್ಲಿಯೂ ರಿಜಿಸ್ಟರ್ಡ್ ಪೋಸ್ಟ್ ಚಾಲ್ತಿಯಲ್ಲಿತ್ತು ಎನ್ನಲಾಗಿದೆ.

ಭಾರತದ ಅಂಚೆ ಇಲಾಖೆ ವಿಶ್ವದಲ್ಲೇ ಅತಿ ದೊಡ್ಡ ಅಂಚೆ ಜಾಲ ಹೊಂದಿದೆ. ದೇಶದಲ್ಲಿ 1,64,987 ಅಂಚೆ ಕಚೇರಿ ಕಾರ್ಯನಿರ್ವಹಿಸುತ್ತಿದ್ದು, 23 ಅಂಚೆ ವಲಯವಾಗಿ ವಿಂಗಡಿಸಿ, ಪ್ರತಿ ವಲಯದಲ್ಲೂ ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್ ನಿರ್ವಹಣೆ ಮಾಡುತ್ತಾರೆ. ಆಧುನಿಕವಾಗಿ ತಂತ್ರಜ್ಞಾನದಲ್ಲಿ ಸಂಹವನ ಪ್ರಭಾವಯುತವಾಗಿದೆ. ಖಾಸಗಿ ಕೋರಿಯರ್‌ಗಳು, ಡಿಜಿಟಲ್ ಅಳವಡಿಕೆ ಹಾಗೂ ಇ ಕಾಮರ್ಸ್ ಲಾಜಿಸ್ಟಿಕ್‌ಗಳ ಪರಿಣಾಮಕಾರಿ ಸ್ಪರ್ಧೆ ಇದ್ದರೂ ದೇಶದಲ್ಲಿ ಅಂಚೆ ಇಲಾಖೆ ವಿಶ್ವಾಸಾರ್ಹತೆಯಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಈಗ ಕೇಂದ್ರ ಸರ್ಕಾರ ರಿಜಿಸ್ಟರ್ಡ್ ಪೋಸ್ಟ್ ಸೇವೆ ಸ್ಥಗಿತ ಮಾಡಿ ಸ್ಪೀಡ್ ಪೋಸ್ಟ್‌ನಲ್ಲಿ ವಿಲೀನಗೊಳಿಸುತ್ತಿದೆ. ಸೆಪ್ಟಂಬರ್ 1 ರಿಂದ ರಿಜಿಸ್ಟರ್ಡ್ ಪೋಸ್ಟ್ ಸ್ಪೀಡ್ ಪೋಸ್ಟ್ ಆಗಿ ಪರಿಚಯಗೊಳ್ಳಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಜಿಎಸ್‌ಟಿ ನೋಟಿಸ್ ಬಗ್ಗೆ ಗಾಬರಿ ಬೇಡ, ಕಚೇರಿ ಸಂಪರ್ಕಿಸಿ ಸಮಸ್ಯೆ ನಿವಾರಿಸಿಕೊಳ್ಳಿ

ವಾಣಿಜ್ಯ ತೆರಿಗೆ ಇಲಾಖೆ ಪ್ರಭಾರ ಜಂಟಿ ಆಯುಕ್ತೆ ಪಿ.ಡಿ.ಶೋಭಾ ಸಲಹೆ



ಮೈಸೂರಿನ ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಇಲಾಖೆ ಆವರಣದಲ್ಲಿ ಸರಕು ಮತು ಸೇವಾ ತೆರಿಗೆ ಕಾನೂನಿನ ಅಡಿಯಲ್ಲಿ ನೋಂದಣಿ ಪಡೆಯುವ ಅಗತ್ಯತೆ ಹಾಗೂ ತೆರಿಗೆ ಪಾವತಿ ಕುರಿತಾಗಿ ವರ್ತಕರು ಮತ್ತು ಉದ್ಯಮಿಗಳಿಗಾಗಿ ಆಯೋಜಿಸಿದ್ದ ಅರಿವು ಕಾರ್ಯಾಗಾರದಲ್ಲಿ ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಇಲಾಖೆ ಪ್ರಭಾರ ಜಂಟಿ ಆಯುಕ್ತೆ ಪಿ.ಡಿ.ಶೋಭಾ ಮಾತನಾಡಿದರು.

ಮೈಸೂರು, ಆ.4(ಜಿಎ)–ವರ್ತಕರು, ಉದ್ಯಮಿಗಳು ಜಿಎಸ್‌ಟಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಇದ್ದರೂ ಗಾಬರಿಗೊಳ್ಳಬೇಡಿ. ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿಗೆ ಭೇಟಿ ನೀಡಿ ಯಾವುದೇ ಗೊಂದಲವಿದ್ದರೂ ಅಧಿಕಾರಿಗಳು ನಿವಾರಿಸಲಿದ್ದಾರೆ ಎಂದು ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಇಲಾಖೆಯ ಪ್ರಭಾರ ಜಂಟಿ ಆಯುಕ್ತೆ ಪಿ.ಡಿ.ಶೋಭಾ ತಿಳಿಸಿದರು.

ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಇಲಾಖೆ ಆವರಣದಲ್ಲಿ ಸರಕು ಮತ್ತು ಸೇವಾ ತೆರಿಗೆ ಕಾನೂನಿನ ಅಡಿಯಲ್ಲಿ ನೋಂದಣಿ ಪಡೆಯುವ ಅಗತ್ಯತೆ ಹಾಗೂ ತೆರಿಗೆ ಪಾವತಿ ಕುರಿತಾಗಿ ವರ್ತಕರು ಮತ್ತು ಉದ್ಯಮಿಗಳಿಗಾಗಿ ಆಯೋಜಿಸಿದ್ದ ಅರಿವು ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಅಧಿಕಾರಿಗಳು ಮತ್ತು ವರ್ತಕರ ನಡುವೆ ಸಂಪರ್ಕ ಸೇತುವೆ ಇಲ್ಲದಿರುವುದರಿಂದ ಸಾಕಷ್ಟು ಸಮಸ್ಯೆಗಳು ಉದ್ಭವವಾಗುತ್ತಿದ್ದು, ಅದನ್ನು ನಿವಾರಿಸುವ ನಿಟ್ಟಿನಲ್ಲಿ ಇಂದು ಅರಿವು ಕಾರ್ಯಕ್ರಮ ಆಯೋಜಿಸಿ ನಿಮ್ಮಲ್ಲಿರುವ ಗೊಂದಲಗಳಿಗೆ ಸೂಕ್ತ ಸಲಹೆ, ಪರಿಹಾರ ಒದಗಿಸಲಾಗುತ್ತಿದೆ ಎಂದರು.

ಸರಕು ಮತ್ತು ಸೇವಾ ತೆರಿಗೆ ಇಲಾಖೆಯ ನೋಟಿಸ್ ಬಂದ ತಕ್ಷಣ ಆತಂಕಕ್ಕೆ ಒಳಗಾಗಬೇಡಿ. ಬದಲಾಗಿ ತಕ್ಷಣ ಕರೆ ಮಾಡಿ ಅಥವಾ ನೇರವಾಗಿ ಕಚೇರಿಗೆ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳಿ. ಕಳೆದ ತಿಂಗಳು ಯುಪಿಐನಿಂದ ಮಾಹಿತಿ ಸಂಗ್ರಹಿಸಿ ಅದರ ಅನುಗುಣವಾಗಿ ನೋಟಿಸ್ ನೀಡಲಾಗಿತ್ತು. ನಾವು ಕಳಿಸಿದ್ದು, ನೋಟಿಸ್ ಅಲ್ಲ. ಅದು ನಿಮ್ಮ ಮಾಹಿತಿ ಅಷ್ಟೇ. ಅರಿವಿನ ಕೊರತೆಯಿಂದ ಸಾಕಷ್ಟು ಗೊಂದಲ ಸೃಷ್ಟಿಯಾಯಿತು. ಆದರೆ, ಮೈಸೂರಿನ ಜನತೆ ವಿದ್ಯಾವಂತರಾಗಿರುವುದರಿಂದ ಯಾರು ಹೆದರಲಿಲ್ಲ ಎಂದು ತಿಳಿಸಿದರು.

ನೀವು ಕಟ್ಟುವ ತೆರಿಗೆ ಮತ್ತೆ ನಿಮ್ಮ ಬಳಿಗೆ ಬರುತ್ತದೆ. ಸರ್ಕಾರ ಮಾಡುವ ರಸ್ತೆ, ಸೇತುವೆ, ಕಟ್ಟಡಗಳ ನಿರ್ಮಾಣ ಸೇರಿದಂತೆ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ನೀವು ಕಟ್ಟುವ ತೆರಿಗೆ ನಿಯೋಗವಾಗಿ ನಿಮ್ಮ ಬಳಿಗೆ ಅಭಿವೃದ್ಧಿ ರೂಪದಲ್ಲಿ ಹಿಂದಿರುಗಲಿದೆ.

ಸಭೆಯಲ್ಲಿ ಪಾಲ್ಗೊಂಡಿದ್ದ ಮೈಸೂರು ಜಿಲ್ಲಾ ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, 2017ರಿಂದ ಜಿಎಸ್‌ಟಿ ಜಾರಿಗೆ ಬಂದಿದ್ದು, ಅಂದು ಅನೇಕ ರಾಜ್ಯ ಸರ್ಕಾರಗಳು ಅದನ್ನು ನಿರಾಕರಿಸಿದವು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಲೋಚನೆ ಮಾಡಿ ರಾಜ್ಯದಲ್ಲಿಯೂ ಅನುಷ್ಠಾನಗೊಳಿಸಿದರು. ಜಿಎಸ್‌ಟಿ ಸರಳೀರಣವಾಗಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಿ, ಭಯ ದೂರವಾಗಲಿದೆ ಎಂದರು.

ಯಾವುದೇ ಸರ್ಕಾರ ಆಡಳಿತ ನಡೆಸಲು ತೆರಿಗೆ ಬಹಳ ಮುಖ್ಯ. ಆದ್ದರಿಂದ ಜಿಎಸ್‌ಟಿಗೆ ಒತ್ತು ನೀಡಲಾಗಿದ್ದು, ಇದರಿಂದ ಸರ್ಕಾರಕ್ಕೆ ಉತ್ತಮ ತೆರಿಗೆ ಸಂಗ್ರಹವಾಗುತ್ತದೆ. ತೆರಿಗೆದಾರರ ಸಂಖ್ಯೆಯೂ ಹೆಚ್ಚಳವಾಗುತ್ತದೆ. ಈ ಹಿನ್ನೆಲೆಯಲ್ಲಿ ತೆರಿಗೆ ಸಂಬಂಧಿಸಿದಂತೆ ಇಲಾಖೆಗಳು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕು. ಆದರೆ, ಮೈಸೂರಿನಲ್ಲಿ ಮಾಡಿರಲಿಲ್ಲ. ಇಂದು ಮಾಡಿದರೇ ಅದು ಸಂತಸದ ವಿಚಾರ. ಅಧಿಕಾರಿಗಳನ್ನು ಭೇಟಿ ಮಾಡಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಕೆಲವು ಕ್ಷೇತ್ರಕ್ಕೆ ರಿಯಾಯಿತಿ ನೀಡಿದ್ದಾರೆ. ಮಿತಿ ಮೀರಿದಾಗ ಮಾತ್ರ ತೆರಿಗೆಗೆ ಒಳಪಡಿಸುತ್ತೇವೆ. ತೆರಿಗೆ ಕಟ್ಟಿದಾಗ ಮಾತ್ರ ಅಭಿವೃದ್ಧಿಯಾಗುತ್ತದೆ. ಕಳೆದ ತಿಂಗಳು ವರ್ತಕರಿಗೆ ನೀಡಿದ ನೋಟಿಸ್‌ನಿಂದ ಬೆಂಗಳೂರಿನಲ್ಲಿ ಆತಂಕ ಸೃಷ್ಟಿಯಾಗಿತ್ತು. 5 ವರ್ಷದ ನಂತರ ಏಕೆ ನೋಟಿಸ್ ನೀಡುವುದು ಎಂದು ಪ್ರಶ್ನಿಸಿದ ಅವರು, ಅದನ್ನು ಕಟ್ಟುವುದು ಕಷ್ಟಕರ ಪ್ರತಿ ವರ್ಷ ನೋಟಿಸ್ ನೀಡಿ, ತೆರಿಗೆ ಸಂಗ್ರಹ ಮಾಡಿ ಅದು ಎಲ್ಲರಿಗೂ ಅನುಕೂಲಕರವಾಗಲಿದೆ ಎಂದರು.

ಸಭೆಯಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ಮತ್ತಿತರರು ಉಪಸ್ಥಿತರಿದ್ದರು.

ಜಿಎಸ್‌ಟಿ ನೋಂದಣಿ

ಜಿಎಸ್‌ಟಿ ನೋಂದಣಿಗೆ ಪಾನ್ ಕಾರ್ಡ್, ಆಧಾರ್ ಕಾರ್ಡ್, ಗುರುತಿನ ಪುರಾವೆಗೆ ಮತದಾರರ ಚೀಟಿ ಅಥವಾ ಆಧಾರ್ ಕಾರ್ಡ್, ಒಂದು ಫೋಟೋ, ವಿಳಾಸದ ಪುರಾವೆ, ವ್ಯವಹಾರ ವಿಳಾಸದ ಪುರಾವೆ, ಬ್ಯಾಂಕಿನ ಖಾತೆ ವಿವರಗಳ ದಾಖಲೆಗಳು ಅಗತ್ಯವಿದ್ದು, ಈ ಎಲ್ಲಾ ದಾಖಲೆಗಳನ್ನು ಸಿದ್ಧಪಡಿಸಿಕೊಂಡು ನಂತರ gst.gov.in ವೆಬ್‌ಸೈಟ್‌ಗೆ ಭೇಟಿ ನೀಡಿ, ಮೊದಲ ಎ(ಸ್ವವಿರಗಳನ್ನು) ಅರ್ಜಿಯನ್ನು ಭರ್ತಿ ಮಾಡಬೇಕು. ನಂತರ ಓಟಿಪಿ ಸಲ್ಲಿಸಬೇಕು. ಅಗತ್ಯವಿರುವ ಎಲ್ಲಾ ದಾಖಲೆಗಳು ಅಪ್‌ಲೋಡ್ ಮಾಡಬೇಕು. ತದನಂತರ ಬಿ(ವಹಿವಾಟಿನ) ಅರ್ಜಿ ಭರ್ತಿ ಮಾಡಿ, ಅಧಿಕಾರಿಗಳ ಅನುಮೋದನೆ ತಲುಪಿ ಜಿಎಸ್‌ಟಿ ಲಭ್ಯವಾಗಲಿದ್ದು, ನೋಂದಣಿಗೆ ಯಾವುದೇ ಶುಲ್ಕವಿರುವುದಿಲ್ಲ.

ಯುಪಿಐ ವಹಿವಾಟಿನ ಮೇಲೆ ಜಿಎಸ್‌ಟಿ ವಿಧಿಸಿಲ್ಲ

ಅರಿವು ಕಾರ್ಯಾಗಾರದಲ್ಲಿ ಸಹಾಯಕ ಆಯುಕ್ತ ಸುಪ್ರೀತ್ ದೇವ್ ಮಾತನಾಡಿ, ಯುಪಿಐ ವಹಿವಾಟುಗಳ ಮೇಲೆ ಜಿಎಸ್‌ಟಿ ವಿಧಿಸಲಾಗಿಲ್ಲ. ಬದಲಾಗಿ ಯುಪಿಐ ವಹಿವಾಟನ್ನು ನೋಂದಣಿ ಮಿತಿಗಳನ್ನು ಮೀರಿದ ವ್ಯಾಪಾರಗಳನ್ನು ಗುರುತಿಸಲು ಮಾತ್ರ ಬಳಸಲಾಗುತ್ತದೆ ಎಂದು ತಿಳಿಸಿದರು.

ಪಿಪಿಟಿ ಮೂಲಕ ಜಿಎಸ್‌ಟಿ ನೋಂದಣಿ, ವಾರ್ಷಿಕ ವಹಿವಾಟು ಮಿತಿ, ವಿನಾಯಿತಿ ಪಡೆದ ಸರಕು ಮತ್ತು ಸೇವೆ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ವರ್ತಕರಿಗೆ ವಿವರಿಸಿದ ಅವರು, ನೋಟಿಸ್ ಬಂದರೆ ಗಾಬರಿಯಾಗಬೇಡಿ, ಬದಲಾಗಿ ನೋಟಿಸ್ ಸ್ವೀಕರಿಸಿದ ತಕ್ಷಣ ಇಲಾಖೆಯನ್ನು ಸಂಪರ್ಕಿಸಿ, ನಿಮ್ಮ ವ್ಯವಹಾರ ಮತ್ತು ವಹಿವಾಟಿಗೆ ಸಂಬಂಧಿಸಿದ ಪೂರಕ ದಾಖಲೆ, ಪುರಾವೆಗಳನ್ನು ಸಲ್ಲಿಸಬಹುದು. ನೀವು ಒದಗಿಸಿದ ಪುರಾವೆಗಳ ಆಧಾರದ ಮೇಲೆ ಇಲಾಖೆಯೂ ನಿಮ್ಮ ವಾರ್ಷಿಕ ವಹಿವಾಟನ್ನು ಪರಿಶೀಲನೆ ನಡೆಸುತ್ತದೆ ಎಂದರು.

ಮೊದಲು ವಾರ್ಷಿಕ ವಹಿವಾಟಿನ ಬಗ್ಗೆ ಮಾತನಾಡಿದ ಅವರು, ಸರಕುಗಳಲ್ಲಿ ಮಾತ್ರ ವ್ಯವಹರಿಸುವ ವ್ಯಾಪಾರಿಗಳಿಗೆ 40 ಲಕ್ಷ ರೂ. ವಾರ್ಷಿಕ ವಹಿವಾಟಿನ ಮಿತಿ ಇರಲಿದ್ದು, ಸೇವೆಗಳಲ್ಲಿ ವ್ಯವಹರಿಸುವವರಿಗೆ 20 ಲಕ್ಷ ರೂ. ಮಿತಿಯೂ ಸೇವೆಗಳು ಮತ್ತು ಪೂರೈಕೆ ವ್ಯಾಪಾರಿಗಳಿಗೆ ಮಿತಿ ಇದೆ. ತುಪ್ಪ, ಐಸ್‌ಕ್ರೀಮ್, ಖಾದ್ಯ ತೈಲಗಳು, ಸಂಸ್ಕರಿಸಿದ ಆಹಾರಗಳು, ಹೋಟೆಲ್ ಇತ್ಯಾದಿ ಸರಕುಗಳು ಮತ್ತು ಸೇವೆಗಳ ಮೇಲೆ ತೆರಿಗೆ ವಿಧಿಸಲಾಗುತ್ತದೆ. ಹಾಗೇ ತಾಜಾ ಹಣ್ಣು, ತರಕಾರಿಗಳು, ಮಾಂಸ, ಸಂಸ್ಕರಿಸದ ಆಹಾರ ಧಾನ್ಯಗಳು, ಶೈಕ್ಷಣಿಕ ಸೇವೆಗಳಿಗೆ ಸರಕುಗಳು ಮತ್ತು ಸೇವೆಗಳ ಮೇಲೆ ತೆರಿಗೆ ವಿನಾಯಿತಿ ನೀಡಲಾಗಿದೆ ಎಂದರು. ಸಹಾಯವಾಣಿ ಸಂಖ್ಯೆ 0821–2420360, 18004256300 ಸಂಪರ್ಕಿಸಿ, ಅಥವಾ ಕಚೇರಿಯೂ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಇರಲಿದ್ದು ನೇರವಾಗಿ ಭೇಟಿ ಮಾಡಿ, ಗೊಂದಲಗಳನ್ನು ನಿವಾರಿಸಿಕೊಳ್ಳಬಹುದು.

20 ಎಕರೆಯಲ್ಲಿ ಅಶೋಕಪುರಂ ಟೌನ್‌ಶಿಪ್‌ಗೆ ಯತ್ನ

- ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಿಂತನೆ
- ಬಡಾವಣೆಯ ಬಡವರಿಗೆ ಮೂಲಸೌಕರ್ಯ ಕಲ್ಪಿಸಲು ಬದ್ಧ



ಅಶೋಕಪುರಂನಲ್ಲಿ ವಿಶ್ವಮಾನವ ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಸಂಘವನ್ನು ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಿ, ಮಾತನಾಡಿದರು.

ಮೈಸೂರು, ಆ.4– ಅಶೋಕಪುರಂ ಟೌನ್‌ಶಿಪ್ ನಿರ್ಮಾಣಕ್ಕೆ ಪ್ರಯತ್ನ ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ನಗರದ ಅಶೋಕಪುರಂನಲ್ಲಿ ಭಾನುವಾರ ನಡೆದ ವಿಶ್ವಮಾನವ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದ ನೂತನ ಸಂಘದ ಉದ್ಘಾಟನೆ ಹಾಗೂ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಲ್ಲಿ ವಾಸಿಸುತ್ತಿರುವ ಬಡವರಿಗೆ ಮನೆ ನಿರ್ಮಾಣ ಸೇರಿ ಮೂಲಸೌಕರ್ಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅಧಿಕಾರ ಇರುವವರೆಗೂ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಅಶೋಕಪುರಂ ಟೌನ್‌ಶಿಪ್ ನಿರ್ಮಾಣಕ್ಕೆ 20 ಎಕರೆ ಜಾಗದ ಅವಶ್ಯಕತೆ ಇದ್ದು, ನಗರದೊಳಗೆ ಅಥವಾ ಹೊರಗೆ ಜಾಗ ಸಿಕ್ಕಲ್ಲಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಅಶೋಕಪುರಂ ಎಂದರೆ ಸ್ವಾಭಿಮಾನ. ಸುತ್ತಮುತ್ತಲಿನ ಹಳ್ಳಿಗಳು ಸೇರಿದಂತೆ ಸಂವಿಧಾನಕ್ಕೂ ರಕ್ಷಾ ಕವಚವಾಗಿದೆ. ಅಂಬೇಡ್ಕರ್ ಮರೆತರೆ ದೇಶಕ್ಕೆ ಉಳಿವಿಲ್ಲ. ಸಂವಿಧಾನ ಅಪಕೀರ್ತಿಗೊಳಿಸಿದರೆ ಅವರಿಗೆ ಉಳಿಗಾಲವಿಲ್ಲ. ರಾಜಕೀಯ ಅಧಿಕಾರ ಎನ್ನುವುದು ಸಮಸ್ಯೆಗಳಿಗೆ ಬೀಗದ ಕೀ ಇದ್ದಂತೆ. ಈ ಕೀ ಸರಿಯಾದವರ ಕೈಯ್ಯಲ್ಲಿರಬೇಕು. ಇಲ್ಲದಿದ್ದರೆ ಶೋಷಿತರ ಬಗ್ಗೆ ಕಾಳಜಿ ಇರುವುದಿಲ್ಲ. ಅಂತಹವರು ಅಂಬೇಡ್ಕರ್ ಮತ್ತು ಸಂವಿಧಾನವನ್ನು ಅಗೌರವದಿಂದ ಕಾಣುತ್ತಾರೆ. ನಮ್ಮ ಸರ್ಕಾರ ಬಂದ ಮೇಲೆ, ಶಾಲಾ–ಕಾಲೇಜುಗಳಲ್ಲಿ ಸಂವಿಧಾನದ ಪೀಠಿಕೆ ಓದುವುದು ಕಡಾಯಗೊಳಿಸಲಾಗಿದೆ. ಅಂಬೇಡ್ಕರ್ ಕುರಿತು ಅರಿವು ಮೂಡಿಸಲಾಗುತ್ತಿದೆ. ಇದೊಂದು ಹೊಸ ಕ್ರಾಂತಿಯಾಗಿದೆ ಎಂದರು.

ಸಂಘದ ಭವನ ನವೀಕರಣಕ್ಕೆ 70 ಲಕ್ಷ ಅನುದಾನ ನೀಡುವಂತೆ ಪದಾಧಿಕಾರಿಗಳು ಕೋರಿದ್ದು, 1 ಕೋಟಿಯನ್ನೇ ಕೊಡಲು ಪ್ರಯತ್ನಿಸುತ್ತೇನೆ. ಅಲ್ಲದೆ, ಲೋಕಾಯುಕ್ತ ಕಚೇರಿ ಸಮೀಪದ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸಲು ಟೆಂಡರ್ ಆಗಿದ್ದು, 20 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಈ ಭಾಗದ ಅಭಿವೃದ್ಧಿ ಕಾಮಗಾರಿಗಳ ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಯುಜಿಡಿ, ಮಳೆ ನೀರು ಚರಂಡಿ ಸೇರಿದಂತೆ ಅನೇಕ ಕೆಲಸ ಬಾಕಿ ಇದ್ದು, ಶೀಘ್ರದಲ್ಲಿ ಕಾಮಘಾರಿ ಕೈಗೊಳ್ಳಲಾಗುವುದು. ಸಮುದಾಯ ಭವನದ ನವೀಕರಣಕ್ಕೆ ಶಾಸಕರ ನಿಧಿಯಿಂದ 20 ಲಕ್ಷ ರೂ. ನೀಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಅಂಬೇಡ್ಕರ್ ಸಮುದಾಯ ಭವನದ ಅಧ್ಯಕ್ಷ ಎಂ.ದೊಡ್ಡಸಿದ್ದಯ್ಯ, ಆದಿಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಪಿ.ಸಿದ್ದರಾಜು, ದೊಡ್ಡಗರಡಿ ಅಧ್ಯಕ್ಷ ಅರ್.ಸಿ.ಮಹೇಶ್, ಚಿಕ್ಕಗರಡಿ ಅಧ್ಯಕ್ಷ ಬಿ.ನಾಗರಾಜ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರಭುಮೂರ್ತಿ, ಪಲ್ಲವಿ ಬೇಗಂ, ಭುವನೇಶ್ವರಿ, ಮುಖಂಡರಾದ ರವಿ, ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

5ನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತಕ್ಕೆ 6 ರನ್‌ಗಳ ವಿರೋಚಿತ ಗೆಲುವು

ಸಚಿನ್-ಆಂಡರ್ಸನ್ ಟೆಸ್ಟ್ ಸರಣಿ ಡ್ರಾ



ಐದನೇ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ರೋಚಕ ಗೆಲುವು.

ಲಂಡನ್: ಆತಿಥೇಯ ಇಂಗ್ಲೆಡ್‌ನಲ್ಲಿ ನಡೆಯುತ್ತಿರುವ ಐದು ಪಂದ್ಯಗಳ ಟೆಸ್ಟ್ ಸರಣಿಯ ಐದನೇ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ರೋಚಕ ಗೆಲುವು ಸಾಧಿಸಿದೆ. ಈ ಪಂದ್ಯದ ಗೆಲುವಿನ ಮೂಲಕ ಸರಣಿಯಲ್ಲಿ ಸಮಬಲ ಸಾಧಿಸಿದೆ. ದ್ವಿತೀಯ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್‌ಗೆ ಗೆಲ್ಲಲು 374 ರನ್ ಬೇಕಿತ್ತು. ಆದರೆ 367 ರನ್‌ಗಳಿಗೆ ಇಂಗ್ಲೆಂಡ್ ತಂಡವನ್ನು ಆಲೌಟ್ ಮಾಡುವ ಮೂಲಕ ಭಾರತ ವಿರೋಚಿತ ಗೆಲುವು ಸಾಧಿಸಿತು. ಭಾರತೀಯ ಬೌಲರ್‌ಗಳಾದ ಪ್ರಸಿದ್ಧ್ ಕೃಷ್ಣ ಮತ್ತು ಮೊಹಮ್ಮದ್ ಸಿರಾಜ್ ಉತ್ಕೃಷ್ಟ ಬೌಲಿಂಗ್ ಪ್ರದರ್ಶನ ನೀಡಿ ತಂಡಕ್ಕೆ ಗೆಲುವು ತಂದುಕೊಟ್ಟರು. ಭಾರತ ಮತ್ತು ಇಂಗ್ಲೆಂಡ್ ತಲಾ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದು ಒಂದು ಪಂದ್ಯ ಡ್ರಾನಲ್ಲಿ ಅಂತ್ಯವಾಗಿತ್ತು.

ಐದನೇ ದಿನವಾದ ಇಂದು ಇಂಗ್ಲೆಂಡ್ ತಂಡದ ಬಳಿ ನಾಲ್ಕು ವಿಕೆಟ್ ಇದ್ದು 35 ರನ್ ಬಾರಿಸಬೇಕಿತ್ತು ಇಂಗ್ಲೆಂಡ್ ಗೆಲುವಿನ ಹೊಸ್ತಿಲಲ್ಲಿತ್ತು. ಎಲ್ಲರೂ ಟೀಮ್ ಇಂಡಿಯಾದ ಸೋಲನ್ನು ಊಹಿಸಿದ್ದರು. ಆದರೆ ಟೆಸ್ಟ್‌ನ ಐದನೇ ದಿನದಂದು ಟೀಮ್ ಇಂಡಿಯಾದ ಬೌಲರ್‌ಗಳು ಹೊಸ ಇತಿಹಾಸ ನಿರ್ಮಿಸಿದರು. ಸಿರಾಜ್ ಮತ್ತು ಪ್ರಸಿದ್ಧ್ ಕೃಷ್ಣ ಒಟ್ಟಾಗಿ ಇಂಗ್ಲೆಂಡ್‌ನ ಬಾಯಿಂದ ಜಯವನ್ನು ಕಸಿದುಕೊಂಡರು. ಭಾರತೀಯ ಬೌಲರ್‌ಗಳು ಓವಲ್‌ನಲ್ಲಿ ಅಸಾಧ್ಯವಾದುದ್ದನ್ನು ಸಾಧಿಸಿದರು. ಇದು ಬಹುಶಃ ಟೆಸ್ಟ್ ಕ್ರಿಕೆಟ್‌ನಲ್ಲಿ ಶತಮಾನಕ್ಕೊಮ್ಮೆ ಸಂಭವಿಸುತ್ತದೆ.

ಸಿರಾಜ್ ಅವರ ಮಾರಕ ಬೌಲಿಂಗ್‌ನ ಬಲದಿಂದ, ಭಾರತ ತಂಡವು ರೋಚಕ ಪಂದ್ಯದಲ್ಲಿ ಇಂಗ್ಲೆಂಡ್ ಅನ್ನು 6 ರನ್‌ಗಳಿಂದ ಸೋಲಿಸಿತು. ಆಟವು ಪ್ರತಿ ಚೆಂಡಿನಲ್ಲೂ ತಿರುಗುತ್ತಿತ್ತು. ಅಭಿಮಾನಿಗಳು ಉಸಿರು ಬಿಗಿಹಿಡಿಯುವಂತೆ ಮಾಡಿತ್ತು. ಆದರೆ ಕ್ರಿಕೆಟ್ ಮೈದಾನದಲ್ಲಿ ಪವಾಡಗಳು ನಡೆದಿವೆ. ಟೀಮ್ ಇಂಡಿಯಾ ಓವಲ್‌ನಲ್ಲಿ ಪವಾಡ ಮಾಡಿದೆ. ಇಂಗ್ಲೆಂಡ್ ಗೆಲ್ಲಲು 35 ರನ್‌ಗಳ ಅಗತ್ಯವಿತ್ತು. ಐದನೇ ದಿನದಂದು ಜೇಮೀ ಸ್ಮಿತ್ ಮತ್ತು ಓವರ್ಟನ್ ಬ್ಯಾಟಿಂಗ್ ಮಾಡಲು ಬಂದರು. ಇಂಗ್ಲೆಂಡ್ 347 ರನ್ ಗಳಿಸಿದ್ದಾಗ ಸಿರಾಜ್ ಅವರ ಸ್ವಿಂಗ್ ಚೆಂಡು ಜೇಮೀ ಸ್ಮಿತ್ ಅವರು ಔಟಾಗುವಂತೆ ಮಾಡಿತು. ಈ ಮೂಲಕ ಇಂಗ್ಲೆಂಡ್‌ಗೆ ಏಳನೇ ಹೊಡೆತ ಬಿತ್ತು. ಸಿರಾಜ್ ಜೇಮೀ ಓವರ್ಟನ್ ಅವರನ್ನು ಔಟ್ ಮಾಡಿದರು.

ಇಂಗ್ಲೆಂಡ್ ಈಗ 8 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಗೆಲಲ್ಲು ಇನ್ನೂ 20 ರನ್‌ಗಳ ದೂರದಲ್ಲಿತ್ತು. ಇನ್ನೊಂದು ತುದಿಯಿಂದ ವಿನಾಶಕಾರಿ ಬೌಲಿಂಗ್ ಮಾಡುತ್ತಿದ್ದ ಪ್ರಸಿದ್ಧ್ ಕೃಷ್ಣ ಜೋಶ್ ಟಂಗ್ ಅವರನ್ನು ಬೌಲ್ಡ್ ಮಾಡಿದರು. ಆಗ ಇಂಗ್ಲೆಂಡ್ ಶಿಬಿರದಲ್ಲಿ ಮೌನ ಆವರಿಸಿತ್ತು. ಭಾರತೀಯ ತಂಡ ಮತ್ತು ಪ್ರೇಕ್ಷಕರು ಹೊಸ ಚೈತನ್ಯವನ್ನು ಪಡೆದಂತೆ ಕಾಣುತ್ತಿತ್ತು. ಆದರೆ ಕೆಲಸ ಇನ್ನೂ ಮುಗಿದಿಲ್ಲ ಮತ್ತು ಒಂದು ವಿಕೆಟ್ ಉಳಿದಿತ್ತು.

ಗಾಯಗೊಂಡಿದ್ದರೂ ಕ್ರಿಸ್ ವೋಕ್ಸ್ ಬ್ಯಾಟಿಂಗ್ ಮಾಡಲು ಮೈದಾನಕ್ಕೆ ಬಂದರು. ಆದರೆ ಟೀಮ್ ಇಂಡಿಯಾ ಗಸ್ ಅಟ್ಕಿನ್ಸನ್‌ರಿಂದ ಅಪಾಯದಲ್ಲಿತ್ತು. ಈ ವೇಳೆ ಅಟ್ಕಿನ್ಸನ್ ಸ್ಫೋಟಕ ಬ್ಯಾಟಿಂಗ್ ಮಾಡಲು ಮುಂದಾದರು. ಅಟ್ಕಿನ್ಸನ್ ಒಂದು ಚೆಂಡನ್ನು ಕನೆಕ್ಟ್ ಮಾಡುವಲ್ಲಿಯೂ ಯಶಸ್ವಿಯಾಗಿದ್ದು ಸಿಕ್ಸ್ ಬಾರಿಸಿದರು. ಈಗ ಇಂಗ್ಲೆಂಡ್‌ಗೆ 11 ರನ್ ಬೇಕಿತ್ತು. ಇಂಗ್ಲೆಂಡ್ ಪ್ರತಿ ರನ್ನೊಂದಿಗೆ ಗೆಲುವಿಗೆ ಹತ್ತಿರವಾಗುತ್ತಿತ್ತು. ಆತಿಥೇಯ ತಂಡಕ್ಕೆ 7 ರನ್‌ಗಳು ಬೇಕಾಗಿತ್ತು. ಆಗ ಭರವಸೆಗಳು ಸಿರಾಜ್ ಮೇಲೆ ಮಾತ್ರ ಇದ್ದವು. ನಂತರ ಸಿರಾಜ್ ಅದ್ಭುತ ಯಾರ್ಕರ್ ಹಾಕಿದ್ದು ಅಟ್ಕಿನ್ಸನ್ ಬೌಲ್ಡ್ ಆದರು. ಈ ವಿಕೆಟ್‌ನೊಂದಿಗೆ, ಟೀಮ್ ಇಂಡಿಯಾ ಸಂಭ್ರಮಾಚರಣೆಯಲ್ಲಿ ಮುಳುಗಿತು. ಇದು ಓವಲ್ ಮೈದಾನದಲ್ಲಿ ಒಂದು ಪವಾಡಕ್ಕಿಂತ ಕಡಿಮೆಯಿಲ್ಲ. ಈ ಪಂದ್ಯದ ಗೆಲುವು ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ವರ್ಷಗಳ ಕಾಲ ನೆನಪಿನಲ್ಲಿ ಉಳಿಯುವಂತಹದು. ಸಿರಾಜ್ ಪಂದ್ಯದಲ್ಲಿ ಒಟ್ಟು 9 ವಿಕೆಟ್‌ಗಳನ್ನು ಕಬಳಿಸಿದರು.

ಅವಧಿ ವಿಸ್ತರಣೆ

ಮೈಸೂರು,ಆ.4–ಜವಾಹರ ನವೋದಯ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ವರ್ಷಕ್ಕಾಗಿ 6ನೇ ತರಗತಿಗಾಗಿ ಪ್ರವೇಶ ಪರೀಕ್ಷೆಯ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆ ಅವಧಿಯನ್ನು ಆ.13ರವರೆಗೆ ವಿಸ್ತರಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿಗಳನ್ನು www.navodaya.gov.in ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2970040 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಿಪೆಟ್ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಆ.14ರವರೆಗೆ ವಿಸ್ತರಣೆ

ಮೈಸೂರು,ಆ.4–ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ ಕೌಶಲ ಮತ್ತು ತಾಂತ್ರಿಕ ತರಬೇತಿ ಕೇಂದ್ರ. ಸಿಪೆಟ್ ಸಂಸ್ಥೆಯು ಭಾರತ ಸರ್ಕಾರದ ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದೆ. CIPET ಕರ್ನಾಟಕದ ವಿದ್ಯಾರ್ಥಿಗಳು ಪಾಲಿಮರ್/ಪೆಟ್ರೋಕೆಮಿಕಲ್/ ಪ್ಲಾಸ್ಟಿಕ್ಸ್ ಸಂಬಂಧಿತ ಕೈಗಾರಿಕಾ ವಲಯಕ್ಕೆ ಬೇಕಾದ ಮಾನವ ಸಂಪನ್ಮೂಲದ ಬೇಡಿಕೆಗಾಗಿ ಜಾಗತಿಕವಾಗಿ ಗುರುತಿಸಲ್ಪಟ್ಟಿದ್ದಾರೆ. ಈ ವೃತ್ತಿಪರ ಡಿಪ್ಲೊಮಾದ ಕೊನೆಯ ಸೆಮಿಸ್ಟರ್‌ನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಕ್ಯಾಂಪಸ್ ಆಯ್ಕೆಯ ಮೂಲಕ ಉದ್ಯೋಗ ದೊರಕಿಸಿಕೊಡಲಾಗುತ್ತದೆ.

ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (DPT) -3 years, ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (DPMT) -3 years ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ 14.08.2025ರವರೆಗೆ ವಿಸ್ತರಿಸಲಾಗಿದೆ.

ದೃಷ್ಟಿದೋಷವುಳ್ಳ ಯುವಕರಿಗೆ ಕೌಶಲ್ಯಾಭಿವೃದ್ಧಿ, ಜೀವನೋಪಾಯದ ಸ್ವಾಭಿಮಾನ ಕಾರ್ಯಕ್ರಮ



ಮೈಸೂರು, ಆ.4(ಎಸ್‌ಪಿಎನ್)–ಮೈಸೂರಿನ ಒಡೆಯರ್ ಆರ್ಕಿಟೆಕ್ಚರ್ ಕೇಂದ್ರದಲ್ಲಿ ಇನ್ಫೋಸಿಸ್ ಮತ್ತು ಇಕ್ವಿಬೀಯಿಂಗ್ ಫೌಂಡೇಶನ್ ಸಹಯೋಗದಲ್ಲಿ ನಡೆದ ದೃಷ್ಟಿದೋಷ ಇರುವ ಯುವಕರಿಗೆ ಕೌಶಲಾಭಿವೃದ್ಧಿ ಮತ್ತು ಜೀವನೋಪಾಯದ 'ಸ್ವಾಭಿಮಾನ' ಶೀರ್ಷಿಕೆಯ ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ದೃಷ್ಟಿಹೀನರ ಜೀವನದಲ್ಲಿ ಬದಲಾವಣೆ ತರಲು ಉದ್ದೇಶಿಸಿರುವ ಕಾರ್ಯಕ್ರಮವೇ 'ಸ್ವಾಭಿಮಾನ'. ಈ ಯೋಜನೆಯು ದೃಷ್ಟಿಹೀನರಿಗೆ ಅಗತ್ಯವಾದ ಕೌಶಲ ಕಲಿಸಿ, ಉದ್ಯೋಗ ಸಾಧ್ಯತೆ ಉಂಟುಮಾಡುವ ಪ್ರಯತ್ನವಾಗಿದೆ. ಎಲ್ಲರಿಗೂ ಸಮಾನ ಅವಕಾಶ ಮತ್ತು ಗೌರವ ದೊರೆಯಬೇಕೆಂಬ ಆಶಯವೇ ಈ ಯೋಜನೆ ಎಂದರು.

ಇಕ್ವಿಬೀಯಿಂಗ್ ಫೌಂಡೇಶನ್ ಸಿಇಒ ಅನಂತಲಕ್ಷ್ಮಿ, ಇನ್ಫೋಸಿಸ್ ಜೊತೆಗೆ ನಮ್ಮ ಸಹಕಾರದಿಂದ ಈ ಯೋಜನೆ ಸಾಧ್ಯವಾಯಿತು. ಸಮುದಾಯ ಮತ್ತು ಸಂಸ್ಥೆಗಳ ಒಗ್ಗಟ್ಟಿನ ಫಲ ಇದಾಗಿದೆ ಎಂದರಲ್ಲದೆ, ಕಾರ್ಯಕ್ರಮಕ್ಕೆ ಜಿಲ್ಲಾಡಳಿತದ ಸಹಕಾರವೂ ಸಿಕ್ಕಿದೆ. ಇನ್ಫೋಸಿಸ್ ಮತ್ತು ಇಕ್ವಿಬೀಯಿಂಗ್ ಫೌಂಡೇಷನ್ ಈ ಯೋಜನೆಯ ಮೂಲಕ ದೃಷ್ಟಿಹೀನರಿಗೆ ಸಮಾನತೆ, ಗೌರವ ಹಾಗೂ ಬದುಕು ಕಟ್ಟಿಕೊಳ್ಳುವ ಅವಕಾಶ ನೀಡಲು ಬದ್ಧವಾಗಿ ಕೆಲಸ ಮಾಡುತ್ತದೆ ಎಂದರು.

ಈ ವೇಳೆ ಎಕ್ಸೆಲ್ ಗ್ರೂಪ್ ಅಧ್ಯಕ್ಷ ಸುಧನ್ವ ಧನಂಜಯ, ಇನ್ಫೋಸಿಸ್ ಉಪಾಧ್ಯಕ್ಷೆ ಸಿ.ವಾಣಿಶ್ರೀ, ಇನ್ಫೋಸಿಸ್ ಫೌಂಡೇಷನ್ ಕಾರ್ಯಕ್ರಮ ವ್ಯವಸ್ಥಾಪಕ ಮಹೇಶ್ ಕುಮಾರ್, ಬಸವರಾಜಪ್ಪ, ಇನ್ಫೋಸಿಸ್ ಮೈಸೂರು ಮುಖ್ಯಸ್ಥ ವಿನಾಯಕ್ ಹೆಗ್ಡೆ, ಭಾರತೀಯ ವಿಜ್ಞಾನ ಸಂಸ್ಥೆ ಹಣಕಾಸು ನಿಯಂತ್ರಕರಾದ ಇಂದುಮತಿ ಶ್ರೀನಿವಾಸನ್, ಕಲಿಸು ಫೌಂಡೇಷನ್ ಸಂಸ್ಥಾಪಕ ಎಂ.ನಿಖಿಲೇಶ್ ಭಾಗವಹಿಸಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು,ಆ.4– ಆ.6ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ರಾಜೀವ್ ನಗರ 1ನೇ ಹಂತ, ವಾಟರ್ ಟ್ಯಾಂಕ್ ಹತ್ತಿರ, ಲಿಡ್ಕರ್ ಕಾಲೋನಿ, ಸಾತಗಳ್ಳಿ, ಕೆಎಸ್ ಆರ್‌ಟಿಸಿ ಡಿಪೋ, ಶ್ರೀನಿಧಿ ಬಡಾವಣೆ, ಟೈಗರ್ ಲೇಔಟ್, ಕೈಫ್ ಮಸೀದಿ ಸುತ್ತ–ಮುತ್ತ, ಮಾದೇ ಗೌಡ ವೃತ್ತ, ಯಾರಸೂಲಿ ಮಸೀದಿ, ದರುಸಮ್ ಮಸೀದಿ, ನಯರ ಪೆಟ್ರೋಲ್ ಬಂಕ್, ನಿಮ್ರಾ ಮಸೀದಿ, ನಿಮ್ರಾ ಸ್ಟೇಡಿಯಂ, ಶಿವಣ್ಣ ಸರ್ಕಲ್, ಆರ್ಯ ಬೇಕರಿ, ಎನ್.ಜಿ ಕರೀಂ ಬ್ಲಾಕ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಅಂತರ ಶಾಲಾ ಭದ್ಮವೇಷ ಸ್ಪರ್ಧೆ



ಮೈಸೂರಿನ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ಮಹದೇವಯ್ಯನವರ ಸ್ಮರಣಾರ್ಥ ನರ್ಸರಿ ಶಾಲಾ ಮಕ್ಕಳಿಗೆ ಅಂತರ ಶಾಲಾ ಭದ್ಮವೇಷ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪಾರಿತೋಷಕ, ನಗದು ಬಹುಮಾನ ವಿತರಿಸಲಾಯಿತು. ರ್‍ಯಾಮ್ ಅಕಾಡೆಮಿ ನಿರ್ದೇಶಕ ಎಂ.ಪಿ.ಪರಶಿವಮೂರ್ತಿ, ಆಡಳಿತ ಮಂಡಳಿ ಸದಸ್ಯ ಆರ್.ಕೆ.ರಾಜು, ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎ.ಆರ್.ದೇವರಾಜು, ಎಸ್.ವೈ.ಹೊಂಬಾಳ್, ಸತ್ಯಾನಂದ, ಪರಮೇಶ ಗೌಡ, ಕಾರ್ಯಾಧ್ಯಕ್ಷ ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಿ.ಎನ್. ಸುಧಾ, ಶಿಕ್ಷಕರಾದ ಸವಿತ ಹಾಗೂ ಅಕ್ಷತ ಎಸ್.ಭಟ್ ಉಪಸ್ಥಿತರಿದ್ದರು.

ಕುಸುಮಾಗೆ ಪಿಹೆಚ್.ಡಿ ಪದವಿ



ಮೈಸೂರು: ಕುಸುಮ ಎಂ. ಅವರು ಡಾ.ಸಿ.ಇ.ಸುಜಾತ ಅವರ ಮಾರ್ಗದರ್ಶನದಲ್ಲಿ ಸಾದರ ಪಡಿಸಿದ ಇಂಗ್ಲಿಷ್ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ವಿದ್ಯೆಯೊಂದಿಗೆ ಸಂಸ್ಕಾರ ರೂಢಿಸಿಕೊಂಡಾಗ ಜೀವನ ಶೈಲಿ ಬದಲಾಗುತ್ತದೆ

ಅಭಿನಂದನಾ ಸಮಾರಂಭದಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯ



ಮೈಸೂರಿನ ಗೋಪಾಲಸ್ವಾಮಿ ಶಿಶು ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭದಲ್ಲಿ ಯಡತೊರೆಯ ಯೋಗಾನಂದೇಶ್ವರ ಸರಸ್ವತೀ ಮಠದ ಬ್ರಹ್ಮಾನಂದ ಭಾರತೀ ಸ್ವಾಮೀಜಿ ಅವರು ಸಾಧಕರಿಗೆ ಪ್ರಶಸ್ತಿ ನೀಡಿ, ಗೌರವಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.4(ವಿವಿಹೆಚ್)– ವಿದ್ಯೆ ಎಂಬುದು ಯಾರ ಸೊತ್ತು ಅಲ್ಲ. ಪ್ರತಿಭೆಯೆಂಬುದು ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ವಿದ್ಯೆಯೊಂದಿಗೆ ಸಂಸ್ಕಾರವನ್ನು ರೂಢಿಸಿಕೊಂಡಾಗ ಜೀವನ ಶೈಲಿ ಬದಲಾಗುತ್ತದೆ. ಕಲಿಕೆ ನಿರಂತರತೆಯಿಂದ ಕೂಡಿದ್ದು, ಕಲಿಕೆಯೊಂದಿಗೆ ವಿದ್ಯಾರ್ಥಿಗಳು ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು ಎಂದು ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಆದರ್ಶ ಸೇವಾ ಸಂಸ್ಥೆ ವತಿಯಿಂದ ನಗರದ ಗೋಪಾಲಸ್ವಾಮಿ ಶಿಶು ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ತಮಿಳುನಾಡು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸನಾತನ ಧರ್ಮ, ಬ್ರಾಹ್ಮಣ್ಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದರೂ, ಮೈಸೂರಿನಲ್ಲಿ ಪ್ರೊ.ಭಗವಾನ್ ಎಂಬುವವರು ಬ್ರಾಹ್ಮಣರು ಪೂಜೆ ಮಾಡುವ ದೇವಾಲಯಗಳಿಗೆ ಹೋಗಬೇಡಿ ಎಂದು ಕರೆ ನೀಡಿದರೂ, ಯಾರೇ ಅಪಪ್ರಚಾರ ಮಾಡಿದರೂ ಸನಾತನ ಧರ್ಮ ಉಳಿದುಕೊಂಡಿದೆ ಎಂದರೆ ಇಂದಿನ ಮಕ್ಕಳಲ್ಲಿ ನಮ್ಮ ಸನಾತನ ಧರ್ಮದ ಬಗ್ಗೆ ಅರಿವು ಮೂಡಿಸುವ ಕೆಲಸ ಮನೆಯಲ್ಲಿಯೇ ನಡೆಯುತ್ತಿರುವುದರಿಂದ ಎಂದು ಹೇಳಿದರು.

ಯಡತೊರೆಯ ಯೋಗಾನಂದೇಶ್ವರ ಸರಸ್ವತೀ ಮಠದ ಬ್ರಹ್ಮಾನಂದ ಭಾರತೀ ಸ್ವಾಮೀಜಿ ಅವರು ಧರ್ಮ ಪ್ರವಚನ ಬೋಧಿಸಿದರು. ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್.ಮುರಳಿ, ಬೆಂಗಳೂರು ಪ್ರಯೋಗ ಶಿಕ್ಷಣಾ ಸಂಶೋಧನಾ ಸಂಸ್ಥೆ ಮುಖ್ಯಸ್ಥ ವಲ್ಲೀಸ್ ಎನ್.ಹೆರೂರ್, ಆದರ್ಶ ಸೇವಾ ಸಂಸ್ಥೆ ಅಧ್ಯಕ್ಷ ಜಿ.ಆರ್.ನಾಗರಾಜ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಸಾಧಕರಾದ ಲೇಖಕಿ ಸಿ.ಎಸ್. ಮಂಗಳಮ್ಮ ಹಾಗೂ ಶಾಮಣ್ಣರಿಗೆ 'ಆದರ್ಶ ಚೈತನ್ಯ ರತ್ನ' ಪ್ರಶಸ್ತಿ, ಸಮಾಜ ಸೇವಾಕರ್ತ ಸಿ.ಕೆ.ರಮೇಶ್ ರಾವ್, ಜಿಎಸ್‌ಎಸ್ ಯೋಗಿಕ್ ರಿಸರ್ಚ್ ಫೌಂಡೇಶನ್ ಸಂಸ್ಥಾಪಕ ಡಿ.ಹರಿ, ಪಂಡಿತ ಶ್ರೀಧರ ಶರ್ಮಾ, ಆಯುರ್ವೇದ ವೈದ್ಯ ಡಾ.ಕೆ.ಎಸ್.ಉಮಾಶಂಕರ್, ವಕೀಲ ಓ.ಶ್ಯಾಂ ಭಟ್‌ರಿಗೆ 'ಆದರ್ಶ ಸೇವಾ ರತ್ನ' ಪ್ರಶಸ್ತಿ, ಲಕ್ಷ್ಮೀಪುರಂ ವೃತ್ತ ನಿರೀಕ್ಷಕ ಎಸ್.ರವಿಶಂಕರ್, ಲೇಖಕ ಎನ್.ವಿ.ರಮೇಶ್, ಸಾಹಿತಿ ಎಸ್.ಎಲ್. ವರಲಕ್ಷ್ಮೀ ಮಂಜುನಾಥ್, ನೂಪುರ ನೃತ್ಯ ಶಾಲೆ ನಿರ್ದೇಶಕಿ ಕೆ.ಎಸ್.ಧನ್ಯಶ್ರೀ ಅವರಿಗೆ 'ಆದರ್ಶ ಪ್ರತಿಭಾ ರತ್ನ' ಪ್ರಶಸ್ತಿ, ಗಾಯಕ ತುಷಾರ್ ಎನ್.ಭಾರದ್ವಾಜ್, ಚಿತ್ರಕಲಾವಿದೆ ಎಸ್.ಯಶಸ್ವಿನಿ ಅವರಿಗೆ 'ಆದರ್ಶ ಯುವ ಪ್ರತಿಭಾರತ್ನ' ಪ್ರಶಸ್ತಿ, ಕರಾಟೆಪಟು ವೇದಾಂತ್ ಎನ್.ಭಾರದ್ವಾಜ್ ಅವರಿಗೆ 'ಆದರ್ಶ ಬಾಲ ಪ್ರತಿಭಾರತ್ನ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಮೈಸೂರು ಮಿತ್ರ ಮಂಗಳವಾರ 5 ಆಗಸ್ಟ್ 2025

ಚುನಾವಣಾ ಅಕ್ರಮ ನಡೆದಿದ್ದರೆ ಅದು ಕಾಂಗ್ರೆಸ್ ಅವಧಿಯಲ್ಲಿ

ವಿಪಕ್ಷ ನಾಯಕ ಆರ್.ಅಶೋಕ್ ಕಿಡಿ

ಮಂಡ್ಯ, ಆ.4– ರಾಹುಲ್ ಗಾಂಧಿ ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿದೆ ಎಂದು ಪ್ರತಿಭಟಿಸಲು ಇಲ್ಲಿಗೆ ಬರುತ್ತಿದ್ದಾರೆ. ನಮ್ಮದೇ ಸರ್ಕಾರ ಅಧಿಕಾರದಲ್ಲಿದ್ದಾಗ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆದು ಕಾಂಗ್ರೆಸ್ 136 ಸ್ಥಾನ ಪಡೆಯಿತು. ಆಗ ಮತದಾರರ ಪಟ್ಟಿಯಲ್ಲಿ ಅಕ್ರಮ ನಡೆದಿರಲಿಲ್ಲವೇ? ಎಂದು ಪ್ರಶ್ನಿಸಿದ ಅವರು, ಇದೀಗ ಕಾಂಗ್ರೆಸ್ ಸರ್ಕಾರ ಇದ್ದು, ಲೋಕಸಭೆ ಚುನಾವಣೆ ನಡೆದಾಗ ಕಾಂಗ್ರೆಸ್ ಕೇವಲ 9 ಸ್ಥಾನ ಗೆದ್ದಿದೆ. ಇದೀಗ ಅಕ್ರಮ ಆಗಿದೆ ಎಂದು ಆರೋಪಿಸುತ್ತಿದ್ದಾರೆ. ಆದರೆ ನಮ್ಮ ಸರ್ಕಾರದಲ್ಲಿ ಕ್ರಮಬದ್ಧವಾಗಿ ಚುನಾವಣೆ ನಡೆದಿದ್ದು, ಅವರದ್ದೇ ಸರ್ಕಾರದಲ್ಲಿ ಅಕ್ರಮ ನಡೆದಿದೆ ಎಂದು ಸ್ವತಃ ಕಾಂಗ್ರೆಸ್ಸಿನವರೇ ಒಪ್ಪಿಕೊಂಡಂತಾಗಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು.



ನಗರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ರೈತರ ಆತ್ಮಹತ್ಯೆ, ಗರ್ಭಿಣಿಯರ ಸರಣಿ ಸಾವು, ಆರ್‌ಸಿಬಿ ಕಾಲ್ತುಳಿತ ಸಂಭವಿಸಿದಾಗ, ಮೈಕ್ರೋ ಫೈನಾನ್ಸ್‌ನಿಂದ ಕೆಲವರು ಆತ್ಮಹತ್ಯೆ ಮಾಡಿಕೊಂಡಾಗ ಚಕಾರ ಎತ್ತಿ ರಾಜ್ಯಕ್ಕೆ ಭೇಟಿ ನೀಡಲಿಲ್ಲ. ಇದೀಗ ಯಾವ ಪುರುಷಾರ್ಥಕ್ಕೆ ರಾಜ್ಯಕ್ಕೆ ಬರುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕರ್ನಾಟಕದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು, ಬಿಹಾರ, ಪಶ್ಚಿಮಬಂಗಾಳ, ಅಸ್ಸಾಂನಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಏಕೆ ವಿರೋಧ ಮಾಡುತ್ತಾರೆ. ದೂರದ ಕರ್ನಾಟಕದಲ್ಲೇ ಸಾವಿರಾರು ಮಂದಿ ಬಾಂಗ್ಲಾದೇಶಿಗರು ತುಂಬಿಕೊಂಡಿದ್ದಾರೆ. ಇನ್ನೂ ಬಾಂಗ್ಲಾಗೆ ಹತ್ತಿರದಲ್ಲಿಯೇ ಇರುವ ಬಿಹಾರ, ಪಶ್ಚಿಮಬಂಗಾಳ, ಅಸ್ಸಾಂನಲ್ಲಿ ಇನ್ನೆಷ್ಟು ಜನ ಬಾಂಗ್ಲಾ ಜನ ನೆಲೆಯೂರಿರಬಹುದು. ಚುನಾವಣೆ ಸಂದರ್ಭದಲ್ಲಿ ಮತಕೋಸ್ಕರ ಅಲ್ಲಿ ಮತ ಪರಿಷ್ಕರಣೆಗೆ ಕಾಂಗ್ರೆಸ್ ವಿರೋಧಿಸುತ್ತಿದೆ ಎಂದು ಕಿಡಿಕಾರಿದರು.

ಚುನಾವಣಾ ಆಯೋಗ, ಐಟಿ, ಇಡಿ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳ ಮೇಲೆ ದಬ್ಬಾಳಿಕೆ ಮಾಡುವುದು ಎಷ್ಟು ಸರಿ? ಚುನಾವಣೆಯಲ್ಲಿ ಬೋಗಸ್ ಮಾಡಿ ಕಾಂಗ್ರೆಸ್ ಅಧಿನಾಯಕಿ ಇಂದಿರಾಗಾಂಧಿ ಸಂಸತ್‌ನಿಂದ 6 ವರ್ಷ ಅಮಾನತುಗೊಂಡಿದ್ದರು. ಚುನಾವಣಾ ಅಕ್ರಮ ಮಾಡುವುದರಲ್ಲಿ ಕಾಂಗ್ರೆಸ್‌ನವರು ನಿಸ್ಸೀಮರು ಎಂದು ಛೇಡಿಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗಿದ್ದು, ಅದಕ್ಕೆ ಬಿಜೆಪಿ ಬೆಂಬಲವಿದೆ. ಸರ್ಕಾರಿ ನೌಕರರಿಗೆ ಕಳೆದ 3 ತಿಂಗಳಿನಿಂದ ವೇತನ ಬಾಕಿ ಇದೆ. ಸರ್ಕಾರ ಬಂದ ಮೇಲೆ ಸಾರ್ವಜನಿಕರಿಗೆ ನಿರಂತರ ತೆರಿಗೆ ಹಾಕಿ ಕೊಳ್ಳೆ ಹೊಡೆಯುತ್ತಿದ್ದಾರೆ. ಗ್ಯಾರಂಟಿಗಾಗಿ ಸರ್ಕಾರದ ಖಜಾನೆ ಖಾಲಿಯಾಗಿದೆ ಎಂದು ದೂರಿದರು.

ರಾಜ್ಯದಲ್ಲಿ ರಸಗೊಬ್ಬರ ಸಮಸ್ಯೆಯು ನಮ್ಮ ಸರ್ಕಾರ ಅಧಿಕಾರ ನಡೆಸುವಾಗ ಏಕೆ ಉದ್ಭವವಾಗಿರಲಿಲ್ಲ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ರಸಗೊಬ್ಬರ ಸಮಸ್ಯೆಯಾಗಿದೆ. ಕೇಂದ್ರದಿಂದ ರಸಗೊಬ್ಬರ ಪೂರೈಕೆ ವಿಳಂಬವಾಗಿರುವ ಬಗ್ಗೆ ಪತ್ರ ಬರೆದು ಪ್ರಶ್ನಿಸುವ ಬದಲು ಸಂಸತ್ ಅಧಿವೇಶನ ನಡೆಯುತ್ತಿದೆ. ದೆಹಲಿಗೆ ತೆರಳಿ ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿದರೆ ಸಮಸ್ಯೆಯಾಗಿದ್ದರೆ ಪರಿಹಾರ ಕಂಡುಕೊಳ್ಳಬಹುದು. ಅದನ್ನು ಬಿಟ್ಟು ಹೈಕಮಾಂಡ್ ಕರೆದಾಗ ಸಚಿವ ಸ್ಥಾನ ಉಳಿಸಿಕೊಳ್ಳಲು ದಿಢೀರ್ ದೆಹಲಿಗೆ ಓಡಿ ಹೋಗುವ ಸಚಿವರು, ಗೊಬ್ಬರದ ಸಮಸ್ಯೆಯಾದಾಗ ಏಕೆ ದೆಹಲಿಗೆ ಹೋಗುವುದಿಲ್ಲ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಸಚ್ಚಿದಾನಂದ, ಅಶೋಕ್‌ಜಯರಾಂ, ವಸಂತ್‌ಕುಮಾರ್, ಅಶೋಕ್‌ಕುಮಾರ್ ಇದ್ದರು.

ಕೆಆರ್‌ಎಸ್‌ನಿಂದ ವಿಸಿ ನಾಲೆಗೆ ನೀರು ಹರಿಸದೇ ತಮಿಳುನಾಡಿಗೆ ನೀರು

ರಾಜ್ಯ ಸರ್ಕಾರದ ವಿರುದ್ಧ ರೈತ ಸಂಘದಿಂದ ಪ್ರತಿಭಟನೆ

ಭಾರತೀನಗರ, ಆ.4– ಕೆಆರ್‌ಎಸ್‌ನಿಂದ ವಿಸಿ ನಾಲೆಗಳಿಗೆ ನೀರು ಹರಿಸದೇ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ, ರೈತ ಸಂಘದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.



ಮದ್ದೂರು–ಮಳವಳ್ಳಿ ಹೆದ್ದಾರಿಯ ಹಲಗೂರು ವೃತ್ತದಲ್ಲಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ಮದ್ದೂರು–ಮಳವಳ್ಳಿ ಹೆದ್ದಾರಿಯ ಹಲಗೂರು ವೃತ್ತದಲ್ಲಿ ಜಮಾಯಿಸಿದ ರೈತ ಸಂಘದ ಕಾರ್ಯಕರ್ತರು, ರಸ್ತೆ ತಡೆ ನಡೆಸಿ ತಮಿಳುನಾಡಿಗೆ ನೀರು ಹರಿಸುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದರು.

ರೈತ ಸಂಘದ ಜಿಲ್ಲಾ ಮುಖಂಡ ಬೋರಾಪುರ ಶಂಕರೇಗೌಡ ಮಾತನಾಡಿ, ಕೆಆರ್‌ಎಸ್ ಅಣೆಕಟ್ಟೆ ತುಂಬಿದರೂ ನಾಲೆಗಳಿಗೆ ನೀರು ಹರಿಸುತ್ತಿಲ್ಲ. ಇದರಿಂದ ರೈತರು ಬೆಳೆ ಹಾಕಲು ಸಮಸ್ಯೆಯಾಗಿದೆ. ರೈತರನ್ನು ತಾತ್ಸಾರದಿಂದ ನೋಡುತ್ತಿರುವ ಸರ್ಕಾರ ಮುಂದೊಂದು ದಿನ ಪಶ್ಚಾತ್ತಾಪಪಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನಾಲೆಗಳ ಆಧುನೀಕರಣ ಕಾಮಗಾರಿಯಾವಾಗ ಮಾಡಬೇಕೆಂಬ ಸಾಮಾನ್ಯ ಜ್ಞಾನ ನೀರಾವರಿ ಇಲಾಖೆ ಹಾಗೂ ಸರ್ಕಾರಕ್ಕೆ ಇಲ್ಲದಂತಾಗಿದೆ. ನೀರಾವರಿ ಇಲಾಖೆ ಅಧಿಕಾರಿಗಳು ಕೂಡಲೇ ಸರ್ಕಾರದೊಂದಿಗೆ ಮಾತನಾಡಿ ನೀರು ಬಿಡದಿದ್ದರೆ ನೀರಾವರಿ ಇಲಾಖೆ ಕಚೇರಿ ಎದುರು ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ರೈತರನ್ನು ಶೋಷಣೆ ಮಾಡುವ ಕೆಲಸವನ್ನು ಕೂಡಲೇ ನಿಲ್ಲಿಸಬೇಕು. ತಮಿಳುನಾಡಿಗೆ ಬಿಡುತ್ತಿರುವ ನೀರನ್ನು ಕೂಡಲೇ ನಿಲ್ಲಿಸಿ ವಿಸಿ ನಾಲೆಗಳಿಗೆ ಬಿಡದಿದ್ದರೆ ಜಿಲ್ಲಾದ್ಯಂತ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಲಿಂಗಪ್ಪಾಜಿ ಮಾತನಾಡಿ, ವಿಸಿ ನಾಲೆಗಳಿಗೆ ನೀರು ಬಿಡದೆ ಬೇಜವಾಬ್ದಾರಿತನ ಪ್ರದರ್ಶಿಸುತ್ತಿರುವ ಅಧಿಕಾರಿಗಳನ್ನು ಮತ್ತು ಜನಪ್ರತಿನಿಧಿಗಳನ್ನು ನಾವು ಧಿಕ್ಕರಿಸುತ್ತಿದ್ದೇವೆ. ಗೌರವದಿಂದ ಕೇಳಿಕೊಂಡರೂ ರೈತರಿಗೆ ಬೆಲೆ ನೀಡಿಲ್ಲ ಹಾಗಾಗಿ ನೀರಾವರಿ ಇಲಾಖೆ ಅಧಿಕಾರಿಗಳು ನೀರು ಬಿಡದಿದ್ದರೆ ಸಿಕ್ಕ ಸಿಕ್ಕ ಕಡೆ ಅಧಿಕಾರಿಗಳನ್ನು ಕಂಬಕ್ಕೆ ಕಟ್ಟಿ ಹಾಕಬೇಕಾಗುತ್ತದೆ ಎಂದು ಗುಡುಗಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಜಿ.ಎ.ಶಂಕರ್, ಜಿಲ್ಲಾ ಖಜಾಂಚಿ ಎಸ್.ಕೆ.ರವಿಕುಮಾರ್, ತಾಲೂಕು ಅಧ್ಯಕ್ಷ ಉಮೇಶ್, ಕಾರ್ಯದರ್ಶಿ ವಿನೋದ್ ಬಾಬು, ಮುಖಂಡರಾದ ರಮೇಶ್, ವೆಂಕಟೇಶ್, ಸಾವಿತ್ರಮ್ಮ, ರಾಜಮ್ಮ, ಬೋರೇಗೌಡ, ಮಹೇಂದ್ರ, ಅಶೋಕ್, ಸಿದ್ದರಾಜು, ರಾಜೇಶ್, ರಘು, ರಾಮಕೃಷ್ಣ, ರಮೇಶ್, ಮರಿಸ್ವಾಮಿ, ಕೆಂಪಣ್ಣ, ದೇಶಿಗೌಡ ಸೇರಿದಂತೆ ಹಲವರಿದ್ದರು.

ಪತ್ರಕರ್ತರು ಸಮಾಜ ತಿದ್ದುವ ಕೆಲಸ ಮಾಡಬೇಕು

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್

ಪಾಂಡವಪುರ, ಆ.4– ಪತ್ರಕರ್ತರು ವಸ್ತುನಿಷ್ಠ ಸುದ್ದಿ ಪ್ರಕಟಿಸುವ ಜೊತೆಗೆ ಸಮಾಜ ತಿದ್ದುವ ಕೆಲಸ ಮಾಡಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಮಾಜದ ಪ್ರಗತಿಗೆ ಪತ್ರಕರ್ತರ ಜವಾಬ್ದಾರಿ ಹೆಚ್ಚಿದೆ. ತಪ್ಪು ದಾರಿಯಲ್ಲಿ ನಡೆಯುವ ನಮ್ಮಂತ ರಾಜಕಾರಣಿಗಳ ತಿದ್ದುವ ಜೊತೆಗೆ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಬೇಕು. ನೊಂದವರು, ಅನ್ಯಾಯಕ್ಕೆ ಒಳಗಾದವರ ಧ್ವನಿಯಾಗಿ ಪತ್ರಕರ್ತರು ಕೆಲಸ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಪತ್ರಿಕೋದ್ಯಮದ ಆಯಾಮ ಬದಲಾಗುತ್ತಿದೆ. ಆದರೆ ಮಾಧ್ಯಮಗಳು ಎಂದಿಗೂ ಸಮಸಮಾಜ ನಿರ್ಮಾಣ ಮಾಡುವ ಕಡೆಗೆ ಇರಬೇಕು ಎಂದರು.

ರಾಜ್ಯ ಕಾರ್ಯದರ್ಶಿ ಮತ್ತಿಕೆರೆ ಜಯರಾಂ ಮಾತನಾಡಿ, ಪಾಂಡವಪುರದಲ್ಲಿ ಪತ್ರಕರ್ತರ ಭವನ ನಿರ್ಮಿಸಲು ಈ ಹಿಂದೆಯೇ ಶಂಕುಸ್ಥಾಪನೆ ಮಾಡಲಾಗಿತ್ತು. ಆದರೆ ಅದು ನಿವೇಶನದ ಸಮಸ್ಯೆಯಿಂದಾಗಿ ಇನ್ನೂ ಕಾರ್ಯಗತವಾಗಲಿಲ್ಲ. ಸ್ಥಳೀಯ ಶಾಸಕರು, ಅಧಿಕಾರಿಗಳು ಪತ್ರಕರ್ತರ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಿಕೊಡುವ ಜೊತೆಗೆ ಭವನ ನಿರ್ಮಾಣಕ್ಕೆ ಸಹಕರಿಸಬೇಕು ಎಂದರು.



ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಮತ್ತಿಕೆರೆ ಜಯರಾಂ, ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಪತ್ರಿಕೋದ್ಯಮ ವೇಗವಾಗಿ ಬೆಳೆಯುತ್ತಿದೆ. ಅಂಬೇಡ್ಕರ್, ಗಾಂಧಿ ಅವರು ಸಹ ಪತ್ರಕರ್ತರಾಗಿ ಕೆಲಸ ಮಾಡಿ ನಮಗೆಲ್ಲ ಆದರ್ಶವಾಗಿದ್ದಾರೆ. ನಾವೆಲ್ಲರೂ ಸಮಾಜಕ್ಕೆ ಪೂರಕವಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ನವೀನ್‌ಕುಮಾರ್ ಮಾತನಾಡಿ, ಮಂಡ್ಯ ಜಿಲ್ಲಾ ಪತ್ರಕರ್ತರ ಸಂಘ ರಾಜ್ಯದಲ್ಲಿಯೇ ಮಾದರಿಯಾಗಿ ಕೆಲಸ ಮಾಡುತ್ತಿದೆ. ಜಿಲ್ಲೆಯಲ್ಲಿ 250ಕ್ಕೂ ಹೆಚ್ಚು ಪತ್ರಕರ್ತರಿಗೆ ವಿಮೆ ಸೌಲಭ್ಯ ಒದಗಿಸಿಕೊಡುವ ಮೂಲಕ ಮಾದರಿಯಾಗಿದೆ ಎಂದರು.

ತಾಪಂ ಇಓ ವೀಣಾ ಮಾತನಾಡಿ, ಹಿಂದಿನಿಂದಲೂ ಪತ್ರಿಕೋದ್ಯಮ ತನ್ನದೇ ಆದ ಛಾಪು ಮೂಡಿಸಿದೆ. ಸ್ಥಳೀಯ ಸಮಸ್ಯೆಗಳು ಸೇರಿದಂತೆ ರಾಜ್ಯ, ರಾಷ್ಟ್ರದಲ್ಲಿ ನಡೆಯುವ ವಿದ್ಯಮಾನಗಳನ್ನು ಜನರಿಗೆ ತಿಳಿಸುವ ಕೆಲಸ ಮಾಡುತ್ತಿದೆ. ಪ್ರಜಾಪ್ರಭುತ್ವದ ಬೆನ್ನೆಲುಬಾಗಿ ಪತ್ರಿಕೋದ್ಯಮ ಕೆಲಸ ಮಾಡುತ್ತಿದೆ. ಸ್ವಾತಂತ್ರ್ಯ ಕಾಲದಿಂದಲೂ ಸಾರಿಗೆ ಸೌಲಭ್ಯಗಳ ಕೊರತೆ ನಡುವೆ ಜನರಿಗೆ ಸುದ್ದಿ ಮುಟ್ಟಿಸುವ ಕೆಲಸ ಮಾಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದೆ ಎಂದು ಬಣ್ಣಿಸಿದರು.

ಈ ವೇಳೆ ಪತ್ರಕರ್ತರ ಸಂಘದ ವತಿಯಿಂದ ಸಿ.ಎಸ್.ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು.

ಗಂಗೋತ್ರಿ ಲಯನ್ಸ್‌ಕ್ಲಬ್ ಅಧ್ಯಕ್ಷೆ ಮೀನಾಕುಮಾರಿ, ತಾಲೂಕಿನ ಎಲ್ಲಾ ಪತ್ರಕರ್ತರಿಗೂ ಉಚಿತವಾಗಿ ಹೆಲ್ಮೆಟ್ ವಿತರಿಸಿದರು. ರಾಜ್ಯ ಕಾರ್ಯದರ್ಶಿ ಮತ್ತಿಕೆರೆ ಜಯರಾಂ ಹಾಗೂ ಪತ್ರಕರ್ತ ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರ ಕೀರ್ತಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್, ಖಜಾಂಚಿ ನಂಜುಂಡಸ್ವಾಮಿ, ಜಿಲ್ಲಾ ಕಾರ್ಯದರ್ಶಿಗಳಾದ ಬಿ.ಎಸ್. ಜಯರಾಮು, ಚಿನಕುರಳಿ ಲೋಕೇಶ್, ಮಾಜಿ ಅಧ್ಯಕ್ಷರಾದ ಕೆ.ಸಿ. ಮಂಜುನಾಥ್, ಬಿ.ಪಿ.ಪ್ರಕಾಶ್, ರಾಜ್ಯ ಸಮಿತಿ ಸದಸ್ಯರಾದ ಮಂಜುನಾಥ್, ರಾಷ್ಟ್ರೀಯ ಸಮಿತಿ ಸದಸ್ಯ ಜೆ.ಎಂ.ಬಾಲಕೃಷ್ಣ, ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ, ಜಿಲ್ಲಾ ನಿರ್ದೇಶಕರಾದ ಚನ್ನಮಾದೇಗೌಡ, ನಾಗೇಗೌಡ, ಶಿವನಂಜಯ್ಯ, ಆನಂದ್, ಅಶೋಕ್, ಕೃಷ್ಣ, ತಾಲೂಕು ಉಪಾಧ್ಯಕ್ಷ ಎಸ್.ನಾಗಸುಂದರ್, ಪ್ರಕಾರ್ಯದರ್ಶಿ ರಘುವೀರ್, ಕಾರ್ಯದರ್ಶಿ ಅನಿಲ್, ಖಜಾಂಚಿ ಭಾಸ್ಕರ್ ಸೇರಿದಂತೆ ತಾಲೂಕು, ಜಿಲ್ಲೆಯ ಪತ್ರಕರ್ತರು, ಪದಾಧಿಕಾರಿಗಳು ಹಾಜರಿದ್ದರು.

> ನಿಮ್ಮೆಲ್ಲರಿಗೂ ಪತ್ರಿಕಾ ದಿನಾಚರಣೆಯ ಶುಭಾಶಯಗಳು. ತಾಲೂಕಿನ ಪತ್ರಕರ್ತರೊಂದಿಗೆ ಸದಾ ಕಾಲ ಇರುತ್ತೇನೆ. ಮುಂದಿನ ದಿನಗಳಲ್ಲಿ ಪಟ್ಟಣದಲ್ಲಿ ಸುಸಜ್ಜಿತ ಪತ್ರಕರ್ತರ ಭವನ ನಿರ್ಮಾಣಕ್ಕೆ ಸಹಕಾರ ನೀಡುತ್ತೇನೆ. – ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ.

ಶ್ರಮಿಕರ ತಾಂಡಾದಲ್ಲಿ ಡಾ.ಅನಿಲ್ ಆನಂದ್‌ರಿಂದ ಆರೋಗ್ಯ ಸೇವೆ



ಮಂಡ್ಯ ಆ.4– ಕಬ್ಬು ಕಟಾವಿಗಾಗಿ ದೂರದ ಬಳ್ಳಾರಿ, ಮಹಾರಾಷ್ಟ್ರ, ವಿಜಯಪುರ ಸೇರಿದಂತೆ ವಿವಿಧೆಡೆಯಿಂದ ಬಂದು ಪ್ಲಾಸ್ಟಿಕ್ ತಾಟುಗಳ ಕೆಳಗೆ ಆಶ್ರಯ ಪಡೆದಿರುವ ಶ್ರಮಿಕರ ಆರೋಗ್ಯ ತಪಾಸಣೆ ನಡೆಸುವ ಮೂಲಕ ಡಾ.ಅನಿಲ್ ಆನಂದ್ ಡ್ರೀಮ್ ವರ್ಕ್ಸ್ ತಂಡ ಮಾನವೀಯತೆ ಮೆರೆದಿದೆ.

ಕಬ್ಬು ಕಟಾವಿಗೆ ಬಂದಿರುವ ನೂರಾರು ಶ್ರಮಿಕರು ತಾಲೂಕಿನ ಹನಿಯಂಬಾಡಿ ಸುತ್ತಮುತ್ತ ತಾಂಡಾಗಳಲ್ಲಿ ನೆಲೆಯೂರಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೂ ಕಬ್ಬು ಕಟಾವಿನಲ್ಲಿ ತೊಡಗಿ ರಾತ್ರಿ ಗೂಡು ಸೇರಿಕೊಳ್ಳುವ ಈ ಜನರು ಆರೋಗ್ಯದ ಬಗ್ಗೆ ಮುತುವರ್ಜಿ ವಹಿಸುವುದೇ ಇಲ್ಲ. ಅಂತಹ ಜನರ ಆರೋಗ್ಯವನ್ನು ಉತ್ತಮವಾಗಿಸುವ ದೃಷ್ಟಿಯಿಂದ ನ್ಯೂರೋ ಸೈಕಿಯಾಟ್ರಿಸ್ಟ್ ಡಾ.ಅನಿಲ್ ಆನಂದ್ ಅವರು ತಾಂಡಾದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿ ಶ್ರಮಿಕರಿಗೆ ಔಷಧ ಕಿಟ್‌ಗಳನ್ನು ವಿತರಿಸಿದರು.

ಶಿಬಿರದಲ್ಲಿ ಮಾತನಾಡಿದ ಡಾ.ಅನಿಲ್ ಆನಂದ್, ಶ್ರಮ ಜೀವಿಗಳಲ್ಲಿರುವ ನಿಸ್ವಾರ್ಥ ಭಾವ, ಪ್ರಾಮಾಣಿಕತೆ, ತೃಪ್ತಿ ಮತ್ತು ಸಂತಸದ ಮನಸ್ಥಿತಿಯೇ ಅವರ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ. ಶ್ರಮ ಜೀವನದ ನಡುವೆ ಉತ್ತಮ ಆರೋಗ್ಯದ ಕಡೆಗೂ ಗಮನಹರಿಸುವಂತೆ ಮನವಿ ಮಾಡಿದರು.

ಆರೋಗ್ಯ ಶಿಬಿರದಲ್ಲಿ ಗರ್ಭಿಣಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಯಾಶಿಕಾ ಅನಿಲ್ ತಂಡದ ದರ್ಶನ್, ನವೀನ್, ಮಂಜು, ರಕ್ಷಿತ್, ಅನುಷಾ, ಧನುಷ್, ಸಂದೀಪ್, ಚೇತನ್, ವಿನಯ್ ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಗಜಪಡೆ ಪುರ ಪ್ರವೇಶ

ಪೂಜೆ ಮಾಡಿದರು. ಬಳಿಕ ಗಣೇಶನಿಗೆ ಇಷ್ಟವಾದ ವಿವಿಧ ಬಗೆಯ ತಿಂಡಿ, ವಿವಿಧ ಬಗೆಯ ಹಣ್ಣು, ಕಬ್ಬು, ಬೆಲ್ಲ ನೀಡಿ ಪೂಜೆ ಸಲ್ಲಿಸಿದರು. ಮಧ್ಯಾಹ್ನ 12.34ಕ್ಕೆ ಆಗಮಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಪಶುಸಂಗೋಪನ ಸಚಿವ ಕೆ.ವೆಂಕಟೇಶ್ ಹಾಗೂ ಇನ್ನಿತರರು ಮಹಾ ಸಂಕಲ್ಪ ಮಾಡಿ, ಪುಷ್ಪಾರ್ಚನೆಗೈಯ್ಯುವ ಮೂಲಕ ಗಜಪಯಣಕ್ಕೆ ಚಾಲನೆ ನೀಡಿದರು. ಪೂಜಾ ಕಾರ್ಯ ಪೂರ್ಣಗೊಳ್ಳುತ್ತಿದ್ದಂತೆ 9 ಆನೆಗಳಿಗೂ ಕುಂಬಳಕಾಯಿಂದ ಇಳಿತೆಗೆಯಲಾಯಿತು. ಈಡುಗಾಯಿ ಒಡೆದು ನಿಂಬೆಹಣ್ಣು ತುಳಿಸಿದ ನಂತರ ವರ್ಣರಂಜಿತ ಮೆರವಣಿಗೆ ಆರಂಭವಾಯಿತು.



ಜಂಬೂಸವಾರಿ ನೆನಪಿಸುವ ಮೆರವಣಿಗೆ: ಗಜಪೂಜೆ ನೆರವೇರುತ್ತಿದ್ದಂತೆಯೇ ಅಭಿಮನ್ಯು ನೇತೃತ್ವದ 9 ಆನೆಗಳನ್ನು ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ, ವೀರಗಾಸೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಕಳಸ ಹೊತ್ತ ಮಹಿಳೆಯರೊಂದಿಗೆ ವರ್ಣರಂಜಿತ ಮೆರವಣಿಗೆ ಮೂಲಕ ಸಭಾ ಕಾರ್ಯಕ್ರಮದ ಸ್ಥಳದವರೆಗೂ ಕರೆತರಲಾಯಿತು. ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಸಾರ್ವಜನಿಕರು, ಸ್ಥಳೀಯ ಗ್ರಾಮಸ್ಥರು, ವನ್ಯಪ್ರೇಮಿಗಳು ಆನೆಗಳೊಂದಿಗೆ 2 ಕಿ.ಮಿ ದೂರ ಹೆಜ್ಜೆ ಹಾಕುವ ಮೂಲಕ ಗಜಪಯಣದ ಮೆರವಣಿಗೆಗೆ ಮೆರಗು ನೀಡಿದರು. ಈ ಬಾರಿ ಪೂಜಾ ಮುಹೂರ್ತ ಮಧ್ಯಾಹ್ನ 12.34ರ ನಂತರ ಜರುಗಿದ್ದರಿಂದ ಮೈಸೂರು, ಬೆಂಗಳೂರು, ಕೇರಳ ಸೇರಿದಂತೆ ವಿವಿಧೆಡೆಯಿಂದ ಅಪಾರ ಸಂಖ್ಯೆ ಜನರು, ಪ್ರವಾಸಿಗರು ಆಗಮಿಸಿದ್ದರು.

ವೇದಿಕೆಯೂ ಭರ್ತಿ: ಆನೆಗಳನ್ನು ಮೆರವಣಿಗೆ ಮೂಲಕ ಕರೆತರುವ ಮುನ್ನವೇ ವೇದಿಕೆ ಕಾರ್ಯಕ್ರಮ ಆರಂಭಿಸಲಾಗಿತ್ತು. ವೇದಿಕೆ ಬಳಿ ಹಾಕಿದ್ದ ಎಲ್ಲಾ ಆಸನಗಳು ಭರ್ತಿಯಾಗಿದ್ದವು. ಸಾರ್ವಜನಿಕರಿಗಾಗಿ ಮಾಡಿದ್ದ ಊಟಕ್ಕೂ ಭಾರೀ ಜನ ನೆರೆದಿದ್ದರು.

ಭಾರೀ ಭದ್ರತೆ: ಸಾರ್ವಜನಿಕರ ಅಸಮಾಧಾನ

ಗಜಪಯಣಕ್ಕೆ ಈ ಬಾರಿ ಹೆಚ್ಚಿನ ಸಂಖ್ಯೆಯ ಜನ ಸೇರುವ ನಿರೀಕ್ಷೆ ಹಿನ್ನೆಲೆಯಲ್ಲಿ ವೀರನಹೊಸಳ್ಳಿ ಗೇಟ್ ಬಳಿ ಭಾರೀ ಭದ್ರತೆ ಕಲ್ಪಿಸಲಾಗಿತ್ತು. ಗಜಪೂಜೆ ನೆರವೇರುವ ಸ್ಥಳದಲ್ಲಿ ಗೇಟ್‌ನಲ್ಲಿ ಸಾರ್ವಜನಿಕರನ್ನು ಒಳಗೆ ಬಿಡದೆ ಗೇಟ್ ಹಾಕಲಾಗಿತ್ತು. ಗೇಟ್ ಮುಂದೆ ಸಾವಿರಾರು ಮಂದಿ ನಿಂತು, ಪೊಲೀಸರಿಗೆ ಹಿಡಿಶಾಪ ಹಾಕಿದರು. ನಮ್ಮ ಕಾರ್ಯಕ್ರಮಕ್ಕೆ ನಮಗೇ ಅವಕಾಶ ನೀಡದೇ ನೀವೇ ಮೆರೆಯುವುದು ಎಷ್ಟು ಸರಿ ಎಂದು ಏರು ಧ್ವನಿಯಲ್ಲೇ ಅಸಮಾಧಾನ ವ್ಯಕ್ತಪಡಿಸಿದರು. ಆದರೂ, ಭದ್ರತಾ ದೃಷ್ಟಿಯಿಂದ ಜನರನ್ನು ವೀರನಹೊಸಳ್ಳಿ ಗೇಟ್ ದಾಟಲು ಅವಕಾಶ ನೀಡಲಿಲ್ಲ. ಕೊನೆಗೆ ಜನರೇ ಆನೆಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿ ಸಮಾದಾನ ಪಟ್ಟುಕೊಂಡರು.

ಎರಡನೇ ತಂಡದ ಐದು ಆನೆಗಳ ಪಟ್ಟಿ ಬಿಡುಗಡೆ

ಇವುಗಳಲ್ಲಿ ಮೂವರು ಹೊಸ ಸದಸ್ಯರು

ಮೈಸೂರು, ಆ.4(ಎಂಟಿವೈ)– ದಸರಾ ಮಹೋತ್ಸವದಲ್ಲಿ ಈ ಬಾರಿ 14 ಆನೆಗಳು ಪಾಲ್ಗೊಳ್ಳಲಿದ್ದು, ಅರಣ್ಯ ಇಲಾಖೆ ಗಜಪಡೆಯ ಎರಡನೇ ತಂಡದಲ್ಲಿ 3 ಹೊಸ ಆನೆ ಸೇರಿದಂತೆ 5 ಆನೆಗಳ ಪಟ್ಟಿ ಬಿಡುಗಡೆ ಮಾಡಿದೆ.

ಈಗಾಗಲೇ ಇಂದು ಗಜಪಯಣದ ಮೂಲಕ ಮೊದಲ ತಂಡದಲ್ಲಿ ಮತ್ತಿಗೋಡು ಕ್ಯಾಂಪ್‌ನ ಗಜಪಡೆಯ ನಾಯಕ ಅಭಿಮನ್ಯು(59), ಭೀಮ (25), ದುಬಾರೆ ಕ್ಯಾಂಪ್‌ನಿಂದ ಪ್ರಶಾಂತ(53), ಧನಂಜಯ(45), ಕಂಜನ್ (26), ಬಳ್ಳೆ ಶಿಬಿರದ ಮಹೇಂದ್ರ (42), ದೊಡ್ಡಹರವೆ ಶಿಬಿರದ ಏಕಲವ್ಯ (40) ಸೇರಿದಂತೆ 7 ಗಂಡಾನೆ ಹಾಗೂ ದುಬಾರೆ ಶಿಬಿರದ ಕಾವೇರಿ (45) ಹಾಗೂ ಬಳ್ಳೆಯ(ದೊಡ್ಡಹರವೆ)ಲಕ್ಷ್ಮೀ(53) ಹೆಣ್ಣಾನೆಗಳು ಮೈಸೂರಿಗೆ ಆಗಮಿಸಿವೆ.

ಎರಡನೇ ತಂಡ: ಎರಡನೇ ತಂಡದಲ್ಲಿ 5 ಆನೆಗಳನ್ನು ಕರೆತರಲು ನಿರ್ಧರಿಸಲಾಗಿದ್ದು, ಅವುಗಳಲ್ಲಿ ಎರಡು ಹೆಣ್ಣಾನೆ ಹಾಗೂ ಒಂದು ಹೊಸ ಗಂಡಾನೆ ಸೇರಿವೆ. ಎರಡನೇ ತಂಡದಲ್ಲಿ ದುಬಾರೆ ಕ್ಯಾಂಪ್‌ನಿಂದ ಗೋಪಿ(43), ಸುಗ್ರೀವ(43), ಹೊಸ ಆನೆಗಳಾದ ಹೇಮಾವತಿ(11), ಮತ್ತಿಗೋಡು ಕ್ಯಾಂಪ್‌ನಿಂದ ಶ್ರೀಕಂಠ(56) ಹಾಗೂ ಭೀಮನಕಟ್ಟೆ ಕ್ಯಾಂಪ್‌ನಿಂದ ರೂಪ(44) ಆನೆ ಸೇರಿವೆ. 14 ಆನೆಗಳಲ್ಲಿ ಕ್ಯಾಪ್ಟನ್ ಅಭಿಮನ್ಯು (59) ಹಿರಿಯ ಆನೆ ಎಂಬ ಹೆಗ್ಗಳಿಕೆ ಪಾತ್ರವಾಗಿದ್ದರೆ, ದುಬಾರೆ ಕ್ಯಾಂಪ್‌ನ ಹೇಮಾವತಿ(11) ಆನೆ ಕಿರಿಯ ಆನೆ ಎಂಬ ಕೀರ್ತಿಗೆ ಪಾತ್ರವಾಗಿದೆ. ಎರಡನೇ ತಂಡದ 5 ಆನೆಗಳು ಮುಂದಿನ ತಿಂಗಳು ಮೈಸೂರಿಗೆ ಆಗಮಿಸಲಿವೆ.

ಜಾತ್ರೆ: ಪ್ರತಿವರ್ಷದಂತೆ ಈ ಬಾರಿಯೂ ಗಜಪಯಣದ ವೇಳೆ ರಸ್ತೆ ಬದಿ ವಿವಿಧ ವಸ್ತು, ಆಟಿಕೆ, ತಿನಿಸು ಸೇರಿದಂತೆ ನಾನಾ ವಸ್ತುಗಳ ಮಾರಾಟ ಮಳಿಗೆ ತಲೆ ಎತ್ತಿದ್ದವು. ಎಲ್ಲಾ ಮಳಿಗೆಗಳಲ್ಲೂ ಭರ್ಜರಿ ವ್ಯಾಪಾರ ನಡೆಯಿತು.

ನೌಕರರ ಮುಷ್ಕರ; ಸರ್ಕಾರದ ಪರ್ಯಾಯ ವ್ಯವಸ್ಥೆ

ಮಾಹಿತಿ ತಂತ್ರಜ್ಞಾನ ಇಲಾಖೆ ರಾಜ್ಯದಲ್ಲಿನ ಅದರಲ್ಲೂ ಬೆಂಗಳೂರಿನ ಎಲ್ಲಾ ಖಾಸಗಿ ಕಂಪನಿಗಳಿಗೆ ಮುಷ್ಕರದ ಸಮಯದಲ್ಲಿ ಸಿಬ್ಬಂದಿಗಳು ಮನೆಯಿಂದಲೇ ಕೆಲಸ ನಿರ್ವಹಿಸಲು ಅನುಮತಿ ನೀಡುವಂತೆ ತಿಳಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಖಾಸಗಿ ಶಾಲೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿ, ಅವರ ಅಧೀನದ ಖಾಸಗಿ ಶಾಲಾ ವಾಹನಗಳಲ್ಲಿ ಸರ್ಕಾರಿ ಶಾಲಾ ಮಕ್ಕಳನ್ನು ಸಹ ಕೊಡೊಯ್ಯಲು ಅನುವಾಗುವಂತೆ ಕ್ರಮ ವಹಿಸುವಂತೆ ತಿಳಿಸಿದೆ.

ಹಾಲಿ ಸಂಚರಿಸುತ್ತಿರುವ ರೈಲುಗಳ ಸಂಚಾರವನ್ನು ಹೆಚ್ಚಿಸುವಂತೆ ಬಿಎಂಆರ್‌ಸಿಎಲ್ ಎಂಡಿಗೆ ಹಾಗೂ ಭಾರತೀಯ ರೈಲ್ವೆ (ಕರ್ನಾಟಕ ವಿಭಾಗ) ರೈಲು ಸಂಚಾರ ಮತ್ತು ಒಳ ಜಿಲ್ಲೆ ರೈಲು ಸಂಚಾರವನ್ನು ಹೆಚ್ಚಿಸುವಂತೆ ಪತ್ರ ರವಾನಿಸಲಾಗಿದೆ.

ಬೆಂಗಳೂರು ನಗರದಲ್ಲಿ ಸಾರಿಗೆ ವ್ಯವಸ್ಥೆಗೆ ಸಮಸ್ಯೆ ಎದುರಾದರೆ ನಗರದ ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡಲಿದೆ. ಹೀಗಾಗಿ ಸಾರ್ವಜನಿಕರಿಗೆ ಸಮಸ್ಯೆಯಾಗದಂತೆ ಎಲೆಕ್ಟ್ರಿಕ್ ಬಸ್‌ಗಳನ್ನು ರಸ್ತೆಗಳಿಸಲು ಬಿಎಂಟಿಸಿ ಸಿದ್ದತೆ ಮಾಡಿಕೊಂಡಿದೆ. ಬಿಎಂಟಿಸಿಯಲ್ಲಿ 1500 ಎಲೆಕ್ಟ್ರಿಕ್ ಬಸ್‌ಗಳಿವೆ. ಈ ಬಸ್‌ಗಳಿಗೆ ಖಾಸಗಿ ಚಾಲಕರನ್ನು ನೇಮಕ ಮಾಡಲಾಗಿದೆ. ಒಂದು ವೇಳೆ ಕಂಡಕ್ಟರ್ ಕರ್ತವ್ಯಕ್ಕೆ ಹಾಜರಾಗದಿದ್ದರೆ, ಟ್ರೈನಿ ಕಂಡಕ್ಟರ್‌ಗೆ ಬುಲಾವ್ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. 2,000 ಟ್ರೈನಿ ಕಂಡಕ್ಟರ್ ಮೂಲಕ ಸೇವೆ ನೀಡಲು ಬಿಎಂಟಿಸಿ ತಯಾರಿ ಮಾಡಿಕೊಂಡಿದೆ.

ನಾಗಮೋಹನ್ ದಾಸ್ ವರದಿ ಸಲ್ಲಿಕೆ

ವರದಿ ಸಲ್ಲಿಸಿದ ಬಳಿಕ ಮಾತನಾಡಿದ ನ್ಯಾ.ನಾಗಮೋಹನ್ ದಾಸ್, ಒಳಮೀಸಲಾತಿಗೆ ಮತ್ತಷ್ಟು ದತ್ತಾಂಶ ಬೇಕಿತ್ತು. ಹೀಗಾಗಿ ರಾಜ್ಯ ಸರ್ಕಾರ ಹೊಸ ಸಮೀಕ್ಷೆಗೆ ಅವಕಾಶ ನೀಡಿತ್ತು. 60 ದಿನಗಳಲ್ಲಿ ಸಮೀಕ್ಷೆ ಮಾಡಿದ್ದೇವೆ. ಒಟ್ಟು 27 ಲಕ್ಷ ಕುಟುಂಬಗಳು ಸಮೀಕ್ಷೆಯಲ್ಲಿ ಭಾಗವಹಿಸಿವೆ. ಇದನ್ನು ಪರೀಶಿಲನೆ ಮಾಡಿ ವರದಿಯ ದತ್ತಾಂಶವನ್ನು ನೀಡಿದ್ದೇವೆ. ಈ ವರದಿ ಸರ್ಕಾರದ ಆಸ್ತಿ. ಅದರಲ್ಲಿ ಏನಿದೆ, ಒಪ್ಪುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಆಯೋಗವು ಒಳಮೀಸಲಾತಿ ಕುರಿತ ವರದಿ ನೀಡಿದೆ. ಅದರಲ್ಲಿ ಏನಿದೆ ಎಂದು ಇನ್ನೂ ನೋಡಿಲ್ಲ. ಇದೇ 7ರಂದು ಸಚಿವ ಸಂಪುಟ ಸಭೆಯಿದೆ. ಅದರಲ್ಲಿ ವರದಿಯನ್ನು ಮಂಡಿಸಿ ಚರ್ಚೆ ಮಾಡುತ್ತೇವೆ ಎಂದರು.

ಸುಪ್ರೀಂಕೋರ್ಟ್ ನಿಗದಿಪಡಿಸಿದ ಮಾನ ದಂಡ ಅನ್ವಯ ಮೀಸಲಾತಿ ಹಂಚಿಕೆ: ಒಳ ಮೀಸಲಾತಿ ವರ್ಗೀಕರಣಕ್ಕೆ ಜಾತಿಗಳ ಶೈಕ್ಷಣಿಕ ಹಿಂದುಳಿದಿರುವಿಕೆ, ಸರ್ಕಾರಿ ಉದ್ಯೋಗದಲ್ಲಿ ಅಗತ್ಯ ಪ್ರಾತಿನಿಧ್ಯದ ಕೊರತೆ, ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. ಆ ಮಾನದಂಡಗಳ ಆಧಾರದಲ್ಲಿಯೇ ಮೀಸ ಲಾತಿಯನ್ನು ಹಂಚಿಕೆ ಮಾಡಲಾಗಿದೆ ಎಂದು ಆಯೋಗ ವಿವರಿಸಿದೆ.

ಒಳಮೀಸಲಾತಿ ಆಗ್ರಹಿಸಿ ನ್ಯಾಯಾಲಯ ಗಳ ಒಳಗೆ ಮತ್ತು ಹೊರಗೆ ದಲಿತ ಸಂಘಟನೆಗಳು ಕಳೆದ 30 ವರ್ಷಗಳಿಂದ ಹೋರಾಟ ನಡೆಸುತ್ತಲೇ ಬಂದಿವೆ. 2024ರ ಆಗಸ್ಟ್ 1ರಂದು ದವಿಂದರ್‌ಸಿಂಗ್ ಪ್ರಕರಣದಲ್ಲಿ ತೀರ್ಪು ನೀಡಿದ ಸುಪ್ರೀಂ ಕೋರ್ಟ್, ಉಪವರ್ಗೀಕರಣ ಮಾಡಲು ಸಂವಿಧಾನದ ಅನುಚ್ಛೇದ 14ರಲ್ಲಿ ಅವಕಾಶವಿದೆ. ಉಪವರ್ಗೀಕರಣ ಸಾಮಾಜಿಕ ನ್ಯಾಯದ ವಿಸ್ತರಣೆಯಾಗಿದೆ. ರಾಜ್ಯ ಸರ್ಕಾರಕ್ಕೆ ಒಳಮೀಸಲಾತಿ ನೀಡುವ ಅಧಿಕಾರವಿದೆ. ಉಪವರ್ಗೀಕರಣ ಮಾಡಿದರೆ ಮೀಸಲಾತಿ ಅನುಭವಿಸುತ್ತಿರುವ ಯಾರನ್ನೂ ಹೊರಗಿಡುವುದಿಲ್ಲ. ಅಗತ್ಯ ದತ್ತಾಂಶ ಸಂಗ್ರಹಿಸಿ ಒಳಜಾತಿಗಳ ವರ್ಗೀಕರಣ ಮಾಡಬೇಕು ಎಂದು ಹೇಳಿದೆ.

ಈ ಕಾರಣಕ್ಕೆ ರಾಜ್ಯ ಸರ್ಕಾರ ರಾಜ್ಯ ದಲ್ಲಿರುವ ಪರಿಶಿಷ್ಟ ಜಾತಿಗಳ ಒಳಮೀಸ ಲಾತಿಯ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಹೆಚ್.ಎನ್. ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗ ವನ್ನು ಸರ್ಕಾರ ರಚಿಸಿತ್ತು. ರಾಜ್ಯದಲ್ಲಿ ನಿಖರವಾದ ದತ್ತಾಂಶ ಇಲ್ಲದ ಕಾರಣ ಹೊಸತಾಗಿ ಸಮೀಕ್ಷೆ ನಡೆಸಬೇಕೆಂದು 2025ರ ಮಾರ್ಚ್ 27ರಂದು ಆಯೋಗವು ಮಧ್ಯಂತರ ವರದಿ ಸಲ್ಲಿಸಿತ್ತು. ಅದೇ ದಿನ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಧ್ಯಂತರ ವರದಿಯನ್ನು ಒಪ್ಪಿ, ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಸಲು ನಿರ್ಣಯ ಕೈಗೊಂಡಿತ್ತು. ಆಯೋಗದ ಅಧ್ಯಕ್ಷರಾದ ಹೆಚ್.ಎನ್. ನಾಗಮೋಹನ್‌ದಾಸ್ ಅವರು ಯಾವುದೇ ಸಂಭಾವನೆ ಅಥವಾ ಗೌರವಧನ ಪಡೆಯಲಿಲ್ಲ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಒಳ ಮೀಸಲಾತಿ ವಿಚಾರದಲ್ಲಿ ಮತ್ತೆ ಕುತಂತ್ರ ನಡೆದರೆ ಮತ್ತೆ ಹೋರಾಟ

ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯ ಹಿರಿಯ ವಕೀಲ ಅರುಣ್‌ಕುಮಾರ್ ಎಚ್ಚರಿಕೆ

ಮೈಸೂರು, ಆ. 4– ದತ್ತಾಂಶಕ್ಕೆ ಅನುಗುಣವಾಗಿ ಮಾದಿಗರಿಗೆ ಒಳ ಮೀಸಲಾತಿ ದೊರೆಯಬೇಕು ಎಂದು ಆಗ್ರಹಿಸಿರುವ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯ ಹಿರಿಯ ವಕೀಲ ಎಸ್. ಅರುಣ್‌ಕುಮಾರ್, ಈ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಕುತಂತ್ರ ನಡೆಸಿದರೆ ಮತ್ತೇ ರಾಜ್ಯ ಪ್ರವಾಸ ಮಾಡಿ ಕಾಂಗ್ರೆಸ್ ಬಣ್ಣ ಬಯಲು ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.



ಇಂದು ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಿರುವ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು, ಶೈಕ್ಷಣಿಕವಾಗಿ ಹಿಂದುಳಿಯುವಿಕೆ, ಸರ್ಕಾರಿ ಉದ್ಯೋಗದಲ್ಲಿ ಅಗತ್ಯ ಪ್ರಾತಿನಿಧ್ಯತೆ ಹಾಗೂ ಸಾಮಾಜಿಕ ಹಿಂದುಳಿಯುವಿಕೆ ಎಂಬ ಮೂರು ದತ್ತಾಂಶಗಳಡಿ ವರದಿ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಈ ಮೂರೂ ದತ್ತಾಂಶದಂತೆಯೂ ಮಾದಿಗರು ಹಿಂದುಳಿದಿದ್ದಾರೆ. ಈವರೆಗೆ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಎಲ್ಲಾ ವರದಿಗಳಲ್ಲೂ ರಾಜ್ಯದಲ್ಲಿ ಮಾದಿಗರ ಜನಸಂಖ್ಯೆ ಪ್ರಥಮ ಸ್ಥಾನದಲ್ಲಿದೆ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿ ಮಾದಿಗ ಸಮುದಾಯಕ್ಕೆ ಸೇರಿದ ಕೆ.ಹೆಚ್. ಮುನಿಯಪ್ಪ ಅವರು ಇದ್ದಾರೆ. ಅವರಿಗೆ ಆ ಸ್ಥಾನ ತಪ್ಪಿಸುವ ಸಲುವಾಗಿ ಮಲ್ಲಿಕಾರ್ಜುನ ಖರ್ಗೆ, ಡಾ॥ ಜಿ. ಪರಮೇಶ್ವರ್, ಹೆಚ್.ಸಿ. ಮಹದೇವಪ್ಪ ಷಡ್ಯಂತ್ರ ರೂಪಿಸಿದ್ದಾರೆ. ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿರುವ ಮಾದಿಗರಿಗೆ ದೊರೆಯಲಿರುವ ಹೆಚ್ಚಿನ ಶೇಕಡಾವಾರು ಒಳ ಮೀಸಲಾತಿ ತಪ್ಪಿಸುವ ಸಲುವಾಗಿ ದಲಿತ ವರ್ಗದ ಮತ್ತೊಂದು ಸಮಾಜ ಹಾಗೂ ಮಾದಿಗ ಸಮಾಜಕ್ಕೆ ಸರಿಸಮನಾಗಿ ಒಳ ಮೀಸಲಾತಿ ಹಂಚಿಕೆ ಮಾಡುವ ಕುತಂತ್ರವೂ ನಡೆಯುತ್ತಿದೆ ಎಂಬ ಮಾಹಿತಿ ತಮಗಿದ್ದು, ಹಾಗೇನಾದರೂ ಆದರೆ, ಈಗಾಗಲೇ ಮಾದಿಗರ ವಿರೋಧಿಯಾಗಿರುವ ಕಾಂಗ್ರೆಸ್ ಪಕ್ಷ ಮತ್ತೆ ಮಾದಿಗರ ವಿರೋಧಿ ಎಂಬುದನ್ನು ಸ್ಪಷ್ಟವಾಗಿ ಖಚಿತಪಡಿಸಿದಂತಾಗುತ್ತದೆ. ಕಾಂಗ್ರೆಸ್‌ನ ಬಣ್ಣ ಬಯಲು ಮಾಡಲು ನಾವು ಮತ್ತೆ ರಾಜ್ಯ ಪ್ರವೇಶ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ತ್ರಿಮತಸ್ಥ ಬ್ರಾಹ್ಮಣರಿಗಾಗಿ ಉಚಿತ ಸಾಮೂಹಿಕ ಯಜುರುಪಾಕರ್ಮ

ಮೈಸೂರು, ಆ. 4–ಆ.9ರಂದು ಬೆಳಿಗ್ಗೆ 7 ಗಂಟೆಗೆ ಮೈಸೂರಿನ ಬೋಗಾದಿಯ ಸಾಯಿ ಸರಸ್ವತಿ ವಿದ್ಯಾಕೇಂದ್ರದ ಆವರಣದಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗಾಗಿ ಉಚಿತ ಸಾಮೂಹಿಕ ಯಜುರುಪಾಕರ್ಮವನ್ನು ಶ್ರೀರಾಮಚಂದ್ರಾಪುರ ಮಠದ ಮೈಸೂರು ವಲಯದ ಹವ್ಯಕ ಮಹಾಮಂಡಲದ ವತಿಯಿಂದ ಆಯೋಜಿಸ ಲಾಗಿದೆ. ಆಸಕ್ತರು ನೋಂದಾಯಿಸಿಕೊಳ್ಳಲು ಪ್ರಧಾನ ಕಾರ್ಯದರ್ಶಿ ರಾಕೇಶ್ ಭಟ್–9916221184, ಕೋಶಾಧಿಕಾರಿ ಪಡಾರು ರಾಮಕೃಷ್ಣ ಭಟ್–9448208368 ಅವರನ್ನು ಕರೆ ಅಥವಾ ವಾಟ್ಸಪ್ ಮೂಲಕ ಸಂಪರ್ಕಿಸಬಹುದು. ಕಾರ್ಯಕ್ರಮದಲ್ಲಿ ಭಾಗವಹಿಸುವವರು ಬರುವಾಗ ಉದ್ಧರಣೆ–ಪಂಚಪಾತ್ರೆ, ಚಾಪೆ, ಪೂಜಾ ಸಾಮಗ್ರಿಗಳು (ಹೂವು, ಹಣ್ಣು, ವೀಳ್ಯದೆಲೆ, ಅಡಿಕೆ, ಗಂಧದ ಕಡ್ಡಿ), ಜನಿವಾರ, ದಾನಾದಿಗಳಿಗೆ ಸಾಮಗ್ರಿಗಳನ್ನು ತರಬೇಕು.

ಸಾರಿಗೆ ಬಸ್‌ಗಳು ಸ್ಥಗಿತ

ಫೆಬ್ರವರಿ 28ರ ವರೆಗೆ ಬಾಕಿ ವೇತನ ಕೊಡಬಹುದು ಎಂದು ಶಿಫಾರಸು ಮಾಡಿತ್ತು. ಸಾರಿಗೆ ಸಂಘಟನೆಗಳ ಪ್ರತಿನಿಧಿಗಳು ಸಮಿತಿ ಮುಂದೆ ಹಾಜರಾಗಿ ಅಹವಾಲು ಸಲ್ಲಿಸಿದ್ದರು. ಶ್ರೀನಿವಾಸ ಮೂರ್ತಿ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಒಪ್ಪಿಕೊಂಡಿದೆ. ಸಾರಿಗೆ ನೌಕರರು ಸದರಿ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಳ್ಳಬೇಕು ಎಂದು ತಿಳಿಸಿದರು. ಶ್ರೀನಿವಾಸಮೂರ್ತಿ ಸಮಿತಿಯ ಶಿಫಾರಸು ಆಧಾರದಲ್ಲಿ ಈ ಕುರಿತು 2023ರ ಮಾರ್ಚ್ 1ರಿಂದ ಜಾರಿಗೆ ಬರುವಂತೆ ಅಂದಿನ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಆದರೆ, ಇದೀಗ 38 ತಿಂಗಳ ಬಾಕಿ ವೇತನ ಪಾವತಿಗೆ ಬೇಡಿಕೆ ಇರಿಸಿರುವುದು ಸಮಂಜಸವಲ್ಲ. ನಾವು ಅಧಿಕಾರಕ್ಕೆ ಬಂದಾಗ ಎಲ್ಲಾ ನಿಗಮಗಳಲ್ಲಿ ಒಟ್ಟಾರೆ 4 ಸಾವಿರ ಕೋಟಿ ರೂ.ಸಾಲ ಇತ್ತು. 2018ರಲ್ಲಿ ಕೇವಲ 14 ಕೋಟಿ ರೂ.ಮಾತ್ರ ಬಾಕಿಯಿತ್ತು.

ಪ್ರಸ್ತುತ ಯಾವ ಸಾರಿಗೆ ನಿಗಮವೂ ಲಾಭದಲ್ಲಿಲ್ಲ. ಸರ್ಕಾರ ಯಾರಿಗೂ ಅನ್ಯಾಯ ಮಾಡುವುದಿಲ್ಲ. ಎಲ್ಲಾ ಸಾರಿಗೆ ನಿಗಮಗಳ ನೌಕರರು ಮುಷ್ಕರವನ್ನು ಕೈಬಿಟ್ಟು ಸಹಕರಿಸಬೇಕು. ಸಾರಿಗೆ ನೌಕರರ ಸಂಘದ ಚುನಾವಣೆ ನಡೆಸುವ ಕುರಿತು ಪರಿಶೀಲನೆ ನಡೆಸಲಾಗುವುದು. ಎಲ್ಲಾ ಬೇಡಿಕೆಗಳನ್ನು ಮಾತುಕತೆ ಮೂಲಕ ಬಗೆಹರಿಸಲು ಸರಕಾರ ಸಿದ್ಧವಿದೆ ಎಂದು ಸಿದ್ದರಾಮಯ್ಯ ಕೋರಿದರು.

ಮುಷ್ಕರದಿಂದ ಹಿಂದೆ ಸರಿಯುವುದಿಲ್ಲ: ಸಾರಿಗೆ ನೌಕರರ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದ ಸಂಧಾನ ಸಭೆ ವಿಫಲವಾಗಿದ್ದು, ಈಗಾಗಲೇ ಘೋಷಿಸಿರು ವಂತೆ ಸಾರಿಗೆ ನೌಕರರ ಮುಷ್ಕರ ನಡೆಯಲಿದೆ. 38 ತಿಂಗಳ ವೇತನ ಬಾಕಿ, ವೇತನ ಹೆಚ್ಚಳ ಸೇರಿದಂತೆ ಸಾರಿಗೆ ಸಂಸ್ಥೆ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಸರಕಾರ ಮುಂದಾಗಬೇಕು ಎಂದು ಅನಂತಸುಬ್ಬರಾವ್ ಆಗ್ರಹಿಸಿದರು.

1,800 ಕೋಟಿ ರೂ. ವೇತನ ಬಾಕಿ, ಪಿಎಫ್ ಬಾಕಿ, ವೇತನ ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗಿತ್ತು. ಆದರೆ ಸರ್ಕಾರ ವೇತನ ಹಿಂಬಾಕಿ ಕೊಡಲು ಒಪ್ಪುತ್ತಿಲ್ಲ. ಸಾರಿಗೆ ನೌಕರರು 38 ತಿಂಗಳ ವೇತನ ಬಾಕಿ ಕೇಳಿದರೆ, 14 ತಿಂಗಳ ವೇತನ ಬಾಕಿ ಕೊಡಲು ಸರ್ಕಾರ ಒಪ್ಪಿದೆ. ಹೀಗಾಗಿ ಸಂಧಾನ ಸಭೆ ವಿಫಲವಾಗಿದೆ ಎಂದು ಅವರು ತಿಳಿಸಿದರು.

ಶಿಸ್ತು ಕ್ರಮದ ಎಚ್ಚರಿಕೆ: ಈ ಮಧ್ಯೆ ಸಾರಿಗೆ ನೌಕರರು ಕರ್ತವ್ಯಕ್ಕೆ ಗೈರು ಹಾಜರಾದರೆ ಶಿಸ್ತು ಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ, ಎಲ್ಲಾ ನೌಕರರ ರಜೆ ರದ್ದು ಮಾಡಲಾಗಿದೆ. ಕರ್ತವ್ಯಕ್ಕೆ ಗೈರು ಹಾಜರಾದರೆ ವೇತನ ಕಡಿತ ಮಾಡಲಾಗುವುದು ಎಂದು ನೌಕರರಿಗೆ ಎಚ್ಚರಿಕೆಯ ಸಂದೇಶವನ್ನು ಸಾರಿಗೆ ಇಲಾಖೆ ನೀಡಿದೆ.

ಮೈಸೂರು ಹಳೇ ಕೆಸರೆ, ರಾಜೀವ್‌ನಗರ 3ನೇ ಹಂತದಲ್ಲಿ ಸ್ಮಶಾನ ದೃಶ್ಯ

ಕಣ್ಣಾಯಿಸಿದೆಡೆಯಲ್ಲಾ ಕಸದ ರಾಶಿ; ಇಡೀ ದಿನ ಎಲ್ಲೆಡೆ ಹೊಗೆ ವಾತಾವರಣ; ತಂತಿಗಾಗಿ ವೈರ್‌ಗೆ ಬೆಂಕಿ ಹಾಕಿ ಕಾಯುವ ದುಷ್ಕರ್ಮಿಗಳು; ವರುಣ ನಾಲೆ ಸೇರುತ್ತಿದೆ ಪ್ಲಾಸ್ಟಿಕ್ ತ್ಯಾಜ್ಯ





ಎಲೆಕ್ಟ್ರಿಕಲ್ ವೈರ್‌ಗೆ ಬೆಂಕಿ ಹಚ್ಚಿರುವ ದುಷ್ಕರ್ಮಿಗಳು



ವರುಣ ನಾಲೆ ಬದಿಯಲ್ಲಿ ಕಸದ ರಾಶಿ ಕಾಣಬಹುದು.

ಮೈಸೂರು, ಆ.4(ಎಂಕೆ)– ಮೈಸೂರಿನ ಹಳೇ ಕೆಸರೆ, ರಾಜೀವ್‌ನಗರ 3ನೇ ಹಂತದಲ್ಲಿ (ವರುಣ ನಾಳೆ ಸುತ್ತಮುತ್ತ) ಭಯಾನಕ ಹೊಗೆಯ ವಾತಾವರಣ ಸೃಷ್ಟಿಯಾಗಿದ್ದು, ಹಾಡಹಗಲೇ ಕಂಡ-ಕಂಡಲೆಲ್ಲಾ ಕಸ ಸುರಿದು, ಮೂಟೆಗಟ್ಟಲೇ ವೈರ್‌ಗಳಿಗೆ ಬೆಂಕಿ ಹಚ್ಚಲಾಗುತ್ತಿದೆ...!

ನಗರದ ರಿಂಗ್‌ರಸ್ತೆ ಸಮೀಪದ ಹಳೇ ಕೆಸರೆ ಮತ್ತು ರಾಜೀವ್‌ನಗರ 3ನೇ ಹಂತದ ಮಾರ್ಗವಾಗಿ ಹಾದು ಹೋಗಿರುವ ವರುಣ ನಾಲೆಯ ಎರಡು ಬದಿಯಲ್ಲಿ ಲೋಡ್‌ಗಟ್ಟಲೆ ಕಸ ಸುರಿಯಲಾಗಿದೆ. ಅಲ್ಲದೆ ರಾಜೀವ್‌ನಗರ 3ನೇ ಹಂತದ(ಆರ್‌ಟಿಓ–55) ಹಿಂಭಾಗದ ಬಡಾವಣೆಯ ರಸ್ತೆಗಳಲ್ಲಿ ರಾಶಿ ರಾಶಿ ಪ್ಲಾಸ್ಟಿಕ್ ಪದಾರ್ಥಗಳು, ಎಲೆಕ್ಟ್ರಿಕಲ್ ವಸ್ತುಗಳು ಹಾಗೂ ವೈರ್‌ಗಳನ್ನು ಪ್ರತಿನಿತ್ಯ ಸುಡಲಾಗುತ್ತಿದೆ.

ವರುಣ ನಾಲೆ ಎರಡು ಬದಿಯಲ್ಲೂ ಕಸ ಸುರಿಯಲಾಗುತ್ತಿದ್ದು, ಬಹುತೇಕ ಕಸ ನಾಲೆ ಸೇರುತ್ತಿದ್ದೆ. ಅಲ್ಲದೆ ತಂತಿಗಾಗಿ ವೈಯರ್‌ಗಳ ಸುಟ್ಟು, ಅದರ ಬೂದಿಯನ್ನು ನಾಲೆಗೆ ಬಿಡಲಾಗುತ್ತಿದೆ. ಕಸದ ಜೊತೆಗೆ ದಟ್ಟ ಹೊಗೆಯಿಂದಾಗಿ ಇಲ್ಲಿನ ವಾತಾವರಣ ಭಯಾನಕವಾಗಿ ಗೋಚರುವಾಗುತ್ತಿದ್ದು, ಅಕ್ರಮ, ಅನೈರ್ಮಲ್ಯ ಚಟುವಟಿಕೆಗಳ ತಾಣವಾಗಿದೆ.

ದಿನವಿಡೀ ವೈರ್‌ಗಳಿಗೆ ಬೆಂಕಿ ಹಚ್ಚುವುದು. ಕಸ ತಂದು ಸುರಿಯುವುದನ್ನು ಕಂಡು ಬೇಸತ್ತಿರುವ ಸ್ಥಳೀಯ ನಿವಾಸಿಗಳ ಸ್ಥಿತಿಯಂತೂ ಚಿಂತಾಜನಕವಾಗಿದೆ. ದಿನ ಬೆಳಗಾದರೆ ಕಸದ ದರ್ಶನದ ಜೊತೆಗೆ ಹೊತ್ತಿ ಉರಿಯುವ ಪ್ಲಾಸ್ಟಿಕ್ ಪದಾರ್ಥಗಳು, ವೈರ್‌ಗಳಿಂದ ಹೊರಸೂಸುವ ವಿಷಕಾರಿ ಹೊಗೆಯಿಂದ ಸ್ವಚ್ಛಗಾಳಿ ಉಸಿರಾಡುವ ಭಾಗ್ಯವನ್ನೂ ಕಳೆದುಕೊಂಡಿದ್ದಾರೆ.

ಕಂಡಲೆಲ್ಲಾ ಕಸ: ರಿಂಗ್ ರಸ್ತೆಯಿಂದ ಹಳೆಕೆಸರೆ ಕಡೆಯ ರಸ್ತೆಯಲ್ಲಿ ಸ್ವಲ್ಪ ದೂರ ಸಾಗಿದರೆ ಎದುರಾಗುವ ವರುಣ ನಾಲೆ ಬಲಗಡೆ(ನಾಲೆ ಬದಿಯಲ್ಲಿ)ಗೆ ಸಾಗಿದರೆ ಭಾರಿ ಪ್ರಮಾಣದಲ್ಲಿ ಕಸ ಸುರಿದು ಬೆಂಕಿ ಹಚ್ಚಿರುವ ಸ್ಥಳಗಳು ಕಣ್ಣಿಗೆ ರಾಚಲಿವೆ. ಸುಮಾರು 50 ಅಡಿ ಅಳತೆ 200 ಮೀಟರ್ ರಸ್ತೆಯಲ್ಲಿ ಸಂಪೂರ್ಣವಾಗಿ ಲೋಡ್‌ಗಟ್ಟಲೆ ಕಸ ಸುರಿದು ಬೆಂಕಿ ಹಚ್ಚಲಾಗಿದೆ.

ಸುರಿದಿರುವ ಕಸದಲ್ಲಿ ಬಹುತೇಕ ಎಲೆಕ್ಟ್ರಿಕ್ ಹಾಗೂ ಪ್ಲಾಸ್ಟಿಕ್ ವಸ್ತುಗಳಿದ್ದು, ವೈರ್‌ನಿಂದ ಸಿಗುವ ವಿದ್ಯುತ್ ತಂತಿಗಾಗಿ ಬೆಂಕಿ ಹಚ್ಚಲಾಗುತ್ತಿದೆ. ಅಲ್ಲದೆ ಮೂಟೆಗಟ್ಟಲೆ ತಂದು ಸುರಿದಿರುವ ಪ್ಲಾಸ್ಟಿಕ್ ವಸ್ತುಗಳಿಗೂ ಬೆಂಕಿ ಹಚ್ಚಿದ್ದು, ಇಡೀ ರಸ್ತೆಯೇ ಬೂದಿ ಹಾಗೂ ಅರ್ಧಂಬರ್ಧ ಸುಟ್ಟ ವಸ್ತುಗಳಿಂದ ಆವರಿಸಿದೆ.

ತಂತಿಗಾಗಿ ಬೆಂಕಿ: ವಿದ್ಯುತ್ ವೈರ್ ನೊಳಗೆ ಇರುವ ತಂತಿಗಾಗಿ ಮೂಟೆಗಟ್ಟಲೆ ವೈರ್‌ಗಳನ್ನು ತಂದು ಸುಟ್ಟು ನಂತರ ವೈರ್‌ನಿಂದ ತಂತಿ ಬೇರ್ಪಡಿಸಿಕೊಂಡು ಮಾರಾಟ ಮಾಡಲಾಗುತ್ತಿದೆ. ಮೂರ್ಕಾಸಿನ ವಿದ್ಯುತ್ ತಂತಿಗಾಗಿ ಇಡೀ ವಾತಾವರಣಕ್ಕೆ ವಿಷಗಾಳಿಯನ್ನು ಬಿಡಲಾಗುತ್ತಿದೆ. ಅಲ್ಲದೆ ಸುಟ್ಟ ವೈರ್ ತ್ಯಾಜ್ಯವನ್ನು ಪಕ್ಕದಲ್ಲೇ ಹರಿಯುವ ವರುಣ ನಾಲೆಗೆ ಬಿಸಾಡುತ್ತಿರುವುದರಿಂದ ರೈತರ ಜಮೀನಿನ ಮಣ್ಣಿಗೂ ವಿಷ ಸೇರುತ್ತಿದೆ.

ಭಯದ ವಾತಾವರಣ: ರಾಜೀವ್‌ನಗರ 3ನೇ ಹಂತದಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿದ್ದರೂ, ನಾಲೆಯ ಪಕ್ಕದ ವಿಶಾಲ ಖಾಲಿ ಜಾಗದಲ್ಲಿ ರಾತ್ರೋರಾತ್ರಿ ಕಸ ಸುರಿದು ಬೆಂಕಿ ಹಚ್ಚುವುದು, ವೈರ್‌ಗಳನ್ನು ಸುಡುವುದು, ಅನೈತಿಕ ಚಟುವಟಿಕೆಗಳನ್ನು ನಡೆಸಿ ಭಯದ ವಾತಾವರಣವನ್ನು ಸೃಷ್ಟಿಸಲಾಗಿದೆ. ಜೊತೆಗೆ ಗಿಡ–ಗಂಟಿಗಳು ಬೆಳೆದು ನಿಂತಿದ್ದು, ಯಾರು ಬಂದು ಇಲ್ಲಿ ಏನೂ ಮಾಡುತ್ತಾರೆ ಎಂಬುದೇ ತಿಳಿಯದಂತಾಗಿದೆ.

ಮೈಸೂರಿಗೆ ಇದು ಸೇರಿಲ್ಲ: ಹಳೆಕೆಸರೆ, ರಾಜೀವ್‌ನಗರ 3ನೇ ಹಂತದ ಮೈಸೂರಿಗೆ ಸೇರಿಲ್ಲ. ಹಾಗಾಗಿ ಇಲ್ಲಿಗೆ ಯಾವ ಜನಪ್ರತಿನಿಧಿಗಳು, ಅಧಿಕಾರಿಗಳು ಬಂದು ಜನರ ಕಷ್ಟ ಕೇಳಲ್ಲ. ಕಸದ ನಡುವೆ ವಾಸ ಮಾಡುತ್ತಿರುವ ನಾವುಗಳು ದಿಕ್ಕು–ದೆಸೆಯಿಲ್ಲದಂತೆ ವಿಷಗಾಳಿಯನ್ನೇ ಸೇವನೆ ಮಾಡುತ್ತಿದ್ದೇವೆ. ಇದು ನಮ್ಮ ದೌರ್ಭಾಗ್ಯ ಎಂದು ಹಳೆ ಕೆಸರೆಯ ಜನಸ್ಪಂದನ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು 'ಮೈಸೂರು ಮಿತ್ರ'ನೊಂದಿಗೆ ತಮ್ಮ ಚಿಂತಾಜನಕ ಸ್ಥಿತಿ ತೆರೆದಿಟ್ಟರು.

ಸುಡುವಾಗಲೇ ಸಿಕ್ಕಿಬಿದ್ದರು...!

ರಾಜೀವ್‌ನಗರ 3ನೇ ಹಂತದ (ವರುಣ ನಾಲೆ ಬದಿಯಲ್ಲಿ) ಮೂವರು ಆಟೋ(ಕೆ.ಎ–09ಬಿ–3884)ದಲ್ಲಿ ಎಲೆಕ್ಟ್ರಿಕಲ್ ವೈರ್ (ಸಿರಿಯಲ್ ಸೆಟ್)ಗಳನ್ನು ತಂದು ಸುಡುವಾಗ ಸಮೀಪದಲ್ಲಿಯೇ ಇದ್ದ ಸ್ಥಳೀಯ ನಿವಾಸಿಗಳ ಕೈಗೆ ಸಿಕ್ಕಿಬಿದ್ದ ಘಟನೆ ನಡೆಯಿತು. ಮೂರು ಚೀಲದಲ್ಲಿ ವೈರ್‌ಗಳನ್ನು ತಂದಿದ್ದ ಮೂವರು, ಬಿಡಿಬಿಡಿಯಾಗಿ ವೈರ್‌ಗಳನ್ನಿಟ್ಟು ಬೆಂಕಿ ಹಚ್ಚಿದ್ದರು. ದಟ್ಟ ಹೊಗೆಯನ್ನು ಕಂಡು ಸ್ಥಳಕ್ಕೆ ಹೋದ ಕೂಡಲೇ ಬೆಂಕಿ ನಂದಿಸಿ, ಇದೇ ಮೊದಲು ಇಲ್ಲಿಗೆ ಬಂದು ವೈರ್‌ಗಳನ್ನು ಸುಡುತ್ತಿದ್ದೇವೆ. ವಿದ್ಯುತ್ ತಂತಿ ಮಾರಾಟ ಮಾಡಿದರೆ, ಸ್ವಲ್ಪ ಹಣ ಸಿಗಲಿದ್ದು, ಅದಕ್ಕಾಗಿ ಈ ಕೆಲಸ ಮಾಡಿದ್ದೇವೆ. ಮತ್ತೊಮ್ಮೆ ಈ ಕಡೆ ಬರಲ್ಲ ಎಂದು ಪರಿತಪಿಸಿದರು.

ವೈರ್ ಸುಟ್ಟರೆ, ನಿನಗೆ ಸ್ವಲ್ಪ ಕಾಸು ಬರುತ್ತೆ. ಆದರೆ, ಇಲ್ಲಿನ ಸಾವಿರಾರು ಜನರ ಆರೋಗ್ಯ ಹಾಳಾಗಲಿದೆ. ಬೆಂಕಿ ಹಚ್ಚಿದ ವೈರ್‌ನಿಂದ ಬರುವ ಹೊಗೆ ವಿಷಕಾರಿಯಾಗಿದ್ದು, ಆರೋಗ್ಯಕ್ಕೆ ಭಾರಿ ಹಾನಿ ಉಂಟು ಮಾಡಲಿದೆ. ಈ ರೀತಿ ವೈರ್‌ಗಳನ್ನು ಸುಡುವುದರಿಂದ ವಾತಾವರಣವೇ ಹಾಳಾಗಲಿದೆ. ಅಲ್ಲದೆ ಇದು ಅಪರಾಧ ಕೂಡ ಎಂದು ಎಚ್ಚರಿಸಿದರು.

ಮಾದಕ ವಸ್ತು ವಿರೋಧಿ ಕಾರ್ಯಪಡೆಯ ಖಾಲಿ ಹುದ್ದೆಗಳ ಭರ್ತಿಗೆ ಅನುಮತಿ

ಮೈಸೂರು, ಆ.4(ಎಸ್‌ಪಿಎನ್)– ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (ಆ್ಯಂಟಿ ನಾರ್ಕೋಟಿಕ್ಸ್ ಟಾಸ್ಕ್ ಫೋರ್ಸ್)ಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಹೆಚ್ಚುವರಿ ಪೊಲೀಸ್ ಅಧೀಕ್ಷಕರು 2, ಪೊಲೀಸ್ ಉಪಾಧ್ಯಕ್ಷರು ಅಥವಾ ಸಹಾಯಕ ಪೊಲೀಸ್ ಆಯುಕ್ತರು 2, ಸಹಾಯಕ ಆಡಳಿತಾಧಿಕಾರಿ, ಶಾಖಾಧೀಕ್ಷಕರು, ಕಿರಿಯ ಸಹಾಯಕರು, ಎಫ್‌ಡಿಎ, ಶೀಘ್ರ ಲಿಪಿಗಾರರು, ದಲಾಯತ್ ಹುದ್ದೆಗಳಿಗೆ ತಲಾ ಒಂದೊಂದರಂತೆ 10 ಹುದ್ದೆಗಳ ನೇಮಕಕ್ಕೆ ಅನುಮತಿ ನೀಡಿದೆ.

ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕದಿಂದ ಮರು ವಿಂಗಡಣೆಯಾಗಬೇಕಾದ ಪಿಐ(ಸಿವಿಲ್) 2, ಪಿಎಸ್‌ಐ (ಸಿವಿಲ್) 4, ಸಿಎಚ್‌ಸಿ 20, ಸಿಪಿಸಿ 30 ಒಟ್ಟು 56 ಹುದ್ದೆಗಳನ್ನು ನಕ್ಸಲ್ ನಿಗ್ರಹ ಪಡೆ ಘಟಕದಿಂದ ವರ್ಗಾಯಿಸಲು ಹಾಗೂ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕವು ಒಟ್ಟಾರೆಯಾಗಿ ಡಿಜಿ ಮತ್ತು ಐಜಿಪಿ ಅವರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕು ಮತ್ತು ಸೈಬರ್ ಕಮಾಂಡರ್ ಡಿಜಿಗೆ ಕಾರ್ಯ ವರದಿ ಮಾಡಿಕೊಳ್ಳುವಂತೆ ಸೂಚಿಸಿದೆ.

ಸದರಿ ಸೃಜಿಸಲಾಗುವ ಘಟಕವು, ಎಎನ್‌ಟಿಎಫ್ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ವರದಿ ಮಾಡತಕ್ಕದ್ದು, ಅಲ್ಲದೆ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಒಂದು ಹುದ್ದೆಯನ್ನು ವರ್ಗಾಯಿಸುವುದರೊಂದಿಗೆ ಎನ್‌ಟಿಟಿಎಫ್ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಪುನರ್‌ನಾಮೀಕರಣ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರತ್ಯೇಕವಾಗಿ ಆದೇಶ ಹೊರಡಿಸಿದೆ.

ಕರಕುಶಲ ಮೇಳ 'ಸಂಕೇತಿ ಸಂಭ್ರಮ'



ಮೈಸೂರಿನಲ್ಲಿ ಭಾನುವಾರ ಏರ್ಪಡಿಸಿದ್ದ 'ಸಂಕೇತಿ ಸಂಭ್ರಮ'ವನ್ನು ಹಿರಿಯ ಲೇಖಕ ರಘುಪತಿ ತಾಮ್ಹನ್‌ಕರ್ ಉದ್ಘಾಟಿಸಿದರು. ಉಮಾ ರಾಮಚಂದ್ರ, ವೀಣಾ ನಾಗರಾಜ್, ಶೈಲಾ, ವಿದ್ಯಾಶ್ರೀ ಮತ್ತು ಮಹತಿ ವಾಸುಕಿ ಇದ್ದಾರೆ.

ಮೈಸೂರು: ಸಂಕೇತಿಗಳ ಪಾಕ ಪದ್ಧತಿಗಳನ್ನು ಮತ್ತು ಕರಕುಶಲ ಪರಿಣತಿಯನ್ನು ತಿಳಿದುಕೊಳ್ಳಲು 'ಸಂಕೇತಿ ಸಂಭ್ರಮ' ಉತ್ತಮ ವೇದಿಕೆಯಾಗಿದೆ ಎಂದು ಹಿರಿಯ ಲೇಖಕ ರಘುಪತಿ ತಾಮ್ಹನ್‌ಕರ್ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯ ಶಾರದಾ ಕನ್ವೆನ್ಷನ್ ಹಾಲ್‌ನಲ್ಲಿ ಭಾನುವಾರ ಏರ್ಪಡಿಸಿದ್ದ 'ಸಂಕೇತಿ ಮೇಳ' ಉದ್ಘಾಟಿಸಿ ಅವರು ಮಾತನಾಡಿದರು.

ಮೇಳದಲ್ಲಿ ನಲವತ್ತು ಮಳಿಗೆ ಇದ್ದವು. ಕಸೂತಿ ಮತ್ತು ಹತ್ತಿ ಹಾರಗಳ ತಜ್ಞೆ, 85 ವರ್ಷ ವಯಸ್ಸಿನ ರಮಾಮಣಿ ಅವರ ಮಳಿಗೆ ಎಲ್ಲರ ಗಮನ ಸೆಳೆಯಿತು. ರಾಧಿಕಾ ಅವರು ತಾವೇ ತಯಾರಿಸಿದ ವ್ಯಾನಿಟಿ ಬ್ಯಾಗುಗಳನ್ನು ಪ್ರದರ್ಶಿಸಿದರು. ರಂಜಿನಿ ಹೆಬ್ಬಾರ ಅವರ ವಿನೂತನ ಪೇಂಟಿಂಗ್ ಎಲ್ಲರ ಗಮನ ಸೆಳೆದವು. ಸಹನಾ ಅವರು ತಮ್ಮ ತಾಯಿ ಸುಜಾತಾ ತಯಾರಿಸಿದ ಪುರಿಖಾರವನ್ನು ಸ್ಯಾಂಪಲ್ ಕೊಟ್ಟು ಪರೀಕ್ಷಿಸಲು ಹೇಳಿ ವ್ಯಾಪಾರ ಮಾಡಿದರು. ಶ್ಯಾಮಲಾ ರಾಧೇಶ್ ಅವರ ಕೃತಕ ಆಭರಣಗಳು ಪ್ರದರ್ಶನಕ್ಕಿದ್ದವು.

ಹೌಸಿ ಹೌಸಿಯನ್ನು ಕೃಪಾ ತಂಡದವರು ನಿರ್ವಹಿಸಿದರು. ವೀಣಾ ಕೆ.ಆರ್. ಮತ್ತು ಪದ್ಮಾ ತಂಡ ವಿವಿಧ ಆಟಗಳನ್ನು ಆಡಿಸಿತು. ರೂಪಾ ಸ್ವಾಗತಿಸಿದರು. ಶೈಲಾ ನಾಗರಾಜ್ ಕಾರ್ಯಕ್ರಮ ನಿರ್ವಹಿಸಿದರು.

ನ್ಯಾಯಾಂಗ ಇಲಾಖೆಯಲ್ಲಿ ತರಬೇತಿಗಾಗಿ ಅರ್ಜಿ

ಮೈಸೂರು,ಆ.4–2025–26ನೇ ಸಾಲಿಗೆ ಮೈಸೂರು ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ವತಿಯಿಂದ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ನ್ಯಾಯಾಂಗ ಇಲಾಖೆಯಲ್ಲಿ ತರಬೇತಿಗಾಗಿ ತರಬೇತಿ ಭತ್ಯೆ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2025–26ನೇ ಸಾಲಿನಲ್ಲಿ ಕಾನೂನು ಪದವಿ ಪಡೆದ ಮತೀಯ ಅಲ್ಪಸಂಖ್ಯಾತರ ಸಮುದಾಯದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಅಭ್ಯರ್ಥಿಗಳಿಗೆ ಕಾನೂನು ತರಬೇತಿ ಪಡೆಯಲು ತರಬೇತಿ ಭತ್ಯೆ ನೀಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ. 3.50 ಲಕ್ಷ ಮೀರಿರಬಾರದು. ಅಭ್ಯರ್ಥಿಯು ತಮ್ಮ ಹೆಸರನ್ನು ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿರಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 30 ವರ್ಷಗಳೊಳಗೆ ಇರಬೇಕು ಮತ್ತು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯು ವಕೀಲರಾಗಿ ಕಾರ್ಯನಿರ್ವಹಿಸಲು ನಿಗದಿಪಡಿಸಲಾದ ಕಾನೂನು ಪರೀಕ್ಷೆಯಲ್ಲಿ ತೇರ್ಗಡೆಯಾಗಿ 2 ವರ್ಷ ಅವಧಿಯ ಒಳಗಿರುವವರು ಮಾತ್ರ ತರಬೇತಿಗೆ ಅರ್ಜಿ ಸಲ್ಲಿಸಲು ಅರ್ಜಿ ವಿತರಿಸುವ ದಿನಾಂಕ ಹಾಗೂ ಸ್ವೀಕರಿಸುವ ದಿನಾಂಕ ಆ.5ರಿಂದ ಸೆಪ್ಟೆಂಬರ್ 4ರ ಸಂಜೆ 5 ಗಂಟೆಯವರೆಗೆ ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2422088 ಕಚೇರಿ ವೇಳೆಯಲ್ಲಿ ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. # ಸಿ.ಎ ನಂ.01, ಮೌಲಾನಾ ಆಜಾದ್ ಭವನ, ಮೈಸೂರು ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗೌರವ ಸಲ್ಲಿಕೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಎಸ್.ರಘುನಾಥ್, ರಾಜ್ಯ ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮಿಕಾಂತ್, ರಾಜ್ಯ ಉಪಾಧ್ಯಕ್ಷ ಎಸ್.ಎಸ್.ಪ್ರಸಾದ್, ದಿಲೀಪ್, ರಾಜಶೇಖರ್, ರಥಯಾತ್ರೆ ಸುರೇಶ್, ಜಂಟಿ ಕಾರ್ಯದರ್ಶಿ ತಿರುಮಲೇಶ್, ನಾಗೇಂದ್ರ ಜೋಯಿಸ್ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್ ತಮ್ಮ ನಿವಾಸದಲ್ಲಿ ಗೌರವಿಸಿದರು.

ನಾಳೆ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

ಮೈಸೂರು,ಆ.4–ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕ ಸಮಾಜಿಕ ಭದ್ರತಾ ಮಂಡಳಿ, ಕಾರ್ಮಿಕ ಇಲಾಖೆ, ಸಾರಿಗೆ ಇಲಾಖೆ, ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪಂಚಾಯತ್, ಮೈಸೂರು ಸಹಯೋಗದಲ್ಲಿ ಮೈಸೂರು ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಮಂಡಳಿಯ ವಿವಿಧ ಯೋಜನೆಗಳ ಕುರಿತು ಅರಿವು ಕಾರ್ಯಕ್ರಮವನ್ನು ಆ.6ರಂದು ಮಧ್ಯಾಹ್ನ 3 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು–ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಉಪಸ್ಥಿತಿಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ, ಶಾಸಕರಾದ ಅನಿಲ್‌ಕುಮಾರ್ ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್‌ಬಂಡಿಸಿದ್ದೇಗೌಡ, ಸಂಸದ ಯದುವೀರ್ ಒಡೆಯರ್ ಭಾಗವಹಿಸಲಿದ್ದಾರೆ. ಮೈಸೂರು ಜಿಲ್ಲೆಯ ವಿಧಾನಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರು, ನಿಗಮ/ಮಂಡಳಿ ಅಧ್ಯಕ್ಷರು, ಕಾರ್ಮಿಕ ಇಲಾಖೆ ಆಯುಕ್ತರು, ಅಧಿಕಾರಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ವಾರ್ಷಿಕ ಸಭೆ




ಮೈಸೂರಿನ ಸೋಮೇಶ್ವರಪುರ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಸಭೆ ಸೋಮವಾರ ನಡೆಯಿತು. ಈ ವೇಳೆ ಸಂಘದ ಅಧ್ಯಕ್ಷ ಎಲ್.ಮಾಧು, ಮೈಮುಲ್ ನಿರ್ದೇಶಕರಾದ ಕೆ.ಉಮಾಶಂಕರ್, ಬಿ.ಗುರುಸ್ವಾಮಿ, ಮೈಸೂರು ಹಾಲು ಒಕ್ಕೂಟದ ಮಹಿಳಾ ನಿರ್ದೇಶಕಿ ಲೀಲಾ ನಾಗರಾಜು, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚೇತನ್‌ಕುಮಾರ್ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ದೇಶ - ವಿದೇಶ

ಯೆಮೆನ್‌ನಲ್ಲಿ ಮುಳುಗಿದ ದೋಣಿ; 68 ವಲಸಿಗರ ಸಾವು, 74 ಮಂದಿ ನಾಪತ್ತೆ

ಕೈರೋ: ಯೆಮೆನ್‌ನಲ್ಲಿ ಸುಮಾರು 150 ಜನರು ಇದ್ದ ದೋಣಿ ಮುಳುಗಿ ಕನಿಷ್ಠ 68 ವಲಸಿಗರು ಮೃತಪಟ್ಟಿದ್ದು, 74 ಮಂದಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ಯೆಮೆನ್‌ನ ದಕ್ಷಿಣ ಅಬ್ಯಾನ್ ಪ್ರಾಂತ್ಯದ ಕರಾವಳಿ ಪ್ರದೇಶದಲ್ಲಿ ದುರಂತ ಸಂಭವಿಸಿದೆ.



ಈವರೆಗೆ 10 ಮಂದಿಯನ್ನು ರಕ್ಷಿಸಲಾಗಿದೆ. ಕಡುಬಡತನದ ಆಫ್ರಿಕಾದಿಂದ ಪಲಾಯನಗೈದ ನೂರಾರು ವಲಸಿಗರು ಕೆಲಸದ ನಿಟ್ಟಿನಲ್ಲಿ ಶ್ರೀಮಂತ ಗಲ್ಫ್ ಅರಬ್ ರಾಷ್ಟ್ರಗಳನ್ನು ತಲುಪುವ ಇರಾದೆ ಹೊಂದಿದ್ದರು. ಯೆಮೆನ್‌ಗೆ ಅನಧಿಕೃತ ವಲಸಿಗರ ಹರಿವು ಗಣನೀಯವಾಗಿ ಹೆಚ್ಚುತ್ತಿದೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಘಟನೆ ಹೇಳಿದೆ. ಆಫ್ರಿಕಾದಿಂದ ಯೆಮೆನ್‌ಗೆ ಹೋಗುವ ಮಾರ್ಗ, ವಿಶ್ವದ ಅತ್ಯಂತ ನಿಬಿಡ ಹಾಗೂ ಅತ್ಯಂತ ಅಪಾಯಕಾರಿ ವಲಸೆ ಮಾರ್ಗಗಳಲ್ಲಿ ಒಂದಾಗಿದೆ. ಕಳೆದ ವರ್ಷ ಯೆಮೆನ್‌ಗೆ 60 ಸಾವಿರಕ್ಕೂ ಹೆಚ್ಚು ಮಂದಿ ವಲಸೆ ಹೋಗಿದ್ದರು ಎಂದು ಐಓಎಂ ತಿಳಿಸಿದೆ.

ಮಗಳು ರಸ್ತೆಗುಂಡಿಗೆ ಬಿದ್ದಿದ್ದಕ್ಕೆ ಕೆಸರು ನೀರಿನಲ್ಲಿ ಕುಳಿತು ಪ್ರತಿಭಟಿಸಿದ ತಂದೆ


ಕಾನ್ಪುರ: ಮಗಳು ರಸ್ತೆಗುಂಡಿಗೆ ಬಿದ್ದಿದ್ದಕ್ಕೆ ಕೋಪಗೊಂಡ ತಂದೆ ಅದೇ ಕೊಳಕು ನೀರಿನಲ್ಲಿ ಕುಳಿತು ಪ್ರತಿಭಟನೆ ನಡೆಸಿರುವ ಘಟನೆ ಉತ್ತರಪ್ರದೇಶದ ಕಾನ್ಪುರದಲ್ಲಿ ನಡೆದಿದೆ. ಕೇವಳ ಮಗಳು ಬಿದ್ದಿದ್ದಾಳೆಂದಷ್ಟೇ ಅಲ್ಲ,



ಇನ್ನಾರೂ ಕೂಡ ಬೀಳಬಾರದು ಎನ್ನುವ ಕಾರಣಕ್ಕೆ ಪ್ರತಿಭಟನೆ ನಡೆಸಿದ್ದಾರೆ. ಹಲವು ರಾಜಕೀಯ ಮುಖಂಡರಿಗೆ ಪದೇ ಪದೆ ದೂರು ನೀಡಿದ್ದರೂ, ರಸ್ತೆ ಹಲವು ತಿಂಗಳುಗಳಿಂದ ಶೋಚನೀಯ ಸ್ಥಿತಿಯಲ್ಲಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಆದರೆ, ಇದನ್ನು ದುರಸ್ತಿ ಮಾಡಲು ಅಥವಾ ಪುನರ್ನಿರ್ಮಿಸಲು ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ನೀರು ತುಂಬಿದ ಗುಂಡಿಯಲ್ಲಿ ಚಾಪೆ ಮತ್ತು ದಿಂಬಿನೊಂದಿಗೆ ಮಲಗಿರುವ ವ್ಯಕ್ತಿಯ ವಿಡಿಯೋ ಸಾಮಾಜಿಕ ಮಾಧ್ಯಮ ಜಾಲತಾಣಗಳಲ್ಲಿ ತೀವ್ರವಾಗಿ ವೈರಲ್ ಆಗುತ್ತಿದೆ. ರಸ್ತೆಗಳ ದುಃಸ್ಥಿತಿ ಮತ್ತು ಗುಂಡಿಗಳಿಂದ ಉಂಟಾಗುವ ಅಪಘಾತಗಳ ಬಗ್ಗೆ ಅಧಿಕಾರಿಗಳ ಗಮನ ಸೆಳೆಯಲು ಈ ವಿಚಿತ್ರ ಪ್ರತಿಭಟನೆ ನಡೆಸಿದ್ದಾರೆ. ನಿರಂತರ ಮಳೆಯಿಂದಾಗಿ ಕಾನ್ಪುರದ ಹಲವಾರು ಭಾಗಗಳು ಜಲಾವೃತಗೊಂಡಿವೆ.

ರಷ್ಯಾದಲ್ಲಿ ಮತ್ತೆ ಭೂಕಂಪ; ಜ್ವಾಲಾಮುಖಿ ಸ್ಫೋಟ, ಸುನಾಮಿ ಸಾಧ್ಯತೆ

ಮಾಸ್ಕೋ: ರಷ್ಯಾದ ಪೂರ್ವ ಭಾಗದ ಕುರಿಲ್ ದ್ವೀಪಗಳಲ್ಲಿ ಮತ್ತೆ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ 7.0 ತೀವ್ರತೆಯ ಭೂಕಂಪ



ದಾಖಲಾಗಿದ್ದು, ಸಣ್ಣ ಪ್ರಮಾಣದಲ್ಲಿ ಸುನಾಮಿ ಅಲೆಗಳು ಕಾಣಿಸಿಕೊಂಡಿವೆ ಎಂದು ದೇಶದ ತುರ್ತು ಸೇವೆಗಳ ಸಚಿವಾಲಯ ತಿಳಿಸಿದೆ. ರಷ್ಯಾದ ಪೂರ್ವದ ಕಮ್ಚಟ್ಕಾ ದೀಪದ ಸಮೀಪದಲ್ಲಿ ಮೂರು ಪ್ರದೇಶಗಳಲ್ಲಿ ಭೂಕಂಪ ಸಂಭವಿಸಿದ್ದು, ಸಮುದ್ರ ಅಲೆಗಳ ಎತ್ತರ ಕಡಿಮೆಯಾಗಿದ್ದರೂ ಕರಾವಳಿ ಪ್ರದೇಶದಿಂದ ದೂರ ಇರುವಂತೆಯೇ ಜನರಿಗೆ ಸೂಚಿಸಲಾಗಿದೆ.

ಅಮೆರಿಕದ ಭೂಸರ್ವೇಕ್ಷಣಾ ಇಲಾಖೆ ಪ್ರಕಾರ ಭೂಕಂಪದ ತೀವ್ರತೆ 7ರಷ್ಟಿತ್ತು. ಪ್ರಬಲ ಭೂಕಂಪದ ಬಳಿಕ ಯಾವುದೇ ಸುನಾನಿ ಎಚ್ಚರಿಕೆ ನೀಡಿಲ್ಲ. ಆದರೆ ಭೂಕಂಪದಿಂದಾಗಿ ಈ ಪ್ರದೇಶದಲ್ಲಿ 600 ವರ್ಷಗಳಲ್ಲಿ ಮೊದಲ ಬಾರಿ ಜ್ವಾಲಾಮುಖಿ ಸ್ಫೋಟಗೊಂಡಿದೆ ಎಂದು ಆರ್‌ಐಎ ಸ್ಟೇಟ್ ನ್ಯೂಸ್ ವರದಿ ಮಾಡಿದೆ. ಮುಂದಿನ ಕೆಲವು ವಾರಗಳಲ್ಲಿ ಕುರಿಲ್ ದ್ವೀಪಗಳಲ್ಲಿ ಭೂಕಂಪ ಸಂಭವಿಸುವ ಸಾಧ್ಯತೆಯಿದೆ ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದರು.

ಮನೆಯ ಬಾಗಿಲಲ್ಲೇ 'ಗಂಗಾರತಿ' ನೆರವೇರಿಸಿದ ಪೊಲೀಸ್ ಅಧಿಕಾರಿ

ಪ್ರಯಾಗ್‌ರಾಜ್: ಪ್ರಯಾಗ್‌ರಾಜ್‌ನಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಗಂಗಾ– ಯಮುನಾ ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿವೆ. ಹಲವು ಮನೆಗಳು ಜಲಾವೃತವಾಗಿವೆ. ತುಂಬಿ ಹರಿಯುತ್ತಿದ್ದ ಗಂಗಾ ನದಿಯಿಂದ ಪ್ರವಾಹದ ನೀರು ಮನೆ ಬಾಗಿಲಿಗೆ ಬಂದಾಗ ಉತ್ತರಪ್ರದೇಶದ ಸಬ್–ಇನ್ಸ್‌ಪೆಕ್ಟರ್ ಚಂದ್ರದೀಪ್ ನಿಶಾದ್, ಭಯಪಡುವ ಬದಲು ಬಾಗಿಲಿಗೆ ಬಂದ ಗಂಗೆಗೆ ಆರತಿ



ನೆರವೇರಿಸಿದರು. ನಗರದ ಹಲವಾರು ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಪ್ರವಾಹದ ನೀರಿನಿಂದಾಗಿ ಡಜನ್‌ಗಟ್ಟಲೆ ಪ್ರದೇಶಗಳು ಮುಳುಗಿವೆ. ಇಂದು ಬೆಳಗ್ಗೆ, ನಾನು ಕೆಲಸಕ್ಕೆ ಹೊರಡುವಾಗ, ಗಂಗಾ ಮಾತೆ ನಮ್ಮ ಮನೆ ಬಾಗಿಲಿಗೆ ಬಂದಳು. ನಾವು ನಮ್ಮ ಮನೆ ಬಾಗಿಲಲ್ಲಿ ಪ್ರಾರ್ಥನೆ ಸಲ್ಲಿಸಿ, ಆಶೀರ್ವಾದ ಪಡೆದೆವು. ಜೈ ಗಂಗಾ ಮೈಯಾ ಎಂದು ಅವರು ಪೋಸ್ಟ್‌ಗೆ ಶೀರ್ಷಿಕೆ ನೀಡಿದ್ದಾರೆ.

ಬರ್ಲಿನ್ ಸಾಂಸ್ಕೃತಿಕ ಹಬ್ಬ: ಹಂಪಿ ರಥಕ್ಕೆ 'ಅತ್ಯುತ್ತಮ ವ್ಯಾಗನ್' ಬಹುಮಾನ

ಬರ್ಲಿನ್: ಜರ್ಮನಿ ರಾಜಧಾನಿ ಬರ್ಲಿನ್ ನಗರದಲ್ಲಿ ನಡೆದ ಕಾರ್ನಿವಲ್ ದೆರ್ ಕುಲ್ತೂರೆನ್–2025' ಸಾಂಸ್ಕೃತಿಕ ಹಬ್ಬದ ಅಂಗವಾಗಿ ಬರ್ಲಿನ್ ಕನ್ನಡ ಬಳಗ ಈ.ವಿ. (ಬಿಕೆಬಿಇವಿ) ವತಿಯಿಂದ ನಿರ್ಮಿಸಲಾಗಿದ್ದ



ಐತಿಹಾಸಿಕ ಹಂಪಿ ರಥದ ಪ್ರತಿಕೃತಿಯು ವೀಕ್ಷಕರ ಮನಸೂರೆಗೊಂಡು ಅತ್ಯುತ್ತಮ ವ್ಯಾಗನ್ ಬಹುಮಾನಕ್ಕೆ ಪಾತ್ರವಾಯಿತು. ಪ್ರಪಂಚದ ಬೇರೆ ಬೇರೆ ದೇಶಗಳ ಸಂಸ್ಕೃತಿ, ಪರಂಪರೆಗಳನ್ನು ಬಿಂಬಿಸುವ 68 ತಂಡಗಳು ಪಾಲ್ಗೊಂಡಿದ್ದ ಈ ವಿಜೃಂಭಣೆಯ ಆಚರಣೆಯಲ್ಲಿ ಕನ್ನಡ ನಾಡಿನ ಕಲೆ, ನೃತ್ಯ, ವೈಭವ, ಪರಂಪರೆ, ಹಿರಿಮೆಗಳನ್ನು ಒಳಗೊಂಡ ಪ್ರದರ್ಶನಗಳು ಕೂಡ ಗಮನ ಸೆಳೆದವು. ಸಂಘದ ಸ್ವಯಂ ಸೇವಕರ ಸುಮಾರು 4 ತಿಂಗಳು ಶ್ರಮಿಸಿ ಹಂಪಿ ರಥ ನಿರ್ಮಿಸಿದ್ದರು. ತೀವ್ರ ಪೂರ್ವತಯಾರಿ ನಡೆಸಿದ್ದ ಸಾಂಸ್ಕೃತಿಕ ತಂಡದವರು ವರನಟ ಡಾ.ರಾಜಕುಮಾರ್ ಅವರ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡಿನೊಂದಿಗೆ ಪ್ರಾರಂಭಿಸಿ, ಯಕ್ಷಗಾನ, ಭರತನಾಟ್ಯ, ಕೋಲಾಟ, ತಮಟೆ, ಕಂಸಾಳೆ, ಹುಲಿವೇಷಗಳನ್ನೊಳಗೊಂಡ ಸಣ್ಣ ಪ್ರದರ್ಶನ ನೀಡಿದರು. ಮೆರವಣಿಗೆ ವೇಳೆ ಭಾರತ ಹಾಗೂ ಕರ್ನಾಟಕದ ಹಿರಿಮೆ ಸಾರುವ ಘೋಷಣೆಗಳು ಮೊಳಗಿದವು.

ರೋಲರ್ ಸ್ಕೇಟಿಂಗ್
ಕಲ್ಪನಾ ಕುಟ್ಟಪ್ಪಗೆ ಕಂಚಿನ ಪದಕ



ಕಲ್ಪನಾ ಕುಟ್ಟಪ್ಪ

ಕುಶಾಲನಗರ, ಆ.4– ದಕ್ಷಿಣ ಕೊರಿಯಾದಲ್ಲಿ ನಡೆದ 20ನೇ ಏಷ್ಯನ್ ರೋಲರ್ ಸ್ಕೇಟಿಂಗ್ ಚಾಂಪಿಯನ್ ಷಿಪ್‌ನಲ್ಲಿ ಜಿಲ್ಲೆಯ ಯುವತಿ ಎರಡು ಕಂಚಿನ ಪದಕ ಗಳಿಸಿದ್ದಾಳೆ.

ಸಮೀಪದ ಮಾದಾಪಟ್ಟಣ ಗ್ರಾಮದ ಕುಮಾರಿ ಮುಕ್ಕಾಟಿರ ಕಲ್ಪನಾ ಕುಟ್ಟಪ್ಪ ಈ ಸಾಧಕಿಯಾಗಿದ್ದಾಳೆ. ದಕ್ಷಿಣ ಕೊರಿಯಾದ ಜೆಟಿಯಾನ್ ನಗರದಲ್ಲಿ ಜು. 19 ರಿಂದ 10 ದಿನಗಳ ಕಾಲ ನಡೆದ ಸ್ಪರ್ಧೆಯಲ್ಲಿ ಭಾರತದ ಒಟ್ಟು 23 ಮಂದಿ ಸ್ಪರ್ಧಿಗಳು ಭಾಗವಹಿಸಿದ್ದು ಕಲ್ಪನಾ ಕುಟ್ಟಪ್ಪ ಎರಡು ಕಂಚಿನ ಪದಕಗಳನ್ನು ಗಳಿಸುವುದರೊಂದಿಗೆ ಭಾರತಕ್ಕೆ ಒಟ್ಟು 16 ಪದಕಗಳು ಲಭ್ಯವಾಗಿವೆ ಎಂದು ತಂಡದ ಕೋಚ್ ಶ್ರೀಪಾದ್ ಶಿಂಧೆ ತಿಳಿಸಿದ್ದಾರೆ.

ಕಲ್ಪನಾ ಕುಟ್ಟಪ್ಪ ರೋಲರ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಇದುವರೆಗೆ 20ಕ್ಕೂ ಅಧಿಕ ಪದಕಗಳನ್ನು ಗಳಿಸಿದ್ದು 2023ರಲ್ಲಿ ಚೀನಾದಲ್ಲಿ ನಡೆದ ಏಷ್ಯನ್ ರೋಲರ್ ಸ್ಕೇಟಿಂಗ್ ಚಾಂಪಿಯನ್ ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು. ಮಾದಪಟ್ಟಣ ಗ್ರಾಮದಲ್ಲಿ ಖ್ಯಾತ ನಾಟಿ ವೈದ್ಯರಾಗಿರುವ ಅಯಿನಮಂಡ ಲೀಲಾವತಿ ಗಣಪತಿರ ಮೊಮ್ಮಗಳು ಮುಕ್ಕಾಟಿರ ಸ್ವಾತಿ ರವಿ ಕುಟ್ಟಪ್ಪ ದಂಪತಿಗಳ ಪುತ್ರಿಯಾದ ಕಲ್ಪನಾ ಕುಟ್ಟಪ್ಪ ಪ್ರಸಕ್ತ ಚೆನ್ನೈ ಡಬ್ಲ್ಯೂಸಿಸಿ ವುಮೆನ್ಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಕಲ್ಪನಾ ಕುಟ್ಟಪ್ಪ ಈ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಚೀನಾ ದೇಶದಲ್ಲಿ ನಡೆಯುವ ವಿಶ್ವ ರೋಲರ್ ಸ್ಕೇಟಿಂಗ್ ಚಾಂಪಿಯನ್ ಷಿಪ್‌ಗೆ ಆಯ್ಕೆಯಾಗಿದ್ದಾರೆ.

ನಗರಸಭೆಯಲ್ಲಿ ಕೋಲಾಹಲವೆಬ್ಬಿಸಿದ ರಾಜಾಸೀಟ್ ಗ್ಲಾಸ್ ಬ್ರಿಡ್ಜ್ ಪ್ರಸ್ತಾಪ

ಮಡಿಕೇರಿ,ಆ.4–ನಗರಸಭೆಯ ಗಮನಕ್ಕೆ ಬಾರದೆ ನಗರದ ರಾಜಾಸೀಟ್‌ನಲ್ಲಿ 'ಗ್ಲಾಸ್ ಬ್ರಿಡ್ಜ್' ಮತ್ತು 'ಫುಡ್ ಕೋರ್ಟ್' ನಿರ್ಮಾಣಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಗಳು ನಡೆದಿರುವ ಬಗ್ಗೆ ನಗರಸಭೆಯ ತುರ್ತು ಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು.

ನಗರಸಭೆಯ ಸಭಾಂಗಣದಲ್ಲಿ ಕಲಾವತಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಆರಂಭದಲ್ಲೆ ಕಾಂಗ್ರೆಸ್ ಸದಸ್ಯ ರಾಜೇಶ್ ಯಲ್ಲಪ್ಪ ಸೇರಿದಂತೆ ನಾಮನಿರ್ದೇಶಿತ ಸದಸ್ಯರು, ಗ್ಲಾಸ್ ಬ್ರಿಡ್ಜ್ ಮತ್ತು ಫುಡ್ ಕೋರ್ಟ್ ಯೋಜನೆಯನ್ನು ಸರ್ಕಾರ ರೂಪಿಸಿದ್ದು, ಇದಕ್ಕೆ ವಿರೋಧ ಮಾಡುವ ಉದ್ದೇಶ ದಿಂದಲೆ ತುರ್ತು ಸಭೆ ಕರೆಯಲಾಗಿದೆ. ಈ ಸಭೆಯನ್ನು ಯಾವುದೇ ಕಾರಣಕ್ಕೂ ನಡೆಯಲು ಬಿಡುವುದಿಲ್ಲವೆಂದು ಅಧ್ಯಕ್ಷರ ವೇದಿಕೆಯ ಮುಂಭಾಗಕ್ಕೆ ಬಂದು ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರು, ನಗರಸಭೆಯ ಗಮನಕ್ಕೆ ಬಾರದೆ ಬಹುಕೋಟಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ತಮ್ಮ ವಿರೋಧ ವ್ಯಕ್ತಪಡಿಸಿ, ಈ ಬಗ್ಗೆ ಸಭೆ ನಡೆಯಲೇಬೇಕೆಂದು ಪಟ್ಟು ಹಿಡಿದಿದ್ದರಿಂದ ಕೆಲಕಾಲ ಪರಸ್ಪರ ಮಾತಿನ ಚಕಮಕಿಗಳು ನಡೆದವು. ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲ ಸದಸ್ಯರಿಗೆ ಅವರವರ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಕೊಡುವುದಾಗಿ ಅಧ್ಯಕ್ಷರ ಭರವಸೆ ಮೇರೆಗೆ ಸದಸ್ಯರು ತಮ್ಮ ಆಸನಗಳಿಗೆ ಮರಳಿದರು.



ನಗರಸಭೆಯ ತುರ್ತು ಸಭೆಯಲ್ಲಿ ಅಧ್ಯಕ್ಷರ ಪೀಠದ ಮುಂದೆ ಸದಸ್ಯರು ಪ್ರತಿಭಟಿಸಿದರು.

ಆಮಿಷಕ್ಕೆ ಒಳಗಾಗಿದ್ದೀರ : ಸರ್ಕಾರದ ಯೋಜನೆಯನ್ನು ನಗರಸಭೆ ವಿರೋಧಿಸುವುದು ಸರಿಯಲ್ಲ ಎಂದು ಕಾಂಗ್ರೆಸ್ ಸದಸ್ಯ ರಾಜೇಶ್ ಅನಿಸಿಕೆ ವ್ಯಕ್ತಪಡಿಸಿದಾಗ ಉದ್ದೇಶಿತ ಯೋಜನೆಗೆ ಮಾಜಿ ಸಚಿವ ಎಂ.ಸಿ.ನಾಣಯ್ಯ, ಸಂಸದ ಯದುವೀರ್ ವಿರೋಧಿಸಿದ್ದಾರೆ. ಯೋಜನೆಯಿಂದ ನಿಮಗೆ ವೈಯಕ್ತಿಕ ಲಾಭವಿದೆಯೇ ಎಂದು ಉಪಾಧ್ಯಕ್ಷ ಮಹೇಶ್ ಜೈನಿ ಕುಟುಕಿದರಲ್ಲದೆ, ನೀವು ಆಮಿಷಕ್ಕೆ ಒಳಗಾಗಿದ್ದೀರ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು. ಗ್ಲಾಸ್‌ಬ್ರಿಡ್ಜ್ ಯೋಜನೆಯ ಬಗ್ಗೆ ಮಾಹಿತಿ ಇಲ್ಲದೆ, ತುರ್ತು ಸಭೆ ಕರೆದಿದ್ದು ಹೇಗೆ, ನಿಮ್ಮ ಸ್ವಂತ ಚಿಂತನೆ ಇಲ್ಲವೆ ಎಂದು ರಾಜೇಶ್ ಅಧ್ಯಕ್ಷರನ್ನು ಪ್ರಶ್ನಿಸಿದಾಗ ಮತ್ತೆ ಮಾತಿನ ಚಕಮಕಿ ನಡೆಯಿತು.

ರಾಜಾಸೀಟ್ ಸೂಕ್ಷ್ಮ ವಲಯ–ಸದಸ್ಯ ಉಮೇಶ್ ಸುಬ್ರಮಣಿ ಮಾತನಾಡಿ, ರಾಜಾಸೀಟ್ ಪಕ್ಕದಲ್ಲೆ ಇರುವ ಇಂದಿರಾ ನಗರ, ಚಾಮುಂಡೇಶ್ವರಿ ನಗರಗಳು ಮಳೆಯಿಂದ ಸಂಕಷ್ಟಕ್ಕೆ ಸಿಲುಕುವ ಸೂಕ್ಷ್ಮ ವಲಯಗಳಾಗಿವೆ. ಮುಂಗಾರಿನ ಅವಧಿಯಲ್ಲಿ ಮನೆಗಳನ್ನು ತೆರವು ಗೊಳಿಸುವಂತೆ ಹಲವರಿಗೆ ನೋಟಿಸನ್ನು ಹಿಂದೆ ನೀಡಲಾಗಿದೆ. ಇದರ ಪಕ್ಕದಲ್ಲೆ ಇರುವ ರಾಜಾಸೀಟು ಸಹ ಬೆಟ್ಟ ಪ್ರದೇಶವಾಗಿದೆ. ಅಲ್ಲಿ ಗ್ಲಾಸ್ ಬ್ರಿಡ್ಜ್ ಯೋಜನೆ ಜಾರಿ ಎಷ್ಟು ಸರಿ ಎಂದು ಪ್ರಶ್ನಿಸಿದರು. ಸದಸ್ಯ ಕೆ.ಎಸ್.ರಮೇಶ್ ಮಾತನಾಡಿ, ಶಾಸಕರ ಪ್ರಯತ್ನದಿಂದ ಕೋಟ್ಯಂತರ ವೆಚ್ಚದ ಗ್ಲಾಸ್ ಬ್ರಿಡ್ಜ್ ಬರುತ್ತಿದೆ ಎಂದರೆ ಸಂತೋಷದ ವಿಚಾರ. ಈ ಯೋಜನೆ ರಾಜಾಸೀಟಿನಲ್ಲಿ ಸಾಧ್ಯವಿಲ್ಲ ಎಂದಾದರೆ ಬೇರೆ ಕಡೆ ಮಾಡಲಿ ಎಂದು ಸಲಹೆ ನೀಡಿದರು. ಸುದೀರ್ಘ ಚರ್ಚೆಯ ಬಳಿಕ ನಗರ ಸಭೆಯ ಗಮನಕ್ಕೆ ತಾರದೆ ಯೋಜನೆಯ ಅನುಷ್ಠಾನಕ್ಕೆ ಮುಂದಾಗಿರುವುದಕ್ಕೆ ವಿರೋಧವನ್ನು ವ್ಯಕ್ತಪಡಿಸುವ ಮತ್ತು ಅಗತ್ಯ ಮಾಹಿತಿಯನ್ನು ಪಡೆದ ನಂತರಸಭೆ ನಡೆಸಲು ನಿರ್ಧರಿಸಿತು.

ಮಾಹಿತಿಯ ಕಾರಣಕ್ಕೆ ಸಭೆ

ಅಗತ್ಯ ಮಾಹಿತಿ ಇಲ್ಲವೆಂದಾದರೆ ಗ್ಲಾಸ್ ಬ್ರಿಡ್ಜ್ ಮತ್ತು ಫುಡ್ ಕೋರ್ಟ್ ವಿಚಾರ ಸಭೆಗೆ ತಂದಿದ್ದು ಏಕೆ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷೆ ಕಲಾವತಿ, ಇತ್ತೀಚಿನ ದಿನಗಳಲ್ಲಿ ಮುಂಗಾರಿನ ಅವಧಿಯಲ್ಲಿ ಬರೆ ಕುಸಿತ ಮೊದಲಾದವು ಸಂಭವಿಸುತ್ತಿದೆ. ರಾಜಾಸೀಟಿನಲ್ಲಿ ಗ್ಲಾಸ್ ಬ್ರಿಡ್ಜ್ ಬರುವುದರಿಂದ ತೊಂದರೆಯಾಗುವುದು ಬೇಡ, ಎಲ್ಲರಿಗೂ ಒಳ್ಳೆಯದಾಗಲಿ ಎನ್ನುವ ಕಾರಣಕ್ಕೆ ತುರ್ತು ಸಭೆ ಕರೆದಿರುವುದಾಗಿ ಸ್ಪಷ್ಟಪಡಿಸಿದರು.

–ಮನ್ಸೂರ್, ಎಸ್‌ಡಿಪಿಐ ಸದಸ್ಯ

ಇಂದು ವಿದ್ಯುತ್ ವ್ಯತ್ಯಯ:
ವಿರಾಜಪೇಟೆ
ಪಟ್ಟಣದ ದೊಡ್ಡಟ್ಟಿ ಚೌಕಿಯಿಂದ ಪ್ರೈವೇಟ್ ಬಸ್ ನಿಲ್ದಾಣದವರೆಗೆ ವಿದ್ಯುತ್ ಸರಬರಾಜರಾಗುವುದಿಲ್ಲ.

ಕೊಡವ ಸಂಸ್ಕೃತಿ ಅಳಿಯದೆ ಮುಂದಿನ ತಲೆಮಾರಿಗೂ ಹರಡಲಿ

ಕಕ್ಕಡ ಪದಿನೆಟ್ ನಮ್ಮೆ ಆಚರಣೆಯಲ್ಲಿ ಸಮಾಜದ ಅಧ್ಯಕ್ಷರ ನುಡಿ



ಕಕ್ಕಡ ಪದಿನೆಟ್ ನಮ್ಮೆ ಆಚರಣೆ ಕಾರ್ಯಕ್ರಮವನ್ನು ಪರದಂಡ ಸುಬ್ರಮಣಿ ಉದ್ಘಾಟಿಸಿದರು.

ವಿರಾಜಪೇಟೆ, ಆ.4–ಜಿಲ್ಲೆಯ ಶ್ರೀಮಂತ ಸಂಸ್ಕೃತಿ ಮುಂದಿನ ತಲೆಮಾರಿಗೂ ಇಲ್ಲಿನ ಜನಾಂಗ ಹಾಗೂ ಕೊಡವ ಶ್ರೀಮಂತ ಸಂಸ್ಕೃತಿ ಅಳಿಯದೆ ಉಳಿಯಲಿ ಎಂದು ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಹೇಳಿದರು.

ಅಖಿಲ ಕೊಡವ ಸಮಾಜದ ಪೊಮ್ಮಕ್ಕಡ ಪರಿಷತ್ ವತಿಯಿಂದ ಆಯೋಜಿಸಿದ್ದ ಕಕ್ಕಡ ಪದಿನೆಟ್ ನಮ್ಮೆ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಈ ಕಕ್ಕಡ ಪದಿನೆಟ್ ಹಬ್ಬದ ಆಚರಣೆಯ ಮಹತ್ವ ಕೊಡವರಿಗೆ ಮಾತ್ರ ಅರಿವಿತ್ತು. ಆದರೆ ಇಂದು ಕೊಡಗಿನಲ್ಲಿ ಎಲ್ಲಾ ಜನಾಂಗದವರು ಆಚರಿಸುತ್ತಿದ್ದಾರೆ. ಕೊಡಗಿನಲ್ಲಿ ಬಹುತೇಕ ಯುವ ಜನರು ಉದ್ಯೋಗ ನಿಮಿತ ಜಿಲ್ಲೆಯಿಂದ ಹೊರಗೆ ಉಳಿದಿದ್ದು ಇಲ್ಲಿರುವ ವಯೋವೃದ್ದರು ಈ ಆಚರಣೆಯನ್ನು ಮುಂದುವರೆಸಿದ್ದಾರೆ. ಆದರೆ ಹಿಂದಿನ ಈ ವಿಶಿಷ್ಟ ಆಚರಣೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಬೇಕಾದ ಅನಿವಾರ್ಯತೆ ಇದೆ ಎಂದರು.

ವಕೀಲೆ ಮತ್ತು ಚಲನಚಿತ್ರ ನಿರ್ದೇಶಕಿ ಪಟ್ಟಡ ರೀನಾ ಪ್ರಕಾಶ್ ಮಾತನಾಡಿ ನಮ್ಮ ಉಡುಪು ತೊಡಪು, ಆಚಾರ, ಪದ್ದತಿ ಸಂಸ್ಕೃತಿ ಹಬ್ಬಗಳ ಆಚರಣೆ ತನ್ನದೆಯಾದ ವಿಶಿಷ್ಟತೆಯನ್ನು ಹೊಂದಿದೆ ಇಲ್ಲಿ ಜನರನ್ನು ಅವರ ಮನೆಯ ಹೆಸರಿನಲ್ಲಿ ಗುರುತಿಸುವುದು ವಿಶಿಷ್ಟವೇ ಆಗಿದೆ. ಇದನ್ನು ಉಳಿಸಿ ಬೆಳೆಸಿ ಮುಂದಿನ ಜನಾಂಗಕ್ಕೆ ಪರಿಚಯಿಸಬೇಕು ಎಂದರು.

ಅಖಿಲ ಕೊಡವ ಸಮಾಜದ ಉಪಾಧ್ಯಕ್ಷ ಅಜ್ಜಿಕುಟ್ಟಿರ ಸುಬ್ರಮಣಿ ಜಂಟಿ ಕಾರ್ಯದರ್ಶಿ ನಂದೇಟಿರ ರಾಜ ಮಾದಪ್ಪ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮಾಜದ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಬಾಚರಣಿಯಂಡ ರಾಣು ಅಪ್ಪಣ್ಣ ಅಧ್ಯಕ್ಷತೆ ವಹಿಸಿದ್ದು, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾಜ ಸೇವಕಿ ಕೋಣಿಯಂಡ ಬೋಜಮ್ಮ ಕಕ್ಕಡ ಹಬ್ಬದ ಕುರಿತು ಉಪನ್ಯಾಸ ನೀಡಿದರು.

ಪಡಿತರ ಅಕ್ಕಿ ಸಾಗಾಣೆ ; ಓರ್ವನ ಬಂಧನ



ಮಡಿಕೇರಿ/ಗೋಣಿಕೊಪ್ಪ: ಪಡಿತರ ಅಕ್ಕಿಯನ್ನು ಅಕ್ರಮ ಸಾಗಣೆ ಮಾಡುತ್ತಿದ್ದ ಬಗ್ಗೆ ಆಹಾರ ಇಲಾಖಾಧಿಕಾರಿಗಳು ದಾಳಿ ನಡೆಸಿ ಅಕ್ಕಿಯನ್ನು ವಶಕ್ಕೆ ಪಡೆದ ಘಟನೆ ಪೊನ್ನಂಪೇಟೆಯಲ್ಲಿ ನಡೆದಿದೆ.

ಘಟನೆಗೆ ಸಂಬಂಧಿಸಿದಂತೆ ಚಾಲಕನನ್ನು ಬಂಧಿಸಿ 7 ಕ್ವಿಂಟಾಲ್ 79 ಕೆ.ಜಿ ಅಕ್ಕಿ, ಸಾಗಾಣಿಕೆಗೆ ಬಳಸಿದ್ದ ವಾಹನವನ್ನು ಆಹಾರ ಇಲಾಖಾಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಗೋಣಿಕೊಪ್ಪದ ಮುಸ್ತಫ ಮತ್ತು ಮನೋಜ್ ಎಂಬುವರ ಅಂಗಡಿಯಿಂದ ಸೊಸೈಟಿ ಅಕ್ಕಿಯನ್ನು ಸಂಗ್ರಹಿಸಿ ವಾಹನವೊಂದರಲ್ಲಿ ಹುಣಸೂರಿನ ಕಲ್ಲುಣಿಕೆಗೆ ಸಾಗಿಸುತ್ತಿರುವ ಕುರಿತು ಸಾರ್ವಜಕರಿಂದ ಬಂದ ಮಾಹಿತಿ ಮೇರೆಗೆ ಆಹಾರ ಇಲಾಖಾಧಿಕಾರಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಗೋಣಿಕೊಪ್ಪ–ಮೈಸೂರು ರಸ್ತೆಯ ಚೆನ್ನಂ, ಗೊಲ್ಲಿಯಲ್ಲಿ ವಾಹನವನ್ನು ಅಡ್ಡಗಟ್ಟಿ ಪರಿಶೀಲನೆ ನಡೆಸಿದಾಗ ಮೇಲ್ನೋಟಕ್ಕೆ ಪ್ಲಾಸ್ಟಿಕ್ ವಸ್ತುಗಳು ಹಾಗೂ ಬಾಳೆಗೊನೆಗಳನ್ನು ಇಟ್ಟು ಅದರ ಕೆಳಗೆ ಅಕ್ಕಿಚೀಲಗಳನ್ನು ಜೋಡಿಸಿರುವುದು ಕಂಡು ಬಂದಿತು.

7 ಕ್ವಿಂಟಾಲ್ ಅಕ್ಕಿ, ವಾಹನ ವಶ

ಚಾಲಕನನ್ನು ವಿಚಾರಣೆಗೊಳಪಡಿಸಿದಾಗ ಅಕ್ಕಿ ಸಾಗಾಟಕ್ಕೆ ಯಾವುದೇ ಪರವಾನಗಿ ಮತ್ತು ದಾಖಲಾತಿ ಇಲ್ಲದಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಝೈಲೋ ವಾಹನ(ಕೆ.ಎ.19–ಎಂ–9524) ಮತ್ತು 31 ಅಕ್ಕಿ ಚೀಲಗಳನ್ನು ಸ್ಥಳದಲ್ಲೇ ವಶಕ್ಕೆ ಪಡೆಯಲಾಯಿತು. ವಾಹನ ಚಾಲಕ ಹುಣಸೂರಿನ ಕಲ್ಲುಣಿಕೆ ನಿವಾಸಿ ವಿಠಲ ಎಂಬಾತನನ್ನು ಗೋಣಿಕೊಪ್ಪ ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಆಹಾರ ನಿರೀಕ್ಷಕ ಸಿ.ಎಂ.ನಿಶಾನ್, ಪೊನ್ನಂಪೇಟೆ ಗ್ರಾಪಂ ಸಹಾಯಕ ಸುನೀಲ್ ಮತ್ತಿತರರು ಪಾಲ್ಗೊಂಡಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ವಿಜಯಲತರಿಗೆ ಅಧ್ಯಾಪಕ ಭೂಷಣ ಪ್ರಶಸ್ತಿ ಪ್ರದಾನ



ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಡಾ. ವಿಜಯಲತ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮಡಿಕೇರಿ, ಆ.4–ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಗ್ರಂಥಪಾಲಕಿ ಡಾ. ಸಿ.ವಿಜಯಲತ ಅಧ್ಯಾಪಕ ಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಗ್ರಂಥಾಲಯದ ಡಿಜಿಟಲೀಕರಣ, ಇ–ಬುಕ್ ವ್ಯವಸ್ಥೆ, ಆನ್‌ಲೈನ್ ಕ್ಯಾಟ್ ಲಾಗ್, ಇ–ಲರ್ನಿಂಗ್ ಹಾಗೂ ವಿದ್ಯಾರ್ಥಿಗಳಿಗೆ ದೈನಂದಿನ ಬಳಕೆಗೆ ಸುಲಭವಾದ ವ್ಯವಸ್ಥೆಗಳನ್ನು ಹಾಗೂ ವಿದ್ಯಾರ್ಥಿಗಳಲ್ಲಿ ಓದಿನ ಮಹತ್ವವನ್ನು ಅರ್ಥ ಮಾಡಿಸಲು ಕಾರ್ಯಾಗಾರ ಹೀಗೆ ಶಿಕ್ಷಣಕ್ಕೆ ಬೇಕಾದ ಸಾಕಷ್ಟು ಸಂಪನ್ಮೂಲಗಳನ್ನು ವಿದ್ಯಾರ್ಥಿ ಓದುಗರಿಗೆ ಒದಗಿಸುವ ಕೆಲಸ ಮಾಡಿದ್ದಾರೆ.

ರಾಜ್ಯ ಮಹಾವಿದ್ಯಾಲಯ ಶಿಕ್ಷಕರ ಸಂಘದ ಮಂಗಳೂರು ವಿಭಾಗ ವತಿಯಿಂದ ನೀಡಲಾಗುವ ಪ್ರಶಸ್ತಿಯನ್ನು ಇತ್ತೀಚೆಗೆ ಮೂಡು ಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ನಡೆದ ಪ್ರೇರಣಾ ದಿವಸ್ ಕಾರ್ಯಕ್ರಮದಲ್ಲಿ ರಾಜ್ಯಪಾಲ ಗೆಹ್ಲೋಟ್ ಡಾ. ವಿಜಯಲತ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ಅಧಿಕ ರಕ್ತಸ್ರಾವದಿಂದ ತಾಯಿ–ಮಗು ಸಾವು : ಪ್ರತಿಭಟನೆ



ಹೆರಿಗೆಗೆಂದು ದಾಖಲಾಗಿದ್ದ ತಾಯಿ–ಮಗು ಮೃತಪಟ್ಟ ಹಿನ್ನೆಲೆಯಲ್ಲಿ ಕುಟುಂಬಸ್ಥರು ಆಸ್ಪತ್ರೆ ಎದುರು ರೋಧಿಸುತ್ತಿರುವುದು.

ಚಾಮರಾಜನಗರ, ಆ.4–ಹೆರಿಗೆಗೆಂದು ದಾಖಲಾಗಿದ್ದ ಗರ್ಭಿಣಿ ಮಹಿಳೆಯೊಬ್ಬರಿಗೆ ಹೆರಿಗೆ ಸಮಯದಲ್ಲಿ ಅಧಿಕ ರಕ್ತಸ್ರಾವವಾಗಿ ತಾಯಿ–ಮಗು ಮೃತಪಟ್ಟ ಘಟನೆ ನಗರದ ಸಿಮ್ಸ್ (ಜಿಲ್ಲಾ ಆಸ್ಪತ್ರೆ)ನಲ್ಲಿ ನಡೆದಿದೆ

ಬಸಪ್ಪನಪಾಳ್ಯ ಗ್ರಾಮದ ನಿವಾಸಿ ಭಾಗ್ಯಲಕ್ಷ್ಮೀ(30), ಮೃತಪಟ್ಟ ದುರ್ದೈವಿ. ಈಕೆ ಟಿ.ನರಸೀಪುರ ತಾಲೂಕಿನ ಚೌಹಳ್ಳಿ ಗ್ರಾಮದ ನಾಗರಾಜು ಎಂಬುವರನ್ನು ವಿವಾಹವಾಗಿದ್ದು, 8 ವರ್ಷದ ಮಗಳಿದ್ದಾಳೆ. ಭಾಗ್ಯಲಕ್ಷ್ಮೀ ಅವರನ್ನು 2ನೇ ಹೆರಿಗೆಗಾಗಿ ಶನಿವಾರ ರಾತ್ರಿ ನಗರದ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದರು ಎನ್ನಲಾಗಿದೆ.

ಕುಟುಂಬಸ್ಥರ ಪ್ರತಿಭಟನೆ : ತಾಯಿ ಮಗು ಸಾವನ್ನಪ್ಪಿರುವ ವಿಚಾರ ತಿಳಿದು ವೈದ್ಯರು ಹಾಗೂ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಮೃತಳ ಸಂಬಂಧಿಕರು, ಗ್ರಾಮಸ್ಥರು ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದರು. ಹೆರಿಗೆ ಮಾಡಿಸುವ ವೇಳೆ ಅತಿಯಾಗಿ ರಕ್ತಸ್ರಾವ ಆಯಿತು. ಇದರಿಂದ ತಾಯಿಯ ಆರೋಗ್ಯದಲ್ಲಿ ಏರುಪೇರಾಯಿತು. ಮಗು ಹೊಟ್ಟೆಯಲ್ಲೇ ಮೃತಪಟ್ಟಿದೆ ಎಂದು ಮೊದಲು ಹೇಳಿ ನಂತರ ಚಿಕಿತ್ಸೆ ಫಲಕಾರಿಯಾಗದೆ ತಾಯಿಯೂ ಮೃತ ಪಟ್ಟಿದ್ದಾರೆಂದು ತಿಳಿಸಿದ್ದಾರೆ. ಸಿಬ್ಬಂದಿಯ ನಿರ್ಲಕ್ಷ್ಯದಿಂದಲೇ ಈ ದುರ್ಘಟನೆ ಸಂಭವಿಸಿದೆ. ಇದಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> ಜಿಲ್ಲಾಸ್ಪತ್ರೆಯೂ ಮೆಡಿಕಲ್ ಕಾಲೇಜಿನ ಸುಪರ್ದಿಗೆ ಬರುತ್ತದೆ. ಹೀಗಾಗಿ ತಾಯಿ–ಮಗು ಸಾವನ್ನಪ್ಪಿರುವ ಘಟನೆ ಸಂಬಂಧ ಸಿಮ್ಸ್‌ನ ವೈದ್ಯಾಧಿಕಾರಿಗಳ ಬಳಿ ವರದಿ ಕೇಳಲಾಗಿದೆ. ವರದಿ ಬಂದ ನಂತರ ಪರಿಶೀಲಿಸಲಾಗುವುದು. ಬಳಿಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ರಾಜ್ಯ ಸಮಿತಿಯಿಂದ ತನಿಖೆ ನಡೆಸಿ, ಅಲ್ಲಿಂದಲೂ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳುತ್ತೇವೆ.
>
> –ಡಾ.ಚಿದಂಬರಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ.

ಪ್ರಯತ್ನ ಫಲಿಸಲಿಲ್ಲ : ಮೊದಲು ಮಗುವಿನ ಹೆರಿಗೆ ನಾರ್ಮಲ್ ಆಗಿತ್ತು. ಹೀಗಾಗಿ ಎರಡನೇ ಮಗುವಿನ ಹೆರಿಗೆಯೂ ನಾರ್ಮಲ್ ಆಗಿರಬೇಕಿತ್ತು. ಆದರೆ, ಹೆರಿಗೆಯ ವೇಳೆ ಮಗುವಿನ ತಲೆ ತಿರುಗದ ಕಾರಣ ಆಪರೇಷನ್‌ಗೆ ಕರೆದುಕೊಂಡು ಹೋಗಲಾಯಿತು. ಆದರೆ, ಈ ವೇಳೆ ಮಗು ಸಾವನ್ನಪ್ಪಿದೆ. ಮಗು ಹೊರ ತೆಗೆದರೂ ತಾಯಿಗೆ ರಕ್ತ ಸ್ರಾವ ಹೆಚ್ಚಾಗಿ, ಆಕೆಯನ್ನು ಉಳಿಸಿಕೊಳ್ಳಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಯಿತಾದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಪಟ್ಟಣ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ದೂರು ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಭವನಗಳ ಕಾಮಗಾರಿ ವಿಳಂಬಕ್ಕೆ ಅಧಿಕಾರಿಗಳಿಗೆ ಶಾಸಕರ ತರಾಟೆ



ಕೊಳ್ಳೇಗಾಲದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಮಂಜುನಾಥ್ ಮಾತನಾಡಿದರು.

ಕೊಳ್ಳೇಗಾಲ, ಆ.4– ಪಟ್ಟಣದಲ್ಲಿ ಎರಡು ದಶಕಗಳಿಂದ ಬಾಕಿ ಇರುವ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನ, ಗಡಿನಾಡ ಭವನ, ಸ್ತ್ರೀ ಶಕ್ತಿ ಭವನ ಸೇರಿದಂತೆ ಇತರೆ ಭವನಗಳನ್ನು ಪೂರ್ಣಗೊಳಿಸಲು ವಿಶೇಷ ಅನುದಾನದಲ್ಲಿ ಹಣ ನೀಡಿದ್ದರು ಸಹಾ ಕಾಮಗಾರಿ ಪೂರ್ಣಗೊಳಿಸದೆ ಇರುವ ಕ್ರಮಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅಸಮಾಧಾನ ಹೊರಹಾಕಿ ಕೆಆರ್‌ಡಿಎಲ್ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡ ಘಟನೆ ಕೆಡಿಪಿ ಸಭೆಯಲ್ಲಿ ನಡೆಯಿತು.

ಕೆಲಸ ಕೊಡಿ ಎಂದು ದುಂಬಾಲು ಬೀಳುತ್ತೀರಿ ಕೆಲಸ ಕೊಟ್ಟರೆ ವರ್ಷಗಳೆ ಕಳೆದರೂ ಕೆಲಸ ಮಾಡುವುದಿಲ್ಲ ಆದಷ್ಟು ಬೇಗ ಕಟ್ಟಡಗಳ ಬಾಕಿ ಕೆಲಸವನ್ನು ಪೂರ್ಣಗೊಳಿಸಿ, ಕೆಲಸ ತೆಗೆದುಕೊಳ್ಳುವಾಗ ಇರುವ ಉತ್ಸಾಹ, ಹುಮ್ಮಸ್ಸು, ಮುಗಿಸುವಲ್ಲಿಯೂ ಇರಬೇಕು ಎಂದು ಖಾರವಾಗಿ ಪ್ರತಿಕ್ರಿಯಿಸಿ ಅಂಬೇಡ್ಕರ್ ಭವನ ಕಾಮಗಾರಿ ಪ್ರಾರಂಭವಾಗಿ 20ವರುಷವಾಗಿದೆ. ನಾನು ಸಹ 19 ವರುಷ ರಾಜಕೀಯ ವನವಾಸ ಅನುಭವಿಸಿದಂತೆ ಈ ಅಂಬೇಡ್ಕರ್ ಭವನವೂ ವನವಾಸ ಅನುಭವಿಸಬಾರದು, ಕೂಡಲೆ ಕಾಮಗಾರಿ ಪೂರ್ಣಗೊಳಿಸಿ ಎಂದು ತಾಕೀತು ಮಾಡಿದರು.


ಅನುದಾನ ವಾಪಸ್‌ಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಿರಿಯ ಅಧಿಕಾರಿಗಳಿಗೆ ಶಿಫಾರಸ್ಸು ಮಾಡುವಂತೆ ಶಾಸಕರು ಸೂಚಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ 2024ರ ಲೆಕ್ಕ ಶೀರ್ಷಿಕೆಯಡಿ 27 ಲಕ್ಷ ಅನುದಾನ ಹಾಗೂ ಯಳಂದೂರಿಗೆ 14 ಲಕ್ಷ ಬಿಡುಗೆಯಾಗಿತ್ತು. ಇದನ್ನು ಪೀಠೋಪಕರಣ ಸೇರಿದಂತೆ ಇತರೆ ಸಾಮಗ್ರಿಗಳನ್ನು ಖರೀದಿಸಲು ಬಳಸಬೇಕಿತ್ತು. ಆದರೆ ಅನುದಾನ ಬಳಸದೆ ಇರುವುದರಿಂದ ವಾಪಸ್ ಹೋಗಿದೆ. ಒಟ್ಟು 42 ಲಕ್ಷ ಅನುದಾನ ವಾಪಸ್ ಹೋಗಿದ್ದು ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಕ್ರಮ ಶಿಸ್ತು ಕ್ರಮಕೈಗೊಳ್ಳಿ, ಓರ್ವ ಬೃಹಸ್ಪತಿ ಎಂಜಿನಿಯರ್ ಸರಿಯಾಗಿ ಕೆಲಸ ಮಾಡಲ್ಲ ಎಂದು ಎಂಜಿನಿಯರ್ ಮಂಜು ವಿರುದ್ದ ಅಸಮಾಧಾನ ಹೊರಹಾಕಿದರು. ಇಂತಹವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿ ಎಂದು ಹಾಜರಿದ್ದ ತಾಲೂಕು ಪಂಚಾಯ್ತಿ ಇಓ ಗುರುಶಾಂತಪ್ಪ ಬೆಳ್ಳುಂಡಗಿ ಅವರಿಗೆ ತಾಕೀತು ಮಾಡಿ ದರು

ಪಟ್ಟಣದ ಹೃದಯಭಾಗದಲ್ಲೇ 5ಎಕರೆ ಜಾಗವನ್ನು ಜಿಲ್ಲಾಸ್ಪತ್ರೆ ನಿರ್ಮಿಸುವ ಉದ್ದೇಶದಿಂದ ನೀಡಲು ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಒಪ್ಪಿಗೆ ಸೂಚಿಸಿದ್ದಾರೆ. ಈ ನಿಟ್ಟಿನಲ್ಲಿ ಇಲಾಖೆಗೆ ಸೇರಿದ 5 ಎಕರೆ ಭೂಮಿಯನ್ನು ಆರೋಗ್ಯ ಇಲಾಖೆಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದೆ. ಈ ಆಸ್ಪತ್ರೆ ನಿರ್ಮಾಣದಿಂದ ಬಡವರು, ರೈತಾಪಿ ವರ್ಗಕ್ಕೆ ಸಾಕಷ್ಟು ಪ್ರಯೋಜನವಾಗಲಿದೆ ಎಂದರು

ಜಲಜೀವನ್ ಮಿಷನ್ ಅಡಿ ತಾಲೂಕಿನ ಸೂರಾಪುರದ ಗ್ರಾಮಸ್ಥರು ಈಗಿರುವ ಟ್ಯಾಂಕ್ ಬೋರ್‌ವೆಲ್ ನೀರಿಗೆ ಇರಲಿ, ಕಾವೇರಿ ನೀರಿಗೆ ಬೇರೆ ಟ್ಯಾಂಕ್ ನಿರ್ಮಾಣ ಮಾಡಿ ಎಂದು ಪಟ್ಟು ಹಿಡಿದ ಕಾರಣ ಕಾಮಗಾರಿ ಸ್ಥಗಿತಗೊಂಡಿತ್ತು, ಅಧಿಕಾರಿಗಳು ಟ್ಯಾಂಕ್ ತುಂಬಿಸಿ ನೀರು ಬಿಡಲಾಗುತ್ತಿದೆ ಎಂದು ತಪ್ಪು ಮಾಹಿತಿ ನೀಡಿದ ವಿಚಾರ ಸಭೆಯನ್ನು ಗೊಂದಲಕ್ಕೆ ಎಡೆಮಾಡಿಕೊಟ್ಟಿತು. ಕಾಮಗಾರಿಯೇ ನಡೆಯದಿದ್ದರು ನೀರು ಬಿಟ್ಟಿದ್ದೇವೆ ಎಂದು ಹೇಳುವುದು ಎಷ್ಟು ಸರಿ ಎಂದು ಶಾಸಕ ಮಂಜುನಾಥ್ ಪ್ರಶ್ನಿಸಿದರು. ಈ ವಿಚಾರವನ್ನು ಶಾಸಕರ ಗಮನಕ್ಕೆ ತಂದಿದ್ದೆವು ಎಂದಾಗ ಕೃಷ್ಣಮೂರ್ತಿಯವರು ಎರಡು ಮೂರು ಬಾರಿ ಗ್ರಾಮಕ್ಕೆ ಭೇಟಿ ನೀಡಿದ್ದಾಗ ಈ ವಿಷಯ ಪ್ರಸ್ತಾಪವಾಗಲಿಲ್ಲ ಮತ್ತೆ ಭೇಟಿ ನೀಡಿ ಗ್ರಾಮಸ್ಥರ ಜತೆ ಮಾತ ನಾಡುವುದಾಗಿ ತಿಳಿಸಿದರು. ಶಾಸಕ ಮಂಜುನಾಥ್ ಮಾತನಾಡಿ, ಅಂಗನವಾಡಿಗಳು ಮಕ್ಕಳ ಮೊದಲ ಪಾಠಶಾಲೆ ಅವುಗಳ ಅಭಿವೃದ್ಧಿ, ಉತ್ತಮ ರೀತಿ ಸುಧಾರಣೆಗೆ ಅಧಿಕಾರಿಗಳು ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಬಸವರಾಜು, ಇ.ಓ ಗುರುಶಾಂತಪ್ಪ ಬೆಳ್ಳುಂಡಗಿ. ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ರಾಜೇಂದ್ರ ಮುಂತಾದವರಿದ್ದರು.

ಮಠಾಧಿಪತಿಯಾಗಿ ಬಂದಿದ್ದ ಅನ್ಯಕೋಮಿನ ವ್ಯಕ್ತಿಯನ್ನು ವಾಪಸ್ ಕಳಿಸಿದ ಗ್ರಾಮಸ್ಥರು



ಚೌಡಹಳ್ಳಿ ಮಠದಲ್ಲಿ ನೆಲೆಸಿದ್ದ ನಿಸಾರ್ ಅಹಮದ್

ಗುಂಡ್ಲುಪೇಟೆ, ಆ.4 (ಸೋಮ್.ಜಿ)– ಗ್ರಾಮದ ಮಠಕ್ಕೆ ಮಠಾಧಿಪತಿಯಾಗಿ ನಿಯೋಜನೆಗೊಂಡಿದ್ದವರ ಪೂರ್ವಾಪರ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಅವರನ್ನು ವಾಪಸ್ ಕಳುಹಿಸಿದ ಘಟನೆ ತಾಲೂಕಿನ ಚೌಡಹಳ್ಳಿ ಗ್ರಾಮದಲ್ಲಿ ನಡೆದಿದೆ.

ಕಳೆದ ವರ್ಷ ಗ್ರಾಮದಲ್ಲಿ ಆರಂಭವಾಗಿದ್ದ ಗುರುಮಲ್ಲೇಶ್ವರ ದಾಸೋಹ ಮಠದ ನೂತನ ಶಾಖೆಗೆ ಎರಡು ತಿಂಗಳ ಹಿಂದೆ ಬಸವಕಲ್ಯಾಣದಿಂದ ಬಂದು ನೆಲೆಸಿದ್ದ ನಿಜಲಿಂಗಸ್ವಾಮೀಜಿ (ಮೂಲ ಹೆಸರು ನಿಸಾರ್ ಅಹಮದ್ ಬಿನ್ ಮೊಹಬೂಬ್ ಸಾಬ್) ಗ್ರಾಮದಲ್ಲಿ ಪ್ರವಚನ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಗ್ರಾಮದ ಯುವಕನೊಬ್ಬನಿಗೆ ಈ ವ್ಯಕ್ತಿಗೆ ಸೇರಿದ ಮೊಬೈಲಿನಲ್ಲಿ ಸಿಕ್ಕಿದ ಆಧಾರ್ ಕಾರ್ಡ್, ಮಾರ್ಕ್ಸ್ ಕಾರ್ಡ್, ಫೋಟೋ ಮೊದಲಾದ ದಾಖಲೆಗಳಲ್ಲಿ ನಿಸಾರ್ ಅಹಮದ್ ಎಂಬ ಮೂಲ ಹೆಸರು ಇರುವ ವಿಷಯ ತಿಳಿದು ವಿಚಲಿತರಾದ ಗ್ರಾಮಸ್ಥರು ಕೂಡಲೇ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌಡ ಸಮ್ಮುಖದಲ್ಲಿ ಮಠದಲ್ಲಿ ಸಭೆ ನಡೆಸಿದರು.

ಗ್ರಾಮಸ್ಥರ ವಿಚಾರಣೆ ಸಂದರ್ಭದಲ್ಲಿ ತಾನು 2021 ರಲ್ಲಿ ಬಸವ ತತ್ವದಿಂದ ಪ್ರಭಾವಿತನಾಗಿ ಬಸವ ಕಲ್ಯಾಣದ ಬಸವಪ್ರಭು ಅವರಿಂದ ಜಂಗಮ ದೀಕ್ಷೆ ಪಡೆದು ವೀರಶೈವ ಮತಕ್ಕೆ ಮತಾಂತರಗೊಂಡಿದ್ದು, ಬಸವಧರ್ಮ ಪೀಠಾಧ್ಯಕ್ಷೆ ಡಾ. ಮಾತೆ ಗಂಗಾದೇವಿಯವರಿಂದ ನಿಜಲಿಂಗಸ್ವಾಮೀಜಿ ಎಂದು ನಾಮ ಕರಣ ಮಾಡಿದ್ದ ಬಗ್ಗೆ ಅಂದಿನ ದಿನಪತ್ರಿಕೆಗಳಲ್ಲಿ ಆಗಿದ್ದ ವರದಿಯ ಪ್ರತಿಯನ್ನು ತೋರಿಸಿದರು.

ಆದರೆ ಗ್ರಾಮಕ್ಕೆ ಬಂದ ಮೇಲೆ ಯಾರಿಗೂ ಒಮ್ಮೆಯೂ ತಮ್ಮ ಪೂರ್ವಾಪರ ಬಹಿರಂಗಪಡಿಸದೆ ಇರುವುದಕ್ಕೆ ಗ್ರಾಮಸ್ಥರು ತೀವ್ರ ಅಸಮಾಧಾನ ವ್ಯಕ್ತಪಡಿಸಿ ನೀವು ಮತಾಂತರವಾದ ನಂತರವೂ ದಾಖಲೆಗಳಲ್ಲಿ ಏಕೆ ಹೆಸರು ಬದಲಾಯಿಸಿಲ್ಲ. ಆದ್ದರಿಂದ ಕೂಡಲೇ ಮಠ ಬಿಟ್ಟು ಹೋಗುವಂತೆ ಎಚ್ಚರಿಕೆ ನೀಡಿದರು. ಇದರಿಂದ ವಿಚಲಿತರಾದ ನಿಜಲಿಂಗ ಸ್ವಾಮೀಜಿ ಉರುಫ್ ನಿಸಾರ್ ತಮಗೆ ಸೇರಿದ ವಸ್ತುಗಳೊಂದಿಗೆ ಮಠ ಬಿಟ್ಟು ಬೈಕಿನಲ್ಲಿ ತೆರಳಿದರು.

ನಾಗರಿಕರಿಗೆ ಬಂದೂಕು ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಗಳಲ್ಲಿ ಕೊಳ್ಳೇಗಾಲ ಮತ್ತು ಚಾನಗರಗಳಲ್ಲಿ ನಾಗರಿಕ ಬಂದೂಕು ತರಬೇತಿ ಶಿಬಿರ ಹಮ್ಮಿಕೊಂಡಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತರಬೇತಿ ಪಡೆಯಲಿಚ್ಛಿಸುವ ಆಸಕ್ತ ನಾಗರಿಕರು ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗಳಿಂದ ನಿಗದಿತ ಅರ್ಜಿ ಪಡೆದು ಭರ್ತಿ ಮಾಡಿ ಆ.15 ರೊಳಗೆ ಆಯಾ ಠಾಣೆಗಳಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಅಧಿಕಾರಿಗಳಾದ ಡಿ.ಎ.ಆರ್‌ನ ಡಿ.ಎಸ್.ಪಿ. ಜಿ. ಸೋಮಣ್ಣ ಮೊ.ಸಂ.9480804606, ಡಿ.ಎ.ಆರ್‌ನ ಆರ್.ಪಿ.ಐ, ಟಿ.ಬಿ. ಸತೀಶ್ ಮೊ.ಸಂ 91104 27685 ಹಾಗೂ ಜಿಲ್ಲಾ ಶಸ್ತ್ರಾಕಾರರಾದ ಜಿ.ರಮೇಶ ಮೊ.ಸಂ.9845973819 ರನ್ನು ಸಂಪರ್ಕಿಸುವಂತೆ ಜಿಲ್ಲಾ ಪೊಲೀಸ್ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪೂರ್ಣ ಕಾಮಗಾರಿ: ಪುರಸಭಾಧ್ಯಕ್ಷರ ತಂಡ ಪರಿಶೀಲನೆ



ಪುರಸಭೆ ಆಡಳಿತ ಮಂಡಳಿಯವರು ದೇಬೂರಿನ ಪಂಪ್ ಹೌಸ್‌ಗೆ ಭೇಟಿ ನೀಡಿ ಮೋಟಾರ್ ಅಳವಡಿಕೆ ಕಾಮಗಾರಿ ಪರಿಶೀಲಿಸಿದರು.

ಗುಂಡ್ಲುಪೇಟೆ ಆ.4 (ಸೋಮ್.ಜಿ)– ಕಬಿನಿಯಿಂದ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ನಂಜನಗೂಡು ತಾಲೂಕಿನ ದೇಬೂರಿನ ಪಂಪ್ ಹೌಸ್‌ನಲ್ಲಿ ಮೋಟಾರು ಅಳವಡಿಸುವ ಕಾಮಗಾರಿಯನ್ನು ಸೋಮವಾರ ಪುರಸಭೆ ಅಧ್ಯಕ್ಷ ಮಧುಸೂಧನ್ ಹಾಗೂ ಮುಖ್ಯಾಧಿಕಾರಿ ಶರವಣ, ಇಂಜಿನಿಯರ್ ಮಂಜುನಾಥ್ ತಂಡ ಪರಿಶೀಲಿಸಿತು

ರಾಜ್ಯ ಕುಡಿಯುವ ನೀರು ಮತ್ತು ಒಳಚರಂಡಿ ಮಂಡಲಿಯು ಪಂಪ್‌ಹೌಸ್‌ನಲ್ಲಿ 250 ಹೆಚ್‌ಪಿ ಸಾಮರ್ಥ್ಯದ ಮೋಟಾರು ಅಳವಡಿಸುವ ಕಾಮಗಾರಿ ಕೈಗೊಂಡಿದ್ದರಿಂದ ಪುರಸಭೆಯು 20 ದಿನಗಳಿಂದ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಸ್ಥಗಿತಗೊಳಿಸಿ ಕೊಳವೆ ಬಾವಿಗಳಿಂದ ಬಡಾ ವಣೆಗಳಿಗೆ ನೀರು ಪೂರೈಸುತ್ತಿದೆ. ಕೆಲಸ ಪೂರ್ಣವಾಗದ ಹಿನ್ನೆಲೆಯಲ್ಲಿ ಪುರಸಭೆ ಅಧ್ಯಕ್ಷ ಜಿ.ಎಸ್.ಮಧುಸೂಧನ್ ಹಾಗೂ ಅಧಿಕಾರಿಗಳು ಪಂಪ್ ಹೌಸ್‌ಗೆ ಭೇಟಿ ನೀಡಿ ಪರಿಶೀಲಿಸಿದರು.

ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿದ್ದು ಪಂಪ್ ಹೌಸ್ ಒಳಗೆ ನುಗ್ಗಿದ್ದರಿಂದ ಕಾಮಗಾರಿ ವಿಳಂಬವಾಗಿದೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದರು.

ಕೆಲವೇ ದಿನಗಳಲ್ಲಿ ವರಮಹಾಲಕ್ಷ್ಮಿ ಹಬ್ಬವಿರುವುದರಿಂದ ಕೂಡಲೇ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮಧುಸೂಧನ್ ಸೂಚಿಸಿದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಶರವಣ, ಇಂಜಿನಿಯರ್ ಮಂಜುನಾಥ್ ಇದ್ದರು.

ವಿಶ್ವಮಾನ್ಯ ನಾಲ್ವಡಿಯವರ ಅಪಮಾನಿಸಿ ಜನರಿಂದ ಛೀಮಾರಿ ಹಾಕಿಸಿಕೊಳ್ಳಬೇಡಿ

●ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹೇಳಿಕೆಗೆ ಬಿಜೆಪಿ ತೀಕ್ಷ್ಣ ಪ್ರತಿಕ್ರಿಯೆ ●ಕೃಷ್ಣರಾಜಸಾಗರ ಜಲಾಶಯ ನಿರ್ಮಾಣಕ್ಕೆ ಮೈಸೂರು ರಾಜ ಮನೆತನದ ತ್ಯಾಗ-ಪರಿಶ್ರಮದ ಇತಿಹಾಸ ನಾಡಿನ ಜನರಿಗೆ ಮನವರಿಕೆ ಆಗಿದೆ

ಬೆಂಗಳೂರು, ಆ. 4(ಕೆಎಂಶಿ)- ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂಬ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿಕೆಗೆ ಬಿಜೆಪಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಮಂಡಲದ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ, ಸಚಿವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರುಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಿನಿಂದಲೂ ಮೈಸೂರು ರಾಜ ಮನೆತನದ ಬಗ್ಗೆ ಅಸಡ್ಡೆಯಿಂದ ನಡೆದುಕೊಂಡಿದ್ದಾರೆ. ಇತ್ತೀಚೆಗಷ್ಟೇ ಮುಖ್ಯಮಂತ್ರಿ ಪುತ್ರ ಹಾಗೂ ವಿಧಾನಪರಿಷತ್ ಸದಸ್ಯ ಯತೀಂದ್ರ ತಮ್ಮ ತಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತಲೂ ಮಿಗಿಲು ಎಂದಿದ್ದರು. ಇದೀಗ ಮುಖ್ಯಮಂತ್ರಿ ಹಿಂಬಾಲಕ, ಸಚಿವ ಮಹದೇವಪ್ಪ ಕನ್ನಂಬಾಡಿ ಕಟ್ಟೆಗೆ ಮೊದಲು ಅಡಿಪಾಯ ಹಾಕಿದ್ದು ಟಿಪ್ಪುಸುಲ್ತಾನ್ ಎನ್ನುವ ಮೂಲಕ ಕೃಷ್ಣರಾಜಸಾಗರ ನಿರ್ಮಾಣದ ಹಿಂದಿನ ತ್ಯಾಗ-ಪರಿ ಶ್ರಮದ ಇತಿಹಾಸ ಹಾಗೂ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಕೊಡುಗೆ ಅಪಮಾನಿಸಿದ್ದಾರೆ.

ಕೃಷ್ಣರಾಜಸಾಗರ ಜಲಾಶಯಕ್ಕೆ ರೋಚಕ ಇತಿಹಾಸವಿದೆ, ತ್ಯಾಗ ಮೆರೆದ ಹೆಗ್ಗಳಿಕೆ ಇದೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಕನಸು ಹಾಗೂ ಪರಿಶ್ರಮದ ಫಲವೇ ಕನ್ನಂಬಾಡಿ ಕಟ್ಟೆ ನಿರ್ಮಾಣ ಎಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ.

ದಾಖಲೆಗಳು ಜೀವಂತವಾಗಿವೆ: 1908ರಲ್ಲಿ ರೂಪಿಸಲಾದ ಯೋಜನೆಯನ್ನು ಮತ್ತಷ್ಟು ಪರಿವರ್ತಿಸಿ ಹಲವು ಅಡ್ಡಿ ಆತಂಕ, ತೊಂದರೆ, ಅವಮಾನಗಳ ನಡುವೆ ಬ್ರಿಟಿಷ್ ಆಡಳಿತದಿಂದ ಅನುಮತಿ ಪಡೆದು ನಿರ್ಮಿಸಿದ ಪ್ರತಿ ಹೆಜ್ಜೆಗೂ ಪುಟ-ಪುಟಗಳ ದಾಖಲೆಗಳು ಇಂದಿಗೂ ಜೀವಂತವಾಗಿವೆ.

1911ರಿಂದ ಅಧಿಕೃತವಾಗಿ ಆರಂಭವಾದ ಯೋಜನೆ 1932ರಲ್ಲಿ ಪೂರ್ಣಗೊಂಡಿದ್ದಕ್ಕೆ ಎಷ್ಟು ವೆಚ್ಚವಾಯಿತು, ಯೋಜನೆ ಪೂರ್ಣಗೊಳ್ಳಲು ಆರ್ಥಿಕ ಸಂಕಷ್ಟ ಎದುರಾದಾಗ ನಾಲ್ವಡಿ ಅರಸರ ಮಾತೆ ವಾಣಿವಿಲಾಸ ಸನ್ನಿಧಾನ (ಕೆಂಪರಾಜಮ್ಮಣ್ಣಿ) ಹಾಗೂ ಅವರ ಪತ್ನಿ ಕೃಷ್ಣ ವಿಲಾಸ ಸನ್ನಿಧಾನ ಅವರುಗಳು ಲಕ್ಷಾಂತರ ಜನರಿಗೆ ಅನ್ನ ನೀಡುವ ಯೋಜನೆ ಪೂರ್ಣಗೊಳ್ಳುವುದಕ್ಕಿಂತ ಖಜಾನೆಯಲ್ಲಿರುವ ವಜ್ರ, ವೈಢೂರ್ಯಗಳು ಹೆಚ್ಚಿನದಲ್ಲ ಎಂಬ ತ್ಯಾಗ ಮನೋಭಾವ ಪ್ರದರ್ಶಿಸಿ ತಮ್ಮ ಸ್ವಂತ ಒಡವೆಗಳನ್ನು ಮಾರಾಟ ಮಾಡಿ ಕನ್ನಂಬಾಡಿ ಕಟ್ಟೆ ಕಟ್ಟಿಸಿದ್ದಕ್ಕೆ ಐತಿಹಾಸಿಕ ತ್ಯಾಗ ಮೆರೆದ, ಆನಂದ ಭಾಷ್ಪ ತರಿಸುವ ಕಥೆ ಮೈಸೂರು ಸಂಸ್ಥಾನದ ಪ್ರತಿ ಮನೆ, ಮನೆಯಲ್ಲೂ ಇಂದಿಗೂ ನಿತ್ಯ ನೆನಪಿನ ಸ್ಮರಣೆಯಾಗಿ ಉಳಿದಿದೆ.



ಛಲವಾದಿ ನಾರಾಯಣ, ಡಾ.ಮಹದೇವಪ್ಪ, ವಿಜಯೇಂದ್ರ

ಅಣೆಕಟ್ಟೆ ನಿರ್ಮಾಣದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ವಿಶೇಷ ಕಾಳಜಿ ಹಾಗೂ ಪರಿಶ್ರಮ, ನೂರಾರು ಮಹನೀಯರ ಬೆವರಿನ ಕಥೆಯಿದೆ.

ಚಾರಿತ್ರಿಕ ಅಣೆಕಟ್ಟೆ ನಿರ್ಮಾಣ ಸೇರಿದಂತೆ ನೂರಾರು ಜನಕಲ್ಯಾಣ ಕಾರ್ಯಕ್ರಮಗಳಿಗಾಗಿ ಮಹಾತ್ಮ ಗಾಂಧಿ ಅವರಿಂದ 'ರಾಜರ್ಷಿ' ಎಂಬುದಾಗಿ ಕರೆಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರನ್ನು ಕನ್ನಂಬಾಡಿ ಕಟ್ಟೆಗೆ ಇಡಲಾಗಿದೆ.

ಟಿಪ್ಪುಸುಲ್ತಾನ್ ಕೆಆರ್‌ಎಸ್ ಅಣೆಕಟ್ಟು ಕಟ್ಟಲು ಪ್ರಯತ್ನಿಸಿದ್ದ ಎಂಬುದಕ್ಕೆ ಯಾವುದಾದರೂ ದಾಖಲೆ ಇದ್ದರೆ ಸಚಿವ ಮಹದೇವಪ್ಪ ಬಿಡುಗಡೆ ಮಾಡಲಿ, ಕನ್ನಂಬಾಡಿ ಕಟ್ಟೆ ನಿರ್ಮಾಣ ಹಂತದ ಪ್ರತಿ ಹೆಜ್ಜೆಯ ಇತಿಹಾಸದ ದಾಖಲೆಗಳನ್ನು ನಾವು ಬಿಡುಗಡೆ ಮಾಡುತ್ತೇವೆ.

ಇತಿಹಾಸದ ಪುಟ ಗಲೀಜು ಮಾಡಬೇಡಿ: ಟಿಪ್ಪು ನಿಧನವಾಗಿದ್ದು 1799ರಲ್ಲಿ ಕನ್ನಂಬಾಡಿ ನಿರ್ಮಾಣ ಪ್ರಾರಂಭಿಸಿದ್ದು 1908ರಲ್ಲಿ, ಅಂದರೆ ಸಚಿವರ ನಾಲಿಗೆ ಹೇಗೆ ಹೊರಳುತ್ತದೆ ಎಂಬುದನ್ನು ತೋರಿಸುತ್ತದೆ. ಇತಿಹಾಸದ ಪುಟಗಳನ್ನು ಗಲೀಜು ಮಾಡಬೇಡಿ, ಇಡೀ ದೇಶದಲ್ಲೇ ಅತ್ಯಂತ ಶ್ರೇಷ್ಠ ಆಡಳಿತ ನೀಡಿ ವಿಶ್ವಮಾನ್ಯರಾದ ಮೈಸೂರು ರಾಜವಂಶಸ್ಥರು, ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಚರಿತ್ರೆಯನ್ನು ಸಾಧ್ಯವಾದರೆ ಗೌರವಿಸಿ, ಅಪಮಾನಿಸಿ ಜನರಿಂದ ಛೀಮಾರಿ ಹಾಕಿಸಿಕೊಳ್ಳಬೇಡಿ.

ಟಿಪ್ಪು ಸಂತತಿ ವೈಭವೀಕರಿಸಿ ಮುಸ್ಲಿಂ ಮತಗಳಿಕೆ ಗಟ್ಟಿಗೊಳಿಸಿಕೊಳ್ಳುವುದು ನಿಮ್ಮ ಕಾರ್ಯಸೂಚಿ ಎಂಬುದು ನಾಡಿನ ಜನತೆಗೆ ತಿಳಿದಿದೆ. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಧನೆಗಳು ಅನನ್ಯವಾದವು, ಅಪಾರವಾದವು, ಜ್ಞಾನ, ನೀತಿ ಮತ್ತು ಜನಸೇವೆ ಮೂಲಕ ಕನ್ನಡ ನಾಡಿಗೆ ಕೊಡುಗೆಗಳನ್ನು ನೀಡಿದ್ದಾರೆ.

ಕೆಆರ್.ಎಸ್ ಅಣೆಕಟ್ಟೆಗೆ ಅಡಿಗಲ್ಲು ಹಾಕಿದ್ದೇ ಟಿಪ್ಪುಸುಲ್ತಾನ್ ಎಂಬ ಮಹದೇವಪ್ಪ ಹೇಳಿಕೆ ಧ್ವಂಸಾತ್ಮಕ, ಇತಿಹಾಸ ವಿರೋಧಿ ಹಾಗೂ ಜನಮಾನಸದಲ್ಲಿ ತಾರತಮ್ಯ ಹುಟ್ಟುಹಾಕುವ ಉದ್ದೇಶವಾಗಿದೆ.

ಇತಿಹಾಸ ಮರೆಮಾಚುವ, ಅಳಿಸಿ ಹಾಕುವ ಹುನ್ನಾರದ ಅಪಾಯಕಾರಿ ಪ್ರವೃತ್ತಿಯ ಸಂಕೇತವಾಗಿದೆ ಎಂದಿದ್ದಾರೆ.

ಈಗ ಕೇಳಿಬರುತ್ತಿರುವ ಹೇಳಿಕೆಗಳು ಒಂದು ನಿರ್ದಿಷ್ಟ ಸಮುದಾಯದ ಓಲೈಕೆ ರಾಜಕಾರಣದ ಭಾಗವಲ್ಲದೆ ಇನ್ನೇನೂ ಅಲ್ಲ. ಇವು ನಾಡಿನ ಚರಿತ್ರೆಯ ಶುದ್ಧತೆಗೆ ಧಕ್ಕೆ ತರುವಂತಿವೆ. ಇತಿಹಾಸವನ್ನು ರಾಜಕೀಯ ಲಾಭಕ್ಕಾಗಿ ತಿರುಚಿ ಸುಳ್ಳು ಮಾಹಿತಿ ಮೂಲಕ ಮರೆಮಾಚಲು ಯತ್ನಿಸುವುದು ಖಂಡನೀಯ.

ಇಂತಹ ಹೇಳಿಕೆಗಳು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಗೌರವಕ್ಕೆ ಧಕ್ಕೆ ತರುವುದಷ್ಟೇ ಅಲ್ಲ, ಇಡೀ ಕನ್ನಡ ನಾಡಿನ ಸಾಂಸ್ಕೃತಿಕ ಶ್ರೇಷ್ಠತೆಗೆ ಅವಹೇಳನಕಾರಿ ನಿಲುವು ವ್ಯಕ್ತಪಡಿಸುವುದಾಗಿದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಕೃಷ್ಣರಾಜಸಾಗರ ಜಲಾಶಯಕ್ಕೆ ಟಿಪ್ಪುಸುಲ್ತಾನ್ ಹೆಸರಿಡುವ ಹುನ್ನಾರ ನಡೆಯುತ್ತಿರುವ ಸಂಶಯವಿದೆ. ಕನ್ನಂಬಾಡಿ ಕಟ್ಟೆಗೆ ಕೃಷ್ಣರಾಜ ಸಾಗರ ಎಂಬ ಹೆಸರು ಇಡುವ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಲಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಆಧುನಿಕ ಮೈಸೂರಿನ ಮಹಾಶಿಲ್ಪಿ, ಮೈಸೂರು ಸೀಮೆಯ ಜನರಿಗೆ ಇಂದಿಗೂ ಪ್ರಾತಃಸ್ಮರಣೀಯರು, ಹಿಂದುಳಿದ ಜನಾಂಗ, ದಲಿತರು, ಬಡವರ ಬಗ್ಗೆ ಅಪಾರ ಕಾಳಜಿ ಇದ್ದಂತಹ ರೈತರ ಪಾಲಿನ ಅನ್ನದಾತ ಎಂದು ಗುಣಗಾನ ಮಾಡಿದ್ದಾರೆ.

ಮೇರು ವ್ಯಕ್ತಿತ್ವದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮಸಿ ಬಳಿಯುವ, ಕ್ಷುಲ್ಲಕ ರಾಜಕೀಯಕ್ಕೆ ಮೈಸೂರು ರಾಜಮನೆತನದ ಹೆಸರನ್ನು ಪದೇ ಪದೇ ಎಳೆದು ತಂದು ಅಪಮಾನ ಮಾಡಿದರೆ ನಾಡಿನ ಜನತೆ ಸಹಿಸುವುದಿಲ್ಲ, ಸುಮ್ಮನೆ ಕೂರುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಒಕ್ಕಲಿಗರ ಬಗ್ಗೆ ಅವಾಚ್ಯ ಪದ ಬಳಸಿ ನಿಂದನೆ

ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಮ್ ವಿರುದ್ಧ ಎಫ್‌ಐಆರ್

●ಸಾಮಾಜಿಕ ಕಾರ್ಯಕರ್ತ ಎನ್.ಗಂಗರಾಜು ದೂರು ಆಧರಿಸಿ ಕೇಸ್ ●ಗಡಿಪಾರಿಗೆ ಒಕ್ಕಲಿಗರ ಸಂಘ ಆಗ್ರಹ





ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ಜಿ.ವಿ.ಸೀತಾರಾಮ್ ವಿರುದ್ಧ ನಗರ ಪೊಲೀಸ್ ಆಯುಕ್ತರ ಕಚೇರಿಗೆ ದೂರು ಸಲ್ಲಿಸುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಸರಸ್ವತಿಪುರಂ ಠಾಣೆಯಲ್ಲಿ ಜಿ.ವಿ.ಸೀತಾರಾಮ್ ವಿರುದ್ಧ ದಾಖಲಾದ ಎಫ್‌ಐಆರ್ ಪ್ರತಿಯೊಂದಿಗೆ ಸಾಮಾಜಿಕ ಕಾರ್ಯಕರ್ತ ಎನ್.ಗಂಗರಾಜ್(ಮಧ್ಯ), ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಚೇತನ್‌ಗೌಡ ಹಾಗೂ ಮುಖಂಡ ಅನುರೂಪ್ ಅವರನ್ನು ಕಾಣಬಹುದು.

ಮೈಸೂರು, ಆ.4- ಒಕ್ಕಲಿಗರನ್ನು ಅವಾಚ್ಯವಾಗಿ ನಿಂದಿಸಿದ್ದಾರೆನ್ನಲಾದ ಮೈಸೂರಿನ ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಮ್ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ ನಂತರ ಸಾಮಾಜಿಕ ಕಾರ್ಯಕರ್ತ ಎನ್.ಗಂಗರಾಜು ಸರಸ್ವತಿಪುರಂ ಠಾಣೆಗೆ ನೀಡಿದ ದೂರಿನನ್ವಯ ಜಿ.ವಿ.ಸೀತಾರಾಮ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಕಲಂ 353(2)ರ ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ಕಲಂ ಅನ್ವಯ ಧರ್ಮ, ಜನಾಂಗ, ಜನ್ಮಸ್ಥಳ, ವಾಸಸ್ಥಳ, ಭಾಷೆ, ಜಾತಿ ಅಥವಾ ಸಮುದಾಯ ಅಥವಾ ಯಾವುದೇ ಇತರ ಕಾರಣಗಳಿಂದ ಧಾರ್ಮಿಕ, ಜನಾಂಗೀಯ, ಭಾಷೆ, ಪ್ರಾದೇಶಿಕ ಗುಂಪುಗಳು, ಜಾತಿಗಳು ಅಥವಾ ಸಮುದಾಯಗಳ ನಡುವೆ ದ್ವೇಷ ಅಥವಾ ಹಗೆತನದ ಭಾವನೆಗಳನ್ನು ಸೃಷ್ಟಿಸುವ ಅಥವಾ ಪ್ರಚಾರ ಮಾಡುವ ಉದ್ದೇಶದಿಂದ ಹೇಳಿಕೆ ನೀಡುವುದು ಶಿಕ್ಷಾರ್ಹವಾಗಿದ್ದು, ಆರೋಪ ಸಾಬೀತಾದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ದಂಡ ಇಲ್ಲವೇ ಈ ಎರಡನ್ನೂ ವಿಧಿಸಬಹುದಾಗಿದೆ.

ದೂರಿನ ವಿವರ: ಸೀತಾರಾಮ್ ಕಳೆದ ಜುಲೈ 21ರಂದು ಬೆಳಗ್ಗೆ 11.45ರ ಸಮಯದಲ್ಲಿ ಡಿಪಿಕೆ ಪರಮೇಶ್ ಅವರಿಗೆ ಕರೆ ಮಾಡಿ, ಒಕ್ಕಲಿಗರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇಡೀ ಸಮುದಾಯವನ್ನು ಅವಮಾನಿಸಿರುವ ಆಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ. ನಮ್ಮ ಸಮುದಾಯ ಹಾಗೂ ಸಮುದಾಯದ ಜನರ ಬಗ್ಗೆ ಕೀಳಾಗಿ ಮಾತನಾಡಿ ಜಾತಿ ನಿಂದನೆ ಮಾಡಿದ್ದಾನೆ. ಈ ಮೂಲಕ ಸಮುದಾಯದವರ ವ್ಯಕ್ತಿತ್ವಕ್ಕೆ ಧಕ್ಕೆಯುಂಟು ಮಾಡಿದ್ದಲ್ಲದೆ ಜಾತಿ ಜಾತಿಗಳ ಮಧ್ಯೆ ವಿಷಬೀಜ ಬಿತ್ತಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಿದ್ದಾನೆ. ಸಮಾಜದಲ್ಲಿ ಜಾತಿ ಸಂಘರ್ಷ ಸೃಷ್ಟಿಸುವಂತೆ ಮಾತನಾಡಿರುವ ಸೀತಾರಾಮ್ ವಿರುದ್ಧ ಗೂಂಡಾ ಕಾಯ್ದೆಯಡಿ ಬಂಧಿಸಿ, ರಾಜ್ಯದಿಂದ ಗಡಿಪಾರು ಮಾಡಬೇಕು ಎಂದು ಎನ್.ಗಂಗರಾಜು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆಗ್ರಹಿಸಿದ್ದಾರೆ.

ಒಕ್ಕಲಿಗರ ಸಂಘ ಆಕ್ರೋಶ: ಜಿ.ವಿ. ಸೀತಾರಾಂ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಲಾಗಿದೆ. ಸುದ್ದಿವಾಹಿನಿಯೊಂದರ ಸಾಮಾಜಿಕ ಜಾಲತಾಣದ ಪೇಜ್‌ನಲ್ಲಿ ಜಿ.ವಿ.ಸೀತಾರಾಂ ಒಕ್ಕಲಿಗರ ಬಗ್ಗೆ ದೂರವಾಣಿ ಮೂಲಕ ಅವಹೇಳನಕಾರಿ ಮಾತಾಡಿರುವ ಆಡಿಯೋ ವೈರಲ್ ಆಗಿದ್ದು, ಆತ ಅವಾಚ್ಯ ಶಬ್ದಗಳಿಂದ ಜಾತಿ ನಿಂದಿಸಿರುವುದು ಇಡೀ ಒಕ್ಕಲಿಗ ಸಮುದಾಯಕ್ಕೆ ನೋವುಂಟು ಮಾಡಿದೆ. ತಮ್ಮ ಅಕ್ರಮವನ್ನು ಮುಚ್ಚಿಕೊಳ್ಳಲು ಜಾತಿ ಜಾತಿ ನಡುವೆ ವೈರತ್ವ ಉಂಟು ಮಾಡುತ್ತಿರುವ ಸೀತಾರಾಂ ವಿರುದ್ಧ ಕಾನೂನು ಕ್ರಮ ಜರುಗಿಸಿ, ಗಡಿಪಾರು ಮಾಡಬೇಕು ಎಂದು ಸಂಘವು ಆಗ್ರಹಿಸಿದೆ.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರಶಾಂತ್ ಗೌಡ, ಶಿವಣ್ಣ, ಪ್ರೇಮಾ ಶಂಕರೇಗೌಡ, ಒಕ್ಕಲಿಗರ ಸಂಘದ ನಿರ್ದೇಶಕರಾದ ಗಿರೀಶ್‌ಗೌಡ, ಬೋರೆಗೌಡ, ಚೇತನ್ ಗೌಡ, ಕೃಷ್ಣೇಗೌಡ, ಎಂ.ಜೆ.ಕಿರಣ್‌ಗೌಡ, ಅರ್ಜುನ್‌ಗೌಡ, ಮಹೇಶ್, ಯೋಗಾನಂದ ಮತ್ತಿತರರಿದ್ದರು.

ಕಾಡಂಚಿನ ಗ್ರಾಮಗಳ ರೈತರಿಗೆ ನೋಟಿಸ್

ಕಂದಾಯ-ಅರಣ್ಯ ಇಲಾಖೆ ಜಂಟಿ ಸರ್ವೆಗೆ ಶಾಸಕ ಜಿ.ಡಿ. ಹರೀಶ್‌ಗೌಡರ ಆಗ್ರಹ

●ರೈತರ ಸಮಸ್ಯೆ ಶೀಘ್ರ ಪರಿಹಾರಕ್ಕೆ ಆಗ್ರಹ ●ವನ್ಯಜೀವಿ-ಮಾನವ ಸಂಘರ್ಷ ತಡೆಗೆ ಸೂಕ್ತ ಕ್ರಮಕ್ಕೂ ಮನವಿ

ವೀರನಹೊಸಳ್ಳಿ,ಆ.4(ಎಂಟಿವೈ)- ಹುಣಸೂರು ತಾಲೂಕು ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಉಳುಮೆ ಮಾಡುತ್ತಿರುವ ರೈತರಿಗೆ ಅರಣ್ಯ ಇಲಾಖೆ ನೋಟಿಸ್ ನೀಡಿ ಒಕ್ಕಲೆಬ್ಬಿಸುವ ತಂತ್ರ ನಡೆಸುತ್ತಿದ್ದು, ಕೂಡಲೇ ಕಂದಾಯ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ರೈತರು ಎದುರಿಸುತ್ತಿರುವ ಸಮಸ್ಯೆ ಬಗೆಹರಿಸುವಂತೆ ಶಾಸಕ ಜಿ.ಡಿ. ಹರೀಶ್‌ಗೌಡ ಮನವಿ ಮಾಡಿದ್ದಾರೆ.

ಹುಣಸೂರಿನ ವೀರನಹೊಸಳ್ಳಿ ಬಳಿ ಗಜಪಯಣದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾಡಹಬ್ಬ ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳ ಇತಿಹಾಸವಿದ್ದು, ದಸರಾ ಮಹೋತ್ಸವ ಅಂಬಾರಿ ಉತ್ಸವವಾಗಿ ಮಾರ್ಪಟ್ಟಿದೆ. ದಸರಾ ಮಹೋತ್ಸವ ಮೊದಲ ಕಾರ್ಯಕ್ರಮ ನಮ್ಮೂರಿನಿಂದ (ಹುಣಸೂರು) ಆರಂಭಗೊಳ್ಳುವುದಕ್ಕೆ ಹುಣಸೂರಿನವರೆಲ್ಲರೂ ಹೆಮ್ಮೆ ಮತ್ತು ಗೌರವಪಡುವ ವಿಷಯವಾಗಿದೆ ಎಂದರು.

ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕಿನ ಹಲವು ಗ್ರಾಮಗಳು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಗಡಿ ಭಾಗದ ವ್ಯಾಪ್ತಿಯಲ್ಲಿವೆ. ಈ ಭಾಗದಲ್ಲಿ ಮಾನವ-ವನ್ಯಜೀವಿ ಸಂಘರ್ಷದಂತಹ ಪ್ರಕರಣ ನಡೆಯುತ್ತಲೇ ಇವೆ. ಹುಲಿ ದಾಳಿಯಂತಹ ಜೀವಹಾನಿ, ರೈತರು ಬೆಳೆದ ಬೆಳೆಗಳನ್ನು ವನ್ಯಜೀವಿಗಳು ತಿಂದು ನಾಶ ಮಾಡುವ ಪ್ರಕರಣಗಳು ನಡೆಯುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕಾಡಂಚಿನ ಗ್ರಾಮಗಳಲ್ಲಿ ಬಾಕಿ ಉಳಿದಿರುವ ಸ್ಥಳಕ್ಕೆ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯಕ್ರಮಕ್ಕೆ ಅನುಮೋದನೆ ನೀಡಬೇಕು. ಅಲ್ಲದೆ, ಬ್ಯಾರಿಕೇಡ್‌ನಿಂದ ಪ್ರಾಣಿಗಳು ನುಸುಳಿ ಬರದಂತೆ ತಡೆಗಟ್ಟಲು ಮೆಷ್ ಅಳವಡಿಸುವ ಕಾರ್ಯ ಪೂರ್ಣಗೊಳಿಸಬೇಕು. ಬೆಳೆಹಾನಿಗೂ ಪರಿಹಾರ ಧನ ಹೆಚ್ಚಿಸುವ ಅಗತ್ಯವಿದೆ ಎಂದರು.

ಜಂಟಿ ಸರ್ವೆಗೆ ಕ್ರಮ ಕೈಗೊಳ್ಳಿ: ಕಾಡಂಚಿನ ರೈತರಿಗೆ ಅರಣ್ಯ ಇಲಾಖೆ ಪದೇ ಪದೆ ನೋಟೀಸ್ ನೀಡಿ ಉಳುಮೆ ಮಾಡುತ್ತಿರುವ ಭೂಮಿ ಖಾಲಿ ಮಾಡಲು ಒತ್ತಾಯಿಸುತ್ತಿದೆ. ಇದರಿಂದ ರೈತರೆ ಮಾನಸಿಕ ನೆಮ್ಮದಿ ಹಾಳಾಗುತ್ತಿದೆ. ಅರಣ್ಯ ಮತ್ತು ಕಂದಾಯ ಇಲಾಖೆಗಳ ಜಂಟಿ ಸರ್ವೇ ನಡೆಸಿ ಈ ಸಮಸ್ಯೆ ಪರಿಹರಿಸಬೇಕು. ತಾಲೂಕು ಮಟ್ಟದಲ್ಲಿ ಆಯೋಜನೆಗೊಳ್ಳುವ ಅಕ್ರಮ ಸಕ್ರಮ ಸಮಿತಿ ಸಭೆಯಲ್ಲೂ ಇದೇ ಸಮಸ್ಯೆ ಮುಂದುವರೆದಿದ್ದು, ಸಾಗುವಳಿ ನೀಡಲು ಆಗುತ್ತಿಲ್ಲ. ಹಾಗಾಗಿ ಶೀಘ್ರ ಜಂಟಿ ಸರ್ವೇ ಕಾರ್ಯ ನಡೆಸಿ, ಕಂದಾಯ ಭೂಮಿ ಯಾವುದು, ಅರಣ್ಯ ಭೂಮಿ ಯಾವುದು ಎಂದು ಸ್ಪಷ್ಟ ನಿಲುವು ತಾಳಬೇಕು ಎಂದರು.




ಪುನರ್ವಸತಿ ಕೇಂದ್ರಗಳಲ್ಲಿ ವಸತಿ ಸೌಲಭ್ಯ ಕಲ್ಪಿಸಿ: ಕಾಡಿನಿಂದ ಹೊರ ಬಂದು ಪುನರ್ವಸತಿ ಕೇಂದ್ರದಲ್ಲಿರುವ ಗಿರಿಜನರಿಗೆ 20-25 ವರ್ಷಗಳ ಹಿಂದೆ ಒದಗಿಸಿದ್ದ ಮನೆಗಳು ಶಿಥಿಲಾವಸ್ಥೆ ತಲುಪಿವೆ. ಆ ಕುಟುಂಬದ ವ್ಯಾಪ್ತಿ ವಿಸ್ತಾರಗೊಂಡಿದ್ದು, ರಾಜ್ಯ ಸರ್ಕಾರ ಪುನರ್ವಸತಿ ಕೇಂದ್ರದಲ್ಲಿ ನೂತನವಾಗಿ ವಸತಿ ಸೌಲಭ್ಯ ಕಲ್ಪಿಸಬೇಕು. ಅಲ್ಲದೇ ಪುನರ್ವಸತಿ ಕೇಂದ್ರಗಳಲ್ಲಿ ಮೂಲಸೌಕರ್ಯಗಳ ಕೊರತೆ ಎದ್ದುಕಾಣುತ್ತಿದ್ದು, ಅವುಗಳನ್ನು ಬಗೆಹರಿಸಬೇಕು ಎಂದು ಕೋರಿದರು.

ಅರಸು ಹುಟ್ಟೂರಿನಲ್ಲಿ: ದಿವಂಗತ ದೇವರಾಜ ಅರಸು ಕರ್ಮಭೂಮಿ ಹುಣಸೂರಿನಲ್ಲಿ ನನಗೆ ಜನತೆ ಆಶೀರ್ವಾದ ನೀಡಿದ್ದಾರೆ. ಅರಸು ಹೆಸರಿನಲ್ಲಿ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೊಳಿಸಿವೆ ಆದರೆ ಅದರ ಫಲಾನುಭವಿಗಳ ಸಂಖ್ಯೆ ಕಡಿಮೆಯಿದ್ದು, ಅದರ ಪುನರ್‌ವಿಮರ್ಶೆ ಅಗತ್ಯವಿದೆ ಅರಸು ಕ್ಷೇತ್ರವಾದ ಹುಣಸೂರಿನ ಅಭಿವೃದ್ಧಿಗಾಗಿ ಸರ್ಕಾರ ಹೆಚ್ಚಿನ ಗಮನಹರಿಸಬೇಕೆಂದು ಕೋರಿದರು.

ಇದಕ್ಕೂ ಮುನ್ನ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಮಾತನಾಡಿ, ಅರಣ್ಯದಂಚಿನ ಪ್ರದೇಶದಲ್ಲಿ ಉಳುಮೆ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸಲು ಅರಣ್ಯ ಇಲಾಖೆ ನೋಟಿಸ್ ನೀಡುತ್ತಿದೆ ಎಂದು ಹಲವು ರೈತರು ನನ್ನ ಗಮನಕ್ಕೆ ತಂದಿದ್ದಾರೆ. ಅರಣ್ಯ ಸಚಿವರು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿದು, ರೈತರಿಗೆ ನೆರವಾಗಬೇಕು ಎಂದು ಮನವಿ ಮಾಡಿದರು.

ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ಅಂಗವಾಗಿ ವಿವಿಧ ಸೇವಾ ಕಾರ್ಯ



ಮೈಸೂರಿನ ಕನಕದಾಸನಗರ-ದಟ್ಟಗಳ್ಳಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆಸಲಾದ ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಬಡಾವಣೆಯ ಹಿರಿಯರನ್ನು ಅಭಿನಂದಿಸಲಾಯಿತು.

ಮೈಸೂರು, ಆ.4- ಮೈಸೂರಿನ ವಾರ್ಡ್ ನಂಬರ್ 46ರ ಕನಕದಾಸ ನಗರ ದಟ್ಟಗಳ್ಳಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ಅಂಗವಾಗಿ ವಿವಿಧ ಸೇವಾಕಾರ್ಯ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ರಾಕೇಶ್ ಸಹೋದರ, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ವಿಶೇಷಚೇತನರಾದ ರಾಜೇಶ್ ಮತ್ತು ಬಸವರಾಜ್ ಅವರಿಗೆ ವ್ಹೀಲ್‌ಚೇರ್ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಸಹೋದರ ರಾಕೇಶ್ ಕಷ್ಟವೆಂದು ಬರುತ್ತಿದ್ದ ಸಾಕಷ್ಟು ಮಂದಿಗೆ ಕೈಲಾದ ಸಹಾಯ ಮಾಡುತ್ತಿದ್ದರು. ಶಿಕ್ಷಣ, ಹಾಸ್ಟೆಲ್ ಸೌಲಭ್ಯ, ಉದ್ಯೋಗ ಸೇರಿದಂತೆ ನಾನಾ ರೂಪದಲ್ಲಿ ಬಡವರಿಗೆ ನೆರವಾಗುತ್ತಿದ್ದರು. ಹಾಗಾಗಿ ಸೇವಾ ಕಾರ್ಯದ ಮೂಲಕ ಅವರ ಪುಣ್ಯಸ್ಮರಣೆ ಮಾಡುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು.

ಕೆಪಿಸಿಸಿ ಒಬಿಸಿ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ ಮಾತನಾಡಿ, ಯುವ ನಾಯಕರಾಗಿದ್ದ ರಾಕೇಶ್ ಸಿದ್ದರಾಮಯ್ಯ ಅವರು ನಮ್ಮಂತಹವರಿಗೆ ಮಾರ್ಗದರ್ಶಕರಾಗಿದ್ದರು. ಅವರು ನಿರ್ಧಾರ ತೆಗೆದುಕೊಳ್ಳುತ್ತಿದ್ದ ರೀತಿ, ಮಾತುಗಾರಿಕೆ, ಜನಸಂಪರ್ಕ, ಆತ್ಮೀಯತೆಯನ್ನು ಗಮನಿಸಿದವರೆಲ್ಲಾ ತಂದೆಯಂತೆ ದೊಡ್ಡ ನಾಯಕರಾಗುತ್ತಾರೆ ಎನ್ನುತ್ತಿದ್ದರು. ತಂದೆಯ ಮಾರ್ಗದರ್ಶನ ಹಾಗೂ ಸಹಕಾರದಿಂದ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದ ಅವರನ್ನು ಬಹುಬೇಗ ಕಳೆದುಕೊಂಡಿದ್ದು ದುರ್ದೈವ ಎಂದು ಹೇಳಿದರು.

ಈ ವೇಳೆ ದಟ್ಟಗಳ್ಳಿಯ ಹಿರಿಯ ನಾಗರಿಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ಬಿ.ಜೆ.ವಿಜಯ್‌ಕುಮಾರ್, ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಪಾಲಿಕೆ ಉಪ ಆಯುಕ್ತ ಸೋಮಶೇಖರ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಂ, ಕುರಿ ಮತ್ತು ಉಣ್ಣೆ ಅಧ್ಯಕ್ಷ ರಮೇಶ್, ಕೆಪಿಸಿಸಿ ಕಾರ್ಯದರ್ಶಿ ಶಿವ ನಾಗಪ್ಪ, ಕಾಂಗ್ರೆಸ್ ಮುಖಂಡರಾದ ಕೃಷ್ಣಕುಮಾರ್ ಸಾಗರ್, ಸಿದ್ದರಾಮಣ್ಣ, ಗುರುಸ್ವಾಮಿ, ರಾಣಿ ಪ್ರಭ, ಸುಶೀಲ ನಂಜಪ್ಪ, ಸುಶೀಲಾ, ರವಿ, ನಂದನ್, ಯೋಗೇಶ್ ಉಪ್ಪಾರ್, ಸುಶೀಲ ರಾವ್, ಸರೋಜಮ್ಮ ಶಶಿಕಲಾ, ವಿಕ್ಕಿ ವಾಸು, ಲಕ್ಷ್ಮಣರಾವ್, ಪ್ರಸನ್ನ ಅಪ್ಪಿ, ವಿಜಯಕುಮಾರ್, ನಾಗ, ಕಾರ್ತಿಕ್, ಪ್ರದೀಪ್, ಸಂತೋಷ, ರವೀಶ್, ಮಧು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆ. 6, 7ರಂದು ವಿದ್ಯುತ್ ವ್ಯತ್ಯಯ

ಮೈಸೂರು,ಆ.4- ಆಗಸ್ಟ್ 6, 7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಹುಲ್ಲಹಳ್ಳಿ ಟೌನ್ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ಹುಲ್ಲಹಳ್ಳಿ ಟೌನ್ ಫೀಡರ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ ಚುನಾವಣೆ; ನವೆಂಬರ್ 3ಕ್ಕೆ ವಿಚಾರಣೆ ಮುಂದೂಡಿದ ಸುಪ್ರೀಂ

ನವದೆಹಲಿ: ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನವೆಂಬರ್ 3ಕ್ಕೆ ಮುಂದೂಡಿದೆ. ನ್ಯಾ. ಸೂರ್ಯಕಾಂತ್ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೊಹ್ಟಗಿ, ಸರ್ಕಾರ ನೆಪಗಳನ್ನೊಡ್ಡಿ ಚುನಾವಣೆಯನ್ನು ಮುಂದೂಡುತ್ತಿದೆ. ಉದ್ದೇಶಪೂರ್ವಕವಾಗಿ ಇದನ್ನು ಮಾಡಲಾಗುತ್ತಿದೆ. ಎಲ್ಲವನ್ನು ಬದಿಗಿರಿಸಿ ಶೀಘ್ರ ಚುನಾವಣೆ ನಡೆಸಲು ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು. ಸರ್ಕಾರ ಪರ ವಾದ ಮಂಡಿಸಿದ ವಕೀಲರು, ನವೆಂಬರ್ ವೇಳೆಗೆ ಪುನರ್ ವಿಂಗಡನೆ, ಮೀಸಲಾತಿ ಪ್ರಕ್ರಿಯೆ ಮುಗಿಸಲಾಗುವುದು. ಇದಕ್ಕೆ ಸಮಯ ಬೇಕು. ಈ ಬಗ್ಗೆ ಈಗಾಗಲೇ ಅಫಿಡವಿಟ್ ಸಲ್ಲಿಸಿದೆ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಪೀಠ, ನವೆಂಬರ್ 1ರ ವೇಳೆ ಸರ್ಕಾರ ಏನು ಮಾಡಲಿದೆ ಎಂದು ವಿಸ್ತೃತ ಮಾಹಿತಿಯನ್ನು ನೀಡಿ ಎಂದು ಸೂಚಿಸಿ ವಿಚಾರಣೆ ಮುಂದೂಡಿತು.


ಕೆಆರ್‌ಎಸ್ ಅಣೆಕಟ್ಟೆಗೆ ಟಿಪ್ಪು ಹೆಸರಿಡಲು ಹುನ್ನಾರ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪ

ಮಂಡ್ಯ, ಆ.4(ಮೋಹನ್ ರಾಜ್)- ಕೃಷ್ಣರಾಜಸಾಗರ ಜಲಾಶಯಕ್ಕೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಟಿಪ್ಪುಸುಲ್ತಾನ್ ಸಾಗರ ಎಂದು ಹೆಸರಿಡಲು ಹುನ್ನಾರ ನಡೆಸಿದ್ದು, ಇದಕ್ಕೆ ಪೀಠಿಕೆಯಾಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಡ್ಯಾಂ ನಿರ್ಮಾಣಕ್ಕೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದ್ದರು ಎಂದು ಹೇಳಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಟಿಪ್ಪುಸುಲ್ತಾನ್ ಎಂದರೆ ಎಲ್ಲಿಲ್ಲದ ಪ್ರೀತಿ. ನಾಡದ್ರೋಹಿ, ಮತಾಂಧ, ಹಿಂದೂಗಳನ್ನು ಕೊಂದಿರುವ ಟಿಪ್ಪು ಸುಲ್ತಾನ್ ಡ್ಯಾಂ ನಿರ್ಮಾಣ ಮಾಡಲು ಮುಂದಾಗಿದ್ದ ಎಂಬ ಬಾಲಿಶ ಹೇಳಿಕೆ ನೀಡುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಟಿಪ್ಪು ಸುಲ್ತಾನ್ ಕನ್ನಡಿಗನೇ ಅಲ್ಲ. ಪರ್ಷಿಯನ್ ಭಾಷೆಯವನು. ಟಿಪ್ಪು 1799ರಲ್ಲಿ ಮೃತಪಟ್ಟಿದ್ದು, 1911ರಲ್ಲಿ ಕೆಆರ್‌ಎಸ್ ಡ್ಯಾಂ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗಿದೆ. 112 ವರ್ಷ ಕಳೆದ ಮೇಲೆ ಶಂಕುಸ್ಥಾಪನೆ ಕಲ್ಲು ಎಲ್ಲಿ ಇಟ್ಟಿದ್ದರು. ಅಲ್ಲಿಗೆ ಹೇಗೆ ಬಂತು ಎಂದು ಪ್ರಶ್ನಿಸಿದರು.



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮದ್ರಾಸ್ ಸರ್ಕಾರದ ಒಪ್ಪಿಗೆ ಪಡೆದು ಡ್ಯಾಂ ನಿರ್ಮಾಣ ಮಾಡಲು ಮುಂದಾದರು. ಮದ್ರಾಸ್ ಸರ್ಕಾರ ಕೇವಲ 80 ಅಡಿಗೆ ಮಾತ್ರ ಅನುಮತಿ ನೀಡಿತ್ತು. ಆದರೆ ಮಹಾರಾಜರು ಸ್ವಂತ ವಿವೇಚನೆ ಬಳಸಿ 124 ಅಡಿ ಎತ್ತರದ ಡ್ಯಾಂ ನಿರ್ಮಾಣ ಮಾಡಿದರು. 2.35 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಕವಾಗಿ ನಿರ್ಮಾಣ ಮಾಡಲು ಹೊರಟಾಗ ಹಣಕಾಸು ಸಮಸ್ಯೆಯಿಂದ ಅರಮನೆಯಲ್ಲಿದ್ದ ತಮ್ಮ ಕುಟುಂಬದವರ ಒಡವೆಗಳನ್ನು ಬಾಂಬೆಯಲ್ಲಿ ಮಾರಾಟ ಮಾಡಿ ಡ್ಯಾಂ ಕಟ್ಟಿದ್ದು, ಎಲ್ಲರಿಗೂ ಗೊತ್ತಿರುವ ಇತಿಹಾಸ ಎಂದು ತಿಳಿಸಿದರು.

1799ರಲ್ಲೇ ಡ್ಯಾಂ ನಿರ್ಮಾಣ ಮಾಡಲು ಮುಂದಾಗಿದ್ದರೆ ಆ ಡ್ಯಾಂಗೆ ಕೃಷ್ಣರಾಜ ಸಾಗರ ಎಂದು ಹೆಸರಿಡುತ್ತಿರಲಿಲ್ಲ. ಮಿರ್ಜಾ ಇಸ್ಮಾಯಿಲ್ ಸಾಗರ ಎಂದು ಹೆಸರಿಟ್ಟಿದ್ದರೂ ಆಶ್ಚರ್ಯವಿರಲಿಲ್ಲ. ಅಭಿವೃದ್ಧಿಯ ದಾರಿದೀಪವಾಗಿರುವ ಹಳೇ ಮೈಸೂರು ಭಾಗಕ್ಕೆ ಕಾರ್ಖಾನೆ ಗಳು, ನೀರಾವರಿ, ವಿವಿಗಳು, ಸಮಾಜ ಸುಧಾರಣೆಯಂಥ ಕೆಲಸಗಳನ್ನು ತಂದ ಒಡೆಯರ್ ಅವರನ್ನು ಪದೇ ಪದೆ ಅಪಮಾನ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಉತ್ತರ ಕರ್ನಾಟಕದವರು ಮೈಸೂರು ಒಡೆಯರ್ ಅವರಂತಹ ಮಹಾರಾಜರು ನಮ್ಮಲ್ಲಿರಲಿಲ್ಲ ಎಂದು ಅಳಲು ತೋಡಿಕೊಳ್ಳುತ್ತಾರೆ. ಉತ್ತರ ಕರ್ನಾಟಕವನ್ನು ಆಳಿದ ಹೈದರಾಬಾದ್ ನಿಜಾಮರು ಯಾವ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಆದರೆ ಒಡೆಯರ್ ಅವರು ನೀರಾವರಿ, ಕೈಗಾರಿಕೆ, ರೈತರ ಜೀವನ ರೂಪಿಸುವಂಥ ಕಾರ್ಯಗಳನ್ನು ಮಾಡಿ ಮಹಾತ್ಮ ಗಾಂಧೀಜಿಯವರಿಂದ 'ರಾಜರ್ಷಿ' ಎಂಬ ಬಿರುದು ಪಡೆದ ಒಡೆಯರ್ ಅವರನ್ನು ಈ ಸರ್ಕಾರ ಅಪಮಾನ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯವನ್ನು ಸುಭಿಕ್ಷವಾಗಿ ಕಟ್ಟಿದ ಒಡೆಯರ್ ಎಲ್ಲಿ, ಮತಾಂಧ, ಕೊಡವರ ಮಾರಣಹೋಮ ಮಾಡಿದ ಜೊತೆಗೆ ಮೇಲುಕೋಟೆಯಲ್ಲಿ ಸಾವಿರಾರು ಹಿಂದೂಗಳ ಹತ್ಯೆ, ದೇವಾಲಯಗಳ ಕೆಡವಿದ ಟಿಪ್ಪು ಎಲ್ಲಿ ಎಂದು ಪ್ರಶ್ನಿಸಿದ ಅವರು, ಸಚಿವ ಹೆಚ್.ಸಿ.ಮಹದೇವಪ್ಪನವರೇ ಈಗ ಡ್ಯಾಂಗೆ ಟಿಪ್ಪು ಹೆಸರಿಡಲು ಮುಂದಾಗಿದ್ದೀರಾ. ಮುಂದೆ ಬೆಂಗಳೂರಿಗೆ ಯಾವಾಗ ಬರುತ್ತೀರಾ. ಅಲ್ಲಿಯೂ ನಾಡಪ್ರಭು ಕೆಂಪೇಗೌಡರ ಹೆಸರು ಅಳಿಸಿ ಟಿಪ್ಪು ಹೆಸರು ನಾಮಕರಣ ಮಾಡಿಬಿಡಿ ಎಂದು ಕಿಡಿಕಾರಿದರು.

ನಿಮ್ಮ ರಾಜಕೀಯ ಲಾಭಕೊಸ್ಕರ ಎಷ್ಟೋ ವರ್ಷಗಳ ಹಿಂದೆ ವಿಧಿವಶರಾಗಿರುವ ಒಡೆಯರ್ ಅವರನ್ನು ಪದೇ ಪದೇ ಅಪಮಾನಿಸುವುದು ಏಕೆ? ಈಗ ಪ್ರಸ್ತುತ ಒಡೆಯರ್ ವಂಶಸ್ಥರನ್ನು ದೆವ್ವದಂತೆ ಕಾಡುತ್ತಿದ್ದಾರೆ. ಒಡೆಯರ್ ಅವರು ಕೆಆರ್‌ಎಸ್ ಕಟ್ಟಿ, ವಿವಿ ಸ್ಥಾಪಿಸಿದ್ದಾರೆ. ಆದರೆ ಈ ಸರ್ಕಾರ 9 ವಿವಿಗಳ ಮುಚ್ಚಲು ಹುನ್ನಾರ ನಡೆಸಿದೆ. ಟಿಪ್ಪು ಖಡ್ಗ ಖರೀದಿ ಮಾಡಿದ್ದ ವಿಜಯಮಲ್ಯ ದೇಶ ಬಿಟ್ಟು ಹೋದ. ಟಿಪ್ಪು ಪರ ನಿಂತವರೆಲ್ಲ ನಾಶವಾಗಿದ್ದಾರೆ. ಕಾಂಗ್ರೆಸ್ ಪಕ್ಷವೂ ಕೂಡ ಸರ್ವನಾಶವಾಗಲಿದೆ ಎಂದು ಹೇಳಿದರು.

ಕಾಂಗ್ರೆಸ್ಸಿಗರಿಗೆ ಟಿಪ್ಪು ಮೇಲೆ ಅಷ್ಟೊಂದು ಒಲವಿದ್ದರೆ ಅವರ ಮಕ್ಕಳಿಗೆ ಟಿಪ್ಪುವಿನ ಹೆಸರಿಡಲಿ. ನಾಲ್ವಡಿಯವರು ಡ್ಯಾಂ ಕಟ್ಟಲು ತೆರಿಗೆ ಸಂಗ್ರಹಿಸಿರಲಿಲ್ಲ. ಆದರೆ ಸರ್ಕಾರ ಗ್ಯಾರಂಟಿಗೋಸ್ಕರ ಜನರಿಂದ ದುಪ್ಪಟ್ಟು ತೆರಿಗೆ ವಸೂಲಿ ಮಾಡುತ್ತಿದೆ. 14 ನಿವೇಶನ ನುಂಗಿರುವ ಸಿದ್ದರಾಮಯ್ಯ ಅವರನ್ನು ಅವರ ಪುತ್ರ ಒಡೆಯರ್‌ಗೆ ಹೋಲಿಸುತ್ತಾರೆ. ಬೇಕಿದ್ದರೆ ಕಾಂಗ್ರೆಸ್‌ನ ನೆಹರು, ಇಂದಿರಾ ಗಾಂಧಿ, ರಾಹುಲ್ ಗಾಂಧಿ ಅವರಿಗಿಂತ ಸಿದ್ದರಾಮಯ್ಯನವರೇ ದೊಡ್ಡವರು ಎಂದು ಕಾಂಗ್ರೆಸ್ಸಿಗರು ಹೇಳಲಿ. ಅದಕ್ಕೆ ನಮ್ಮ ಬೆಂಬಲವಿದೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್‌ನವರಿಗೆ ಗೌರವ ಉಳಿಯಬೇಕಾದರೆ ಕೂಡಲೇ ಹೇಳಿಕೆ ವಾಪಸ್ ಪಡೆದು, ಒಡೆಯರ್ ಕುಟುಂಬದವರ ಕ್ಷಮೆ ಕೇಳಬೇಕು. ಇದೇ ರೀತಿ ಬಾಲಿಶ ಹೇಳಿಕೆ ನೀಡುತ್ತಿದ್ದರೆ ಜನರೇ ಪಾಠ ಕಲಿಸುತ್ತಾರೆ. ಟಿಪ್ಪು ಜಯಂತಿ ಮಾಡಲು ಹೊರಟು ಜನರ ಸಾವಿಗೆ ಕಾರಣರಾದವರು ನೀವು, ಇದಲ್ಲದೆ, ಕೆಆರ್‌ಎಸ್‌ನಲ್ಲಿ ಟಿಪ್ಪು ಬಗೆಗಿನ ಶಿಲಾನ್ಯಾಸದ ಬಗ್ಗೆ ಪರಾಮರ್ಶೆಯಾಗಬೇಕು. ಮಹದೇವಪ್ಪ ಹೇಳಿಕೆ ಬಗ್ಗೆ ಜಿಲ್ಲೆಯ ಕಾಂಗ್ರೆಸ್ ಶಾಸಕರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ಮಿತ್ರ

ಹೈನುಗಾರಿಕೆ ಸಮಸ್ಯೆ ಬಗ್ಗೆ ತಜ್ಞರಿಂದ ರೈತರಿಗೆ ಅರಿವು

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಮಾಹಿತಿ

ತಿ.ನರಸೀಪುರ, ಆ.4– ಜಿಲ್ಲೆಯಲ್ಲಿ ಹೆಚ್ಚು ಹೈನುಗಾರರಿರುವ ಗ್ರಾಮದಲ್ಲಿ ಪಶು ಇಲಾಖೆ ತಜ್ಞರಿಂದ ತಾಂತ್ರಿಕ ಸಮಾಲೋಚನೆ ನಡೆಸಿ ಹೈನುಗಾರಿಕೆ ಸಮಸ್ಯೆ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ಕೇತುಪುರ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಸೋಮವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದರು.

ಇದೇ ವೇಳೆ ಹೈನುಗಾರರೊಬ್ಬರು ಹಾಲಿನ ಗುಣಮಟ್ಟ ಹೆಚ್ಚಳಕ್ಕೆ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಿಳಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡುವಂತೆ ಮಾಡಿದ ಮನವಿಗೆ ಸ್ಪಂದಿಸಿದ ಚೆಲುವರಾಜು ಮುಂದಿನ ತಿಂಗಳಿಂದ ಅತೀ ಹೆಚ್ಚು ಹೈನುಗಾರರಿರುವ ಗ್ರಾಮ ಅಥವಾ ತಾಲೂಕಿನಲ್ಲಿ ಪಶು ಇಲಾಖೆ ತಜ್ಞರ ಸಮ್ಮುಖದಲ್ಲಿ ರೈತರ ಸಭೆ ನಡೆಸಿ ತಾಂತ್ರಿಕ ಸಮಾಲೋಚನೆ ಮಾಡಲಾಗುತ್ತಿದ್ದು, ಇದರ ಸದುಪಯೋಗ ಪಡೆಯುವ ಮೂಲಕ ಹಾಲಿನ ಉತ್ಪಾದನೆ ಹೆಚ್ಚಿಸಿಕೊಂಡು ಆರ್ಥಿಕಾಭಿವೃದ್ಧಿ ಹೊಂದುವಂತೆ ಸಲಹೆ ನೀಡಿದರು.

ಸಹಕಾರ ಸಂಘಗಳು ಗ್ರಾಮೀಣ ಜನರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇವುಗಳನ್ನು ಉಳಿಸಿ ಗ್ರಾಮೀಣಾಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು. ಸಹಕಾರ ತತ್ವದ ಉದ್ದೇಶಗಳನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ಸಹಕಾರ ಸಂಘದಲ್ಲಿ ಯಾರೂ ಯಾವುದೇ ವೈಯಕ್ತಿಕ ಲಾಭ ಪಡೆಯಲು ಪ್ರಯತ್ನಿಸಬಾರದು. ಸೇವಾ ಭಾವನೆಯಿಂದ ಕೆಲಸ ಮಾಡುವುದರಿಂದ ಪ್ರತಿಫಲ ನೇರವಾಗಿ ರೈತರಿಗೆ ತಲುಪುತ್ತದೆ. ಆದ್ದರಿಂದ ಸಹಕಾರ ಸಂಘಗಳಲ್ಲಿ ರಾಜಕೀಯ ಮಾಡದೆ ಅವುಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದರು.



ಮಹಾಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ರೈತರಿಗೆ ರಬ್ಬರ್ ಮ್ಯಾಟ್ ವಿತರಿಸಿದರು.

ಹೈನುಗಾರರ ಬೇಡಿಕೆ ಹಿನ್ನೆಲೆಯಲ್ಲಿ ಮೈಮುಲ್‌ನಿಂದ ಶೇ.50ರಷ್ಟು ರಿಯಾಯಿತಿ ದರದಲ್ಲಿ 21 ಸಾವಿರ ರೈತರಿಗೆ ಏಕಕಾಲದಲ್ಲಿ ರಬ್ಬರ್ ಮ್ಯಾಟ್ ವಿತರಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಚಾಪ್ ಕಟರ್ ಸಹ ನೀಡಲಾಗುತ್ತದೆ. ಜೊತೆಗೆ ಒಕ್ಕೂಟದ ವತಿಯಿಂದ ರೈತರಿಗೆ 1 ಲಕ್ಷ ರೂ.ವರೆಗೆ ಜೀವ ವಿಮೆ ಉಚಿತವಾಗಿ ಮಾಡಿಕೊಡಲಾಗುತ್ತಿದೆ. ರಾಸುಗಳಿಗೆ ಶೇ.75ರ ರಿಯಾಯಿತಿಯಲ್ಲಿ ಇನ್ಸೂರೆನ್ಸ್ ಮಾಡಿಕೊಡಲಾಗುತ್ತಿದ್ದು, ಈವರೆಗೂ ರಾಸುಗಳಿಗೆ ವಿಮೆ ಮಾಡಿಸದ ರೈತರು ಕಡ್ಡಾಯವಾಗಿ ವಿಮೆ ಮಾಡಿಸುವ ಮೂಲಕ ಮುಂದೆ ಬರಬಹುದಾದ ನಷ್ಟದಿಂದ ರಕ್ಷಣೆ ಪಡೆದುಕೊಳ್ಳಬೇಕು ಎಂದರು.

ಹೊರ ರಾಜ್ಯಕ್ಕೂ ವ್ಯಾಪಿಸಿದ ನಂದಿನಿ ಉತ್ಪನ್ನಗಳು: ನಂದಿನಿ ಹಾಲು ಮತ್ತು ಉತ್ಪನ್ನಗಳು ಇಂದು ಕೇವಲ ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಹೊರ ರಾಜ್ಯಗಳಲ್ಲೂ ತನ್ನ ಮಾರುಕಟ್ಟೆ ವಿಸ್ತರಿಸಿಕೊಂಡಿದೆ. ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವ ರೈತರು ಹಾಲು ಉತ್ಪಾದನೆಯಿಂದ ಎಂದೂ ನಷ್ಟ ಅನುಭವಿಸಿಲ್ಲ. ಹೈನುಗಾರಿಕೆ ಹೊರತು ಪಡಿಸಿ ಬೇರಾವುದೇ ಬೆಳೆಗಳಿಗೆ ನಿಖರ ಬೆಲೆ ಇಲ್ಲ. ಆದರೆ ಹಾಲಿಗೆ ಯಾವಾಗಲೂ ಬೆಲೆ ಇರುತ್ತದೆ. ಹಾಗಾಗಿ ರೈತರು ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವ ಮೂಲಕ ಹೊರ ರಾಜ್ಯಗಳಿಗೆ ಯುವಕರುಗಳೆ ಹೋಗುವುದನ್ನು ತಪ್ಪಿಸಬೇಕೆಂದು ಹೇಳಿದರು.

ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಗ್ರಾಮದ ರಂಗೇಗೌಡ(25192 ಲೀ.), ಕೆ.ವಿ.ಸಂದೀಪ್ (19190), ರಾಜೇಂದ್ರಕುಮಾರ್ (15730), ಮದನ್ ಕುಮಾರ್(14784) ಹಾಗೂ 12464 ಲೀಟರ್ ಹಾಲು ಸರಬರಾಜು ಮಾಡಿದ ನಾಗರತ್ನಮ್ಮ ಅವರಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು.


ಮೈಮುಲ್ ಮಾಜಿ ನಿರ್ದೇಶಕ ಕೆ.ಬಿ.ಪ್ರಭಾಕರ್, ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಸಂಘದ ಅಧ್ಯಕ್ಷ ಕೆ.ವಿ.ಸಂದೀಪು, ಉಪಾಧ್ಯಕ್ಷ ಕೆ.ಎಂ.ಮದನ್ ಕುಮಾರ್, ನಿರ್ದೇಶಕರಾದ ರಂಗೇಗೌಡ, ಶಿವ, ಮಾದೇಗೌಡ, ಕೆ.ರವೀಂದ್ರ, ಶೋಭಾ, ನಾಗಮ್ಮ, ಮಹದೇವಶೆಟ್ಟಿ, ನಾರಾಯಣ ಮೂರ್ತಿ, ಮುಖಂಡರಾದ ಕೃಷ್ಣೇಗೌಡ, ಸಿದ್ದೇಗೌಡ, ಮರಿಗೌಡ, ಶಿವಕುಮಾರ್, ಸಂಘದ ಕಾರ್ಯದರ್ಶಿ ಕುಳ್ಳೇಗೌಡ, ಹಾಲು ಪರೀಕ್ಷಕ ಎಸ್.ಮಹದೇವ, ಸಹಾಯಕ ಎಂ.ಅಶೋಕ್, ಎಸ್.ಆನಂದ್ ಸೇರಿದಂತೆ ಗ್ರಾಮಸ್ಥರು, ಯಜಮಾನರು, ಷೇರುದಾರರು ಹಾಜರಿದ್ದರು.

> 2 ಸಾವಿರ ಲೀಟರ್ ಹಾಲು ಉತ್ಪಾದನೆಯಿಂದ ಆರಂಭಗೊಂಡ ಮೈಮುಲ್ ಇಂದು ಬೃಹದಾಕಾರವಾಗಿ ಬೆಳೆದು 10 ಲಕ್ಷ ಲೀಟರ್ ಹಾಲು ಉತ್ಪಾದಿಸುವಂತಾಗಿದೆ. ಒಕ್ಕೂಟದಲ್ಲಿ ಹೊಸ ಆವಿಷ್ಕಾರ ಅಳವಡಿಸಿಕೊಳ್ಳಲಾಗುತ್ತಿದ್ದು, ಮೈಸೂರಿನಲ್ಲಿ 125 ಕೋಟಿ ರೂ. ವೆಚ್ಚದಲ್ಲಿ 6 ತಿಂಗಳು ಹಾಲು ಕೆಡದಂತೆ ಇಡುವ ಘಟಕ ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ ಹಾಸನ ಮತ್ತು ಚಾಮರಾಜನಗರದಲ್ಲಿ ಇಂತಹುದ್ದೇ ಘಟಕ ಕಾರ್ಯ ನಿರ್ವಹಿಸುತ್ತಿದೆ. ಹಾಗಾಗಿ ರೈತರು ಸಹಕಾರ ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು.
> – ಓಂಪ್ರಕಾಶ್, ಮೈಮುಲ್ ಮಾಜಿ ಅಧ್ಯಕ್ಷ.

> ಪ್ರಸಕ್ತ ಸಾಲಿನಲ್ಲಿ ಕೇತುಪುರ ಸಂಘವು 7,02,758 ರೂ. ನಿವ್ವಳ ಲಾಭಗಳಿಸಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. 2024–25ನೇ ಸಾಲಿನಲ್ಲಿ ರೈತರಿಂದ 2,52,34,754 ರೂ. ಮೌಲ್ಯದ ಹಾಲನ್ನು ಖರೀದಿಸಿ ರೈತರಿಗೆ ಹಣ ಬಟವಾಡೆ ಮಾಡಲಾಗಿದೆ. ಒಕ್ಕೂಟದಿಂದ ಸಂಘವು 83,88,030 ರೂ. ವೆಚ್ಚದ ಪಶು ಆಹಾರ ಖರೀದಿಸಿದೆ. ಕಳೆದ ಬಾರಿ 5 ಲಕ್ಷ ರೂ. ನಿವ್ವಳ ಲಾಭದಲ್ಲಿದ್ದ ಸಂಘ ಈ ಬಾರಿ 7 ಲಕ್ಷ ರೂ. ಲಾಭಗಳಿಸಿದೆ. ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧಾರ ಮಾಡಿ ಲಾಭಾಂಶದಲ್ಲಿ ಷೇರುದಾರರಿಗೆ ಡೆವಿ ಡೆಂಟ್ ನೀಡಲಾಗುತ್ತದೆ.
> –ಆರ್.ಪ್ರಮೋದ್, ಮೈಮುಲ್ ಮಾರ್ಗ ವಿಸ್ತರಣಾಧಿಕಾರಿ.

ವಿದ್ಯಾರ್ಥಿಗಳ ಪ್ರತಿಭಟನೆ: ನಾಲ್ವರು ಅಮಾನತು







ನಂಜನಗೂಡು, ಆ.4– ತಾಲೂಕಿನ ಕೊಂತಯ್ಯನಹುಂಡಿ ಗ್ರಾಮದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಗೆ ಸರ್ಕಾರ ಮಣಿದಿದ್ದು, ಮೂಲ ಸೌಕರ್ಯ ಕಲ್ಪಿಸಲು ನಿರ್ಲಕ್ಷ್ಯ ವಹಿಸಿದ ಶಾಲೆಯ ಪ್ರಾಂಶುಪಾಲೆ ಸೇರಿದಂತೆ ನಾಲ್ವರನ್ನು ಅಮಾನತುಗೊಳಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯ ನಿರ್ವಾಹಕ ನಿರ್ದೇಶಕ ಕಾಂತರಾಜು ಆದೇಶ ಹೊರಡಿಸಿದ್ದಾರೆ.

ವಸತಿ ಶಾಲೆ ಪ್ರಾಂಶುಪಾಲೆ ವಸಂತ ಕುಮಾರಿ, ಪ್ರಭಾರ ನಿಲಯಪಾಲಕ ಮಹದೇವಪ್ಪ, ಗಣಿತ ಶಿಕ್ಷಕ ಮಂಜುನಾಥ್ ಹಾಗೂ ಅತಿಥಿ ಶಿಕ್ಷಕ ಗಣೇಶ್ ಅಮಾನತುಗೊಂಡವರು. ಮೂಲ ಸೌಕರ್ಯ ಕಲ್ಪಿಸಿಲ್ಲವೆಂದು ಆರೋಪಿಸಿ ಭಾನುವಾರ ಶಾಲೆಯ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉಪಹಾರ ಸೇವಿಸದೆ ಪೋಷಕರ ಜೊತೆಗೂಡಿ ಪ್ರತಿಭಟನೆ ನಡೆಸಿ ಶಾಲೆಯ ಪ್ರಾಂಶುಪಾಲೆ ಮತ್ತು ನಿಲಯ ಪಾಲಕರು ಹಾಗೂ ಶಿಕ್ಷಕರ ಮೇಲೆ ದೂರುಗಳ ಸುರಿಮಳೆ ಸುರಿಸಿದ್ದರು. ವಿದ್ಯಾರ್ಥಿಗಳ ಪ್ರತಿಭಟನೆಗೆ ಎಚ್ಚೆತ್ತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ನಾಲ್ವರ ವಿರುದ್ಧ ಕ್ರಮ ಕೈಗೊಂಡು ಅಮಾನತುಗೊಳಿಸಿ ಆದೇಶ ಹೊರಡಿಸಿದೆ.

ರೈಸ್‌ಮಿಲ್‌ನಲ್ಲಿ ಸಂಗ್ರಹಿಸಿದ್ದ ಅಕ್ರಮ ಯೂರಿಯಾ ಪತ್ತೆ

ನಂಜನಗೂಡು, ಆ.4– ನಗರದ ಹುಲ್ಲಹಳ್ಳಿ ರಸ್ತೆಯ ಗೌಸಿಯಾ ರೈಸ್ ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 200 ಮೂಟೆ ಯೂರಿಯಾ ದಾಸ್ತಾನನ್ನು ಸೋಮವಾರ ರೈತ ಸಂಘದ ಕಾರ್ಯಕರ್ತರು ಪತ್ತೆ ಹಚ್ಚಿದ್ದಾರೆ.

ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್ ನೇತೃತ್ವದಲ್ಲಿ ರೈತ ಸಂಘದ ಕಾರ್ಯಕರ್ತರು ಯೂರಿಯಾವನ್ನು ಪತ್ತೆ ಹಚ್ಚಿ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರಿಗೆ ಮಾಹಿತಿ ನೀಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ರವಿ ಅಕ್ರಮ ಯೂರಿಯಾ ಮೂಟೆಗಳನ್ನು ವಶಕ್ಕೆ ಪಡೆದರು.



200 ಮೂಟೆ ಯೂರಿಯಾವನ್ನು ರೈತ ಸಂಘದ ಕಾರ್ಯಕರ್ತರು ಪತ್ತೆ ಹಚ್ಚಿರುವುದು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಕಳೆದ 20 ದಿನಗಳಿಂದ ರೈಸ್‌ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿರುವ ಯೂರಿಯಾವನ್ನು ಕೇರಳಕ್ಕೆ ವೈನಾಡಿನ ಮಹಮ್ಮದ್ ಫಾಜಿಲ್ ಎಂಬಾತ ಸಾಗಿಸುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಕಾರ್ಯಕರ್ತರೊಂದಿಗೆ ಸ್ಥಳಕ್ಕೆ ತೆರಳಿದ ವೇಳೆ ಟ್ರಕ್‌ನಲ್ಲಿ ಒಂದು ಲೋಡ್ ಯೂರಿಯಾ ಸಾಗಿಸಲಾಗಿತ್ತು. ಈ ವೇಳೆ ಸಂಬಂಧಿಸಿದ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಮಿಲ್‌ನಲ್ಲಿ ಸಂಗ್ರಹಿಸಿದ್ದ 200ಕ್ಕೂ ಹೆಚ್ಚು ಮೂಟೆ ಯೂರಿಯಾವನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ಕೇಂದ್ರ ಸರ್ಕಾರ 1477 ರೂ. ಬೆಲೆಯ 50 ಕೆಜಿ ಯೂರಿಯಾವನ್ನು ರೈತರಿಗೆ 266 ರೂ.ಗಳಿಗೆ ಸಬ್ಸಿಡಿ ದರದಲ್ಲಿ ನೀಡುತ್ತಿದೆ. ಯೂರಿಯಾ ಪಡೆಯಲು ರೈತರು ದಾಖಲೆ ನೀಡಿ 2 ದಿನಗಳ ಕಾಲ ಸರದಿಯಲ್ಲಿ ನಿಂತು ಪಡೆಯಬೇಕಾಗಿದೆ. ಆದರೆ ನೂರಾರು ಮೂಟೆ ಯೂರಿಯಾ ಕಳ್ಳಸಾಗಾಣಿಕೆದಾರರಿಗೆ ಸಿಗುವುದು ಹೇಗೆ. ನಮ್ಮ ವ್ಯವಸ್ಥೆಯಲ್ಲೇ ಲೋಪವಿದೆ. ಅಕ್ರಮ ತಡೆಯಬೇಕಾದ ಅಧಿಕಾರಿಗಳು ಸುದೀರ್ಘ ನಿದ್ದೆಯಲ್ಲಿದ್ದಾರೆ. ಈ ರೀತಿಯ ಅಕ್ರಮಗಳಿಂದಾಗಿ ರಾಜ್ಯದಲ್ಲಿ ರೈತರಿಗೆ ಯೂರಿಯಾ ದೊರೆಯದೆ ಕೃತಕ ಅಭಾವ ಉಂಟಾಗುತ್ತಿದೆ. ಸರ್ಕಾರ ಅಕ್ರಮ ಯೂರಿಯಾ ಸಾಗಾಣಿಕೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮವಹಿಸಬೇಕು ಎಂದು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ.ರವಿ ಮಾತನಾಡಿ ರೈಸ್‌ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 200 ಯೂರಿಯಾ ಮೂಟೆಗಳನ್ನು ವಶಕ್ಕೆ ಪಡೆದು ಎಪಿಎಂಸಿಗೆ ಸಾಗಿಸಿ ಜಿಲ್ಲಾಧಿಕಾರಿಗಳಿಗೆ ವರದಿ ನೀಡಲಾಗಿದೆ. ಸೂಕ್ತಕ್ರಮವಹಿಸಲಾಗುವುದು ಎಂದರು.

ಈ ವೇಳೆ ಸಿಪಿಐ ಸುನೀಲ್ ಕುಮಾರ್, ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ಜಿಲ್ಲಾ ಕಾರ್ಯದರ್ಶಿ ರಘು, ಗಾರೆ ಮಹದೇವನಾಯ್ಕ, ತಿಮ್ಮನಾಯಕ, ಮಾದೇವ ನಾಯ್ಕ, ವೇಣು ಗೋಪಾಲ್, ನಾಗರಾಜು ಉಪಸ್ಥಿತರಿದ್ದರು.

ಶ್ರೀ ತ್ರಿಪುರ ಸುಂದರಮ್ಮ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ

ಮೂಗೂರು, ಆ.4– ಶ್ರೀ ತ್ರಿಪುರ ಸುಂದರಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೂಗೂರಿನಲ್ಲಿ ನಿರ್ಮಿಸುತ್ತಿರುವ ಶ್ರೀತ್ರಿಪುರ ಸುಂದರಮ್ಮ ಸಮುದಾಯ ಭವನ ಕಾಮಗಾರಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಗುದ್ದಲಿ ಪೂಜೆ ನೆರವೇರಿಸಿದರು.

ಗ್ರಾಮದ ರಾಷ್ಟ್ರೀಯ ಹೆದ್ದಾರಿ ಕಬಿನಿ ನಾಲಾ 38ರ ಬಳಿ ಒಂದೂವರೆ ಎಕರೆ ಪ್ರದೇಶದಲ್ಲಿ ವಿಶಾಲವಾದ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ತಿ.ನರಸೀಪುರ ಕ್ಷೇತ್ರದ ಜನಪ್ರತಿನಿಧಿಗಳು ಸೇರಿದಂತೆ ಗ್ರಾಮದ ಹಿರಿಯ ಮುಖಂಡರ ಸಹಕಾರದೊಂದಿಗೆ ಸರ್ಕಾರಿ ನಿಯಮದ ಪ್ರಕಾರ ಜಾಗ ಪಡೆದು ಇಂದು ಭವನ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡರ ಸಹಕಾರ, ಮಾಜಿ ಸಿಎಂ ಕುಮಾರಣ್ಣನವರ ಸರ್ಕಾರದ ವೇಳೆ ನಾನು ಮಂತ್ರಿಯಾದಾಗ ತಾಯಿಗೆ ಸೇವೆ ಸಲ್ಲಿಸಲು ಬಜೆಟ್‌ನಲ್ಲಿ 5 ಕೋಟಿ ಹಣ ಇರಿಸಿ ರಾಜಗೋಪುರ ನಿರ್ಮಾಣ ಮಾಡಲಾಯಿತು. ಇನ್ನೊಂದು ಕ್ಯಾಬಿನೆಟ್ ಮೀಟಿಂಗ್ ನಡೆದಿದ್ದರೆ 16.5 ಕೋಟಿ ಹಣ ಅಪ್ರೂವ್ ಆಗ್ತಿತ್ತು. ಆದಂತಹ ರಾಜಕೀಯ ಬದಲಾವಣೆಯಲ್ಲಿ ಅಪ್ರೂವ್ ಮಾಡಿಸಲು ಸಾಧ್ಯವಾಗಲಿಲ್ಲ ಎಂದರು.

ಟ್ರಸ್ಟ್ ವತಿಯಿಂದ ವಿಶಾಲವಾದ ಸಭಾಂಗಣ ಸೇರಿದಂತೆ 12 ಕೊಠಡಿವುಳ್ಳ ಸುಸಜ್ಜಿತ ಭವನ ನಿರ್ಮಾಣವಾಗಲಿದೆ. ಅಮ್ಮನವರ ಭಕ್ತರು, ಟ್ರಸ್ಟ್ ಮುಖ್ಯಸ್ಥರು ನೆರವು ನೀಡಬೇಕು ಎಂದು ಮನವಿ ಮಾಡಿದರು.



ಸಮುದಾಯ ಭವನ ನಿರ್ಮಾಣಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಬೊಮ್ಮಾಯಿ ಸರ್ಕಾರದ ವೇಳೆ ಸಚಿವರಾಗಿದ್ದ ಸಾ.ರಾ.ಮಹೇಶ್ ಸರ್ಕಾರಿ ಅತಿಥಿ ಗೃಹಕ್ಕೆ ಜಾಗ ಮಂಜೂರು ಮಾಡಿಸಿದ್ದರು. ಇದೀಗ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಸಹಕಾರದಿಂದ 10 ಕೋಟಿ ರೂ. ವೆಚ್ಚದಲ್ಲಿ ನೂತನ ಅತಿಥಿ ಗೃಹದ ಕಾಮಗಾರಿ ಆರಂಭವಾಗಿದೆ ಎಂದರು.

ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಶ್ರೀತ್ರಿಪುರ ಸುಂದರಿ ಅಮ್ಮನವರ ಟ್ರಸ್ಟ್ ಅಧ್ಯಕ್ಷ ಶಿವಲಿಂಗಯ್ಯ, ಮಾಜಿ ಅಧ್ಯಕ್ಷ ಲಿಂಗಪ್ಪ ಮುಖಂಡರಾದ ಎಂ.ಡಿ.ಬಸವರಾಜು, ಡಾ.ದೇವೇಗೌಡ, ಬ್ಯಾಡರಹಳ್ಳಿ ಕಾಡಪ್ಪ, ದೇವಿ ಎಲೆಕ್ಟ್ರಾನಿಕ್ ಮಾಲೀಕ ಹರೀಶ್, ಮೂಗೂರಯ್ಯ, ರಾಮಕೃಷ್ಣ ಧನಂಜಯ, ರವಿಶಂಕರ್, ರಂಗಸ್ವಾಮಿ, ನಾಗೇಶ್, ಕುಮಾರ್, ಅರ್ಚಕರಾದ ಸುಂದರಪ್ಪ, ಹರೀಶ್, ರವಿ ಸೇರಿದಂತೆ ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ನಂಜನಗೂಡು, ಆ.4– ತಾಲೂಕಿನ ಹದಿನಾರು ಶಾಖಾ ವ್ಯಾಪ್ತಿಯ ಆಯರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವ ಕಾರಣ ಆ.6 ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ತಾಲೂಕಿನ ಆಯರಹಳ್ಳಿ, ಹದಿನಾರು, ಹದಿನಾರು ಮೋಳೆ, ಮಲ್ಲರಾಜನಹುಂಡಿ, ಮೂಡಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಲ್ಲಹಳ್ಳಿ ಸರ್ಕಾರಿ ಶಾಲೆ ಎಸ್‌ಡಿಎಂಸಿ ಪದಾಧಿಕಾರಿಗಳ ಆಯ್ಕೆ



ಎಸ್‌ಡಿಎಂಸಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನಂಜನಗೂಡು, ಆ.4– ತಾಲೂಕಿನ ಮಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ಡಿ.ಸಿದ್ದರಾಜು, ಉಪಾಧ್ಯಕ್ಷೆಯಾಗಿ ಅರ್ಪಿತ, ಸದಸ್ಯರಾಗಿ ಲಲಿತ, ರೂಪ, ಕುಸುಮ, ನಾಗಲಕ್ಷ್ಮಿ, ಚಿಕ್ಕದೇವಮ್ಮ, ಅಂಬಿಕ, ನೀಲ, ಉಮಾ, ಮಹೇಶ್ವರಿ, ಚಂದ್ರಕಾಂತ, ಸುಂದರ ಆಚಾರ್, ಸಿದ್ದನಾಯಕ, ಮಹೇಶ, ನಿಂಗನಾಯಕ, ರಾಜೇಶ್, ಓಂಕಾರ ನಾಯಕ, ಪುಟ್ಟಸ್ವಾಮಿ ಆಯ್ಕೆಯಾದರು. ಈ ವೇಳೆ ಗ್ರಾಪಂ ಅಧ್ಯಕ್ಷ ಶ್ರೀಧರ್, ಮಾಜಿ ಎಸ್‌ಡಿಎಂಸಿ ಅಧ್ಯಕ್ಷ ಸಿದ್ದನಾಯ್ಕ, ಮಹದೇವನಾಯಕ, ಮಾಜಿ ಸೈನಿಕ ನಂಜುಂಡ ನಾಯಕ, ಯಜಮಾನ ವೆಂಕಟರಾಮ ನಾಯಕ, ರಂಗಸ್ವಾಮಿ, ಮಣಿಕಂಠ, ಮುಖ್ಯ ಶಿಕ್ಷಕಿ ನಾಗಮ್ಮ ಮತ್ತು ಶಿಕ್ಷಕ ವೃಂದ ಹಾಜರಿದ್ದರು.

ಆನೆ ದಾಳಿ: ರೈತನಿಗೆ ತೀವ್ರ ಗಾಯ

ಹೆಚ್.ಡಿ.ಕೋಟೆ, ಆ.4– ಆನೆ ದಾಳಿಗೆ ರೈತ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಎನ್.ಬೆಳ್ತೂರು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ರೈತ ರಾಜು ತೀವ್ರ ಗಾಯಗೊಂಡವರು. ಕಳೆದ ಮೂರ್‍ನಾಕು ದಿನಗಳ ಹಿಂದೆ ಬಂಡೀಪುರ ಅರಣ್ಯ ವ್ಯಾಪ್ತಿಯಿಂದ ರೈಲ್ವೆ ಬ್ಯಾರಿಕೇಡ್ ದಾಟಿ ಬಂದ ಮೂರು ಕಾಡಾನೆಗಳು ಭಾನುವಾರ ಮಳಲಿ ಗ್ರಾಮದ ರೈತರ ರೈತಪ್ರಕಾಶ್ ಎಂಬುವರಿಗೆ ಸೇರಿದ ಜಮೀನಿಗೆ ನುಗ್ಗಿ ಬಾಳೆ ಫಸಲನ್ನು ನಾಶ ಮಾಡಿವೆ. ಅಲ್ಲದೇ ಮತ್ತೋರ್ವ ರೈತ ಜಗಣ್ಣ ಅವರಿಗೆ ಸೇರಿದ 50ಕ್ಕೂ ಹೆಚ್ಚು ಟ್ರೈ ಟಮೋಟೋ ತಿಂದು ನಾಶ ಮಾಡಿದೆ. ಸೋಮವಾರ ಮುಂಜಾನೆ ಎನ್.ಬೆಳ್ತೂರು ಗ್ರಾಮಕ್ಕೆ ಲಗ್ಗೆ ಹಾಕಿದ ಕಾಡಾನೆಗಳು ಹಸುಗಳನ್ನು ಕಟ್ಟಿ ಹಾಕುತ್ತಿದ್ದ ರಾಜು ಅವರ ಮೇಲೆ ದಾಳಿ ನಡೆಸಿವೆ. ಪರಿಣಾಮ ರಾಜು ಅವರ ಕಾಲು ಮುರಿದು ತೀವ್ರ ಗಾಯಗೊಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಆರ್‌ಎಫ್‌ಓ ಸಿದ್ದರಾಮು ಅವರು ರೈತ ರಾಜು ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು.

ಉಳಿದಂತೆ ಗ್ರಾಮದ ರೈತರು ದಮ್ಮನಕಟ್ಟೆ ಸಫಾರಿ ಕೇಂದ್ರಕ್ಕೆ ತೆರಳಿ ಎಸಿಎಫ್ ಮಧು ಹಾಗೂ ಆರ್‌ಎಫ್‌ಓ ಸಿದ್ದರಾಜು ಅವರನ್ನು ಭೇಟಿ ಮಾಡಿ ವನ್ಯ ಜೀವಿಗಳ ಹಾವಳಿ ತಡೆಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿ ನಂತರ ಎಸಿಎಫ್ ಮಧು ಮಾತನಾಡಿ, ಆನೆ ದಾಳಿಯಿಂದ ಗಾಯಗೊಂಡಿರುವ ರೈತ ರಾಜು ಅವರಿಗೆ ಚಿಕಿತ್ಸೆ ಕೊಡಿಸುವುದಾಗಿ ತಿಳಿಸಿದರು. ಅಲ್ಲದೆ ಆನೆ ದಾಳಿಯಿಂದ ನಾಶವಾಗಿ ರುವ ಫಸಲಿಗೆ ಸರ್ಕಾರದ ವತಿಯಿಂದ ಪರಿಹಾರ ಕೊಡಿಸುವ ಭರವಸೆ ನೀಡಿ, ಆನೆ ಓಡಿಸುವುದಕ್ಕೆ ವಿಶೇಷ ಆನೆ ಕಾವಲು ಕಾರ್ಯ ಪಡೆ ನೇಮಿಸ ಲಾಗುವುದು ಎಂದರು.

ಈ ವೇಳೆ ಶುಂಠಿ ಕೂಲಿ ಕಾರ್ಮಿಕರ ಅಧ್ಯಕ್ಷ ಸುಂದರ, ತಿಮ್ಮಯ್ಯ, ಪ್ರವೀಣ, ಎಜ್ಜೂರ, ಸೋಮೇಶ್, ಶಿವಪ್ಪ, ಲಕ್ಷ್ಮಣ, ಮರಿಲಿಂಗಯ್ಯ, ನಾಗಯ್ಯ, ಪ್ರಕಾಶ್, ಶಿವಕುಮಾರ್, ಲೋಕೇಶ್, ರಾಜು, ಬಾಣಯ್ಯ ಇದ್ದರು.

ಕಾಡು ಪ್ರಾಣಿಗಳ ಹಾವಳಿ ಸಮಸ್ಯೆ ಬಗೆಹರಿಸಲು ಮನವಿ

ಹುಣಸೂರು, ಆ.4– ಕಾಡು ಪ್ರಾಣಿಗಳ ಹಾವಳಿ, ರೈತರ ಭೂ ವಿವಾದ ಸೇರಿದಂತೆ ಇನ್ನಿತರ ಸಮಸ್ಯೆ ಬಗೆಹರಿಸುವಂತೆ ಪಟ್ಟಣದ ಸಂವಿಧಾನ ಸರ್ಕಲ್‌ನಲ್ಲಿ ಅರಣ್ಯ ಸಚಿವ ಬಿ.ಈಶ್ವರ ಖಂಡ್ರೆ ಅವರಿಗೆ ರೈತ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮನವಿ ಸಲ್ಲಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆ, ಚಿರತೆ, ಹುಲಿ, ಮಂಗಗಳ ಹಾವಳಿ ಹೆಚ್ಚಾಗಿದ್ದು, ರೈತರ ಫಸಲು ನಾಶವಾಗುತ್ತಿವೆ. ಅಲ್ಲದೇ ವನ್ಯ ಜೀವಿಗಳ ದಾಳಿಗೆ ಮಾನವರು ಸೇರಿದಂತೆ ಜಾನುವಾರುಗಳು ಬಲಿಯಾಗುತ್ತಿವೆ. ಹೀಗಾಗಿ ಸಚಿವರು ಸೂಕ್ತ ಕ್ರಮ ಕೈಗೊಂಡು ಕಾಡಂಚಿನ ಜನರನ್ನು ರಕ್ಷಣೆ ಮಾಡಬೇಕು ಎಂದರು.

ಸಚಿವ ಈಶ್ವರ ಖಂಡ್ರೆ ಮಾತನಾಡಿ, ತಮ್ಮ ಸಮಸ್ಯೆ ನಮ್ಮ ಗಮನಕ್ಕೆ ಬಂದಿದೆ.



ಅರಣ್ಯ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಕೂಡಲೇ ಕಾಡಾನೆ ದಾಳಿ ತಡೆಗಟ್ಟಲು ರೈಲ್ವೆ ಕಂಬಿ ಕಾಮಗಾರಿ ಪೂರ್ಣ ಗೊಳಿಸಲು ಕ್ರಮ ಕೈಗೊಂಡಿದ್ದೇನೆ. ಅಲ್ಲದೇ ಕಾಡು ಪ್ರಾಣಿಗಳ ಹಾವಳಿ ತಡೆಗೆ ಅಗತ್ಯ ಕ್ರಮ ಕೈಗೊಳ್ಳುತ್ತೇನೆ. ಅಲ್ಲದೇ ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆ ಸಹಕಾರದೊಂದಿಗೆ ಅರಣ್ಯ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುವುದು. ನಿಮ್ಮ ಬೇಡಿಕೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿದರು. ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಜಿಲ್ಲಾ ಉಪಾಧ್ಯಕ್ಷ ಆಲಿಜಾನ್, ಮುಖಂಡರಾದ ಮಹದೇವು, ಬಸವರಾಜು, ವಿಷಕಂಠಪ್ಪ, ರಾಮಕೃಷ್ಣೇಗೌಡ, ಬಸವರಾಜೇಗೌಡ, ವೆಂಕಟೇಶ್, ಮುತ್ತು, ದಸಂಸ ಮುಖಂಡ ರಾದ ರಾಜು, ಸಿದ್ದೇಶ್, ಗಜೇಂದ್ರ ದೇವೇಂದ್ರ, ಧರ್ಮಾಪುರ ಗ್ರಾಮ ಘಟಕದ ಅಧ್ಯಕ್ಷ ವೆಂಕಟಾಚಲಪತಿ, ಅರಣ್ಯ ಸಮಿತಿ ಅಧ್ಯಕ್ಷ ಗೋವಿಂದ, ಸದಸ್ಯರಾದ ರಾಮೇಗೌಡ, ವೆಂಕಟೇಶ್, ಶೇಖರ್, ಮಹಿಳೆಯರು ಇನ್ನಿತರರಿದ್ದರು.

ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಂಪೂರ್ಣ ಸಹಕಾರ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಭರವಸೆ

ಸರಗೂರು, ಆ.4– ಪಟ್ಟಣದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಶಾಸಕ ಅನಿಲ್ ಭರವಸೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಸೋಮವಾರ ತಾಲೂಕು ಆದಿಕರ್ನಾಟಕ ಮಹಾಸಭಾ, ಡಾ.ಬಿ.ಆರ್.ಅಂಬೇಡ್ಕರ್ ಟ್ರಸ್ಟ್ ತಾಲೂಕು ಶಾಖೆಯಿಂದ ನಡೆದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋಟೆಯಲ್ಲಿ ನಿರ್ಮಾಣಗೊಂಡ ಮಾದರಿಯಲ್ಲಿಯೇ ಸರಗೂರಿನಲ್ಲಿಯೂ ಭವನ ನಿರ್ಮಾಣಕ್ಕೆ ಮುಂದಾಗಲಾಗುವುದು. ಈಗಾಗಲೇ ನಿವೇಶನ ಕುರಿತ ಕಡತ ಜಿಲ್ಲಾಧಿಕಾರಿ ಕಚೇರಿಯಲ್ಲಿದ್ದು, ಅತೀ ಶೀಘ್ರ ನಿವೇಶನ ಮಂಜೂರಾಗಲಿದೆ. ಜನಾಂಗದ ಬೇಡಿಕೆಯಂತೆ 10 ಕೋಟಿ ರೂ. ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಲ್ಲಿ ಅನುದಾನಕ್ಕಾಗಿ ಮಾತುಕತೆ ನಡೆಸಲಾಗುವುದು. ಭವನ ನಿರ್ಮಾಣಕ್ಕೆ ಸಂಪೂರ್ಣ ಸಹಕಾರ ಇರಲಿದೆ ಎಂದರು.



ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳನ್ನು ಶಾಸಕ ಅನಿಲ್ ಅಭಿನಂದಿಸಿದರು.

ಸಮಾಜಕ್ಕಾಗಿ ಓದು ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ಮಕ್ಕಳು ಅತ್ಯಂತ ಬುದ್ಧಿವಂತ ಮಕ್ಕಳು. ತಮಗಾಗಿ ಓದದೇ ಸಮಾಜದ ಏಳಿಗೆಗಾಗಿ ಓದಬೇಕು. ಅಂಬೇಡ್ಕರ್ ಅವರಂಥ ಬುದ್ಧಿಜೀವಿ ಭೂಮಿ ಮೇಲೆ ಯಾರು ಇಲ್ಲ. ಹೀಗಾಗಿ ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ವೃತ್ತಕ್ಕೆ ಅಂಬೇಡ್ಕರ್ ಹೆಸರಿಡಲು ಅಧಿಕಾರಿಗಳಿಗೆ ಸೂಚಿಸಲಾಗುವುದು. ಅಲ್ಲದೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕ್ರಮ ವಹಿಸಲಾಗುವುದು ಎಂದರು.

ಕೋಟೆ ಸರಗೂರು ಅವಳಿ ತಾಲೂಕುಗಳಂತೆ ಆದಿ ಕರ್ನಾಟಕ ಮಹಾಸಭಾದವರು ಎಲ್ಲರೂ ಒಗ್ಗೂಡಿ ಕಾರ್ಯಕ್ರಮ ಮಾಡಿದರೆ ತುಂಬಾ ಖುಷಿಯಾಗಲಿದೆ. ಎಲ್ಲರೂ ಒಂದೆಡೆ ಸೇರಿದರೆ ಅರ್ಥಪೂರ್ಣ ಕಾರ್ಯಕ್ರಮವಾಗಲಿದೆ. ಅಂಬೇಡ್ಕರ್ ಅವರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಎಲ್ಲರೂ ಮುನ್ನುಗ್ಗಬೇಕು. ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವರಾಜು, ಗೌರವಾಧ್ಯಕ್ಷ ಬಸವರಾಜು ಅವರನ್ನು ಅಭಿನಂದಿಸಲಾಯಿತು. ಆದಿ ಕರ್ನಾಟಕ ಮಹಾಸಭಾದ ಅಧ್ಯಕ್ಷ ಶಿವಣ್ಣ ಮಾತನಾಡಿದರು. ಅಂತರಸಂತೆ ಸಾರಾನಾಥ ಬುದ್ಧ ವಿಹಾರದ ಗೌತಮಿ ಭಂತೇಂಜಿ ಸಾನ್ನಿಧ್ಯ ವಹಿಸಿದ್ದರು. ಕೋಟೆ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವರಾಜು, ಪಪಂ ಸದಸ್ಯರಾದ ಚಲುವಕೃಷ್ಣ, ಚಂದ್ರಕಲಾ, ಜಿಪಂ ಮಾಜಿ ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಲುವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಎನ್.ನಾಗರಾಜು, ಟೌನ್ ಅಧ್ಯಕ್ಷ ಸಣ್ಣಸ್ವಾಮಿ, ಗಡಿ ಯಜಮಾನ ಕಾರಯ್ಯ, ರಂಗಯ್ಯ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ರಮೇಶ್, ಮುಖಂಡರಾದ ಇದೀಯಪ್ಪ ಭೀಮಯ್ಯ, ಸುಬ್ರಹ್ಮಣ್ಯ, ಗೋಪಾಲ್, ಬಿಲ್ಲಯ್ಯ, ಮಹದೇವಯ್ಯ, ಹುಚ್ಚಯ್ಯ, ನಂಜುಂಡಯ್ಯ, ಚನ್ನಯ್ಯ ಸೇರಿದಂತೆ ಇತರರಿದ್ದರು.

ಚಿರತೆ ದಾಳಿ: 4 ಮೇಕೆಗಳು ಸಾವು



ನಂಜನಗೂಡು, ಆ.4– ಚಿರತೆ ದಾಳಿಗೆ 4 ಮೇಕೆಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಸೋನಹಳ್ಳಿ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ಸೋಮಣ್ಣ, ಮುದ್ದುಮಹದೇವಯ್ಯ, ಮಹದೇವಸ್ವಾಮಿ ಅವರಿಗೆ ಸೇರಿದ ಮೇಕೆಗಳ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದಿದೆ. ಇದರಿಂದ ಸುಮಾರು 30 ರಿಂದ 40 ಸಾವಿರ ರೂ. ನಷ್ಟವಾಗಿದೆ. ಹೀಗಾಗಿ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ರೈತರು ಮನವಿ ಮಾಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿ ಸಾಗರ್, ಸ್ಥಳೀಯ ಪೊಲೀಸರು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಹಳೇ ಕೆಸರೆ ಘನತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಭಾರೀ ಬೆಂಕಿ

● ಲಕ್ಷಾಂತರ ರೂ. ಮೌಲ್ಯದ ಯಂತ್ರೋಪಕರಣಗಳಿಗೆ ಹಾನಿ ● ಪಾಲಿಕೆ ಅಧಿಕಾರಿಗಳಿಗೆ ಸ್ಥಳೀಯರ ಘೇರಾವ್ ● ಘಟಕ ಸ್ಥಳಾಂತರಿಸಲು ಆಗ್ರಹ



ಹಳೇಕೆಸರೆ ಘನತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಬೆಂಕಿ ಹೊತ್ತಿ ಉರಿಯುತ್ತಿರುವುದು



ಪಾಲಿಕೆ ಅಧಿಕಾರಿಗಳ ವಿರುದ್ಧ ಹಳೇ ಕೆಸರೆ ನಿವಾಸಿಗಳು ಪ್ರತಿಭಟನೆ ನಡೆಸಿದರು

ಮೈಸೂರು, ಆ.4– ಮೈಸೂರಿನ ಹಳೇ ಕೆಸರೆಯಲ್ಲಿರುವ ಘನತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸೋಮವಾರ ಬೆಳಗ್ಗೆ ಭಾರಿ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಬೆಳಗಿನ ವಾಯು ವಿಹಾರಕ್ಕೆ ಹೊರಟ ಸಾರ್ವಜನಿಕರು ಕೂಡಲೇ ಅಗ್ನಿಶಾಮಕ ಠಾಣೆಗೆ ವಿಷಯ ತಿಳಿಸಿದ್ದರಿಂದ ಭಾರೀ ಅನಾಹುತ ತಪ್ಪಿದಂತಾಗಿದೆ. ಆದಾಗ್ಯೂ ಸಂಸ್ಕರಣಾ ಘಟಕದಲ್ಲಿನ ಯಂತ್ರೋಪಕರಣಗಳು ಹಾನಿಗೊಳಗಾಗಿವೆ.

ಸ್ಥಳಕ್ಕೆ ಅಗ್ನಿಶಾಮಕ ಠಾಣೆ ಸಿಬ್ಬಂದಿ ಆಗಮಿಸಿ ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಆದರೆ, ಅಷ್ಟರಲ್ಲಿ ಘಟಕದಲ್ಲಿದ್ದ ಸುಮಾರು 90 ಲಕ್ಷ ರೂ. ಮೌಲ್ಯದ ಯಂತ್ರೋಪಕರಣಗಳಿಗೆ ಹಾನಿಯಾಗಿದ್ದು, ಯಂತ್ರಗಳ ವೈಯರ್‌ಗಳು ಸುಟ್ಟು ಕರಕಲಾಗಿವೆ. ಮೂರು ಹಂತದ ಕಸ ವಿಂಗಡಣೆ ಘಟಕಗಳಲ್ಲಿ ಮೊದಲ ಘಟಕದಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಘಟಕದಲ್ಲಿನ ಅಪಾರ ಪ್ರಮಾಣದಲ್ಲಿ ಪ್ಲಾಸ್ಟಿಕ್ ಬೆಂಕಿಗೆ ಆಹುತಿಯಾದ ಪರಿಣಾಮ ಸ್ಥಳದಲ್ಲಿ ದಟ್ಟಹೊಗೆ ಆವರಿಸಿತ್ತಲ್ಲದೇ, ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯಗಳ ಸುಟ್ಟ ದುರ್ವಾಸನೆಯೂ ತುಂಬಿ ಸಾರ್ವಜನಿಕರು ಮೂಗು ಮುಚ್ಚಿಕೊಂಡು ತಿರುಗಾಡುವ ಪರಿಸ್ಥಿತಿ ಉಂಟಾಯಿತು.

ಇದೇ ವೇಳೆ ಘಟಕಕ್ಕೆ ಭೇಟಿ ನೀಡಿದ ಪಾಲಿಕೆ ಆರೋಗ್ಯಾಧಿಕಾರಿ ಡಾ. ವೆಂಕಟೇಶ್, ಎಇಇ ಮಧುಕರ್, ಪರಿಸರ ಇಂಜಿನಿಯರ್ ಶ್ರೀದೇವಿ ಅವರಿಗೆ ಹಳೇ ಕೆಸರೆ ನಿವಾಸಿಗಳು ಮತ್ತು ಹಳೇ ಕೆಸರೆ ಜನ ಸ್ಪಂದನಾ ಹಿತರಕ್ಷಣಾ ಸಮಿತಿ ಸದಸ್ಯರು ಘೇರಾವ್ ಹಾಕಿ, ತ್ಯಾಜ್ಯ ಸಂಸ್ಕರಣಾ ಘಟಕದಿಂದ ಸಾರ್ವಜನಿಕರ ಆರೋಗ್ಯ ಹಾಳಾಗುತ್ತಿದೆ. ನೀವು ಆರೋಗ್ಯ ತಪಾಸಣೆ ಮಾಡಿಸುತ್ತೇವೆ ಎಂದವರು ಇಲ್ಲಿಯ ತನಕವೂ ತಪಾಸಣಾ ಶಿಬಿರ ಏರ್ಪಡಿಸಿಲ್ಲ. ಘಟಕದಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು, ಈ ಬಗ್ಗೆ ನೀವು ಸರ್ಕಾರಕ್ಕೆ ವರದಿ ಸಲ್ಲಿಸಿ ಇದನ್ನು ಸ್ಥಳಾಂತರ ಮಾಡಿಸಬೇಕೆಂದು ಆಗ್ರಹಿಸಿದರು.

ಸಿದ್ದಲಿಂಗಪುರ ಗ್ರಾಪಂ ಅಧ್ಯಕ್ಷರ ಆಕ್ರೋಶ: ಈ ಸಂದರ್ಭದಲ್ಲಿ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾದೇಶ ಮಾತನಾಡಿ, ಇದು ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆದ ಘಟನೆಯಾಗಿದ್ದು, ಪಾಲಿಕೆ ನೌಕರರೇ ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಮಾಡಲಾಗದೆ ಬೆಂಕಿ ಹಚ್ಚಿದ್ದಾರೆ ಎಂದು ಆರೋಪಿಸಿದರು. ತ್ಯಾಜ್ಯ ವಿಲೇವಾರಿ ಘಟಕದಿಂದ ಇಲ್ಲಿನ ಪರಿಸರ ಹಾಳಾಗುತ್ತಿದೆ. ಆಗಾಗ್ಗೆ ಬೆಂಕಿ ಕಾಣಿಸಿಕೊಂಡು ಸುತ್ತಲೂ ವಾಸಿಸುವ ಜನರಿಗೆ ಆರೋಗ್ಯದ ಸಮಸ್ಯೆ ಕಾಡುತ್ತಿದೆ. ಪಕ್ಕದಲ್ಲೇ ಹರಿಯುವ ವರುಣಾ ನಾಲೆಯ ನೀರು ಸಹ ಕಲುಷಿತಗೊಳ್ಳುತ್ತಿದೆ. ಕೂಡಲೇ ಈ ಘಟಕವನ್ನು ಇಲ್ಲಿಂದ ಸ್ಥಳಾಂತರ ಮಾಡಬೇಕೆಂದು ಒತ್ತಾಯಿಸಿದರು.

ಜನಸ್ಪಂದನಾ ವೇದಿಕೆ ಕಾರ್ಯದರ್ಶಿ ಪ್ರಶಾಂತ್ ಮಾತನಾಡಿ, ಈ ಘಟಕ ಇಲ್ಲಿ ಪ್ರಾರಂಭವಾದ ದಿನದಿಂದ ದುರ್ವಾಸನೆ ಹೆಚ್ಚಾಗಿದೆ. ಸುತ್ತಮುತ್ತಲಿನ ಮನೆಗಳಲ್ಲಿ ವಾಸಿಸಲು ಆಗುತ್ತಿಲ್ಲ. ಇದನ್ನು ಸ್ಥಳಾಂತರ ಮಾಡುವಂತೆ ಒಂದು ವರ್ಷದಿಂದ ನಾವು ಜನಸ್ಪಂದನಾ ಹಿತರಕ್ಷಣಾ ವೇದಿಕೆ ನೇತೃತ್ವದಲ್ಲಿ ಹೋರಾಟ ಮಾಡುತ್ತಿದ್ದೇವೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮತ್ತು ಉಸ್ತುವಾರಿ ಸಚಿವರಿಗೆ ಮನವಿ ಕೊಟ್ಟಿದ್ದೇವೆ. ಯಾರೂ ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಘಟಕದ ವಾಸನೆಯಿಂದ ಮನುಷ್ಯನ ಸ್ವಾಸ್ಥ್ಯ ಹಾಳಾಗುತ್ತಿದೆ. ಡಪ್ಪಿಂಗ್ ಯಾರ್ಡ್‌ನ ಕೊಳಚೆ ನೀರನ್ನು ಪಕ್ಕದಲ್ಲೇ ಹರಿಯುವ ವರುಣಾ ನಾಲೆಗೆ ಬಿಡಲಾಗುತ್ತಿದೆ. ಈ ವಿಷಯುಕ್ತ ನೀರಿನಿಂದ ಬೆಳೆಗಳು ಹಾಳಾಗುವುದಲ್ಲದೇ, ಅಂತರ್ಜಲವೂ ಹಾಳಾಗುತ್ತಿದೆ. ಅಲ್ಲದೇ ಬೆಂಕಿಯ ಹೊಗೆಯಿಂದ ದುರ್ವಾಸನೆ ಬರುವುದರಿಂದ ಪರಿಸರವೂ ಹಾಳಾಗುತ್ತಿದೆ. ಇತ್ತೀಚೆಗೆ ಈ ಘಟಕಕ್ಕೆ ಉಪ ಲೋಕಾಯುಕ್ತರು ಭೇಟಿ ನೀಡಿದ್ದರು. ಆಗಲೂ ನಾವು ಮನವಿ ಕೊಟ್ಟಿದ್ದೆವು. ಸರ್ಕಾರ ಕೂಡಲೇ ಈ ಭಾಗದ ಜನರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಘಟಕ ಸ್ಥಳಾಂತರ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ರೇವಣ್ಣ, ಸಿದ್ದಲಿಂಗಪುರ ಗ್ರಾಮದ ಯಜಮಾನರಾದ ಶಿವಮಲ್ಲು, ವೆಂಕಟರಾಜು, ಅಲಸಿಂಗನ್, ಜಯಶಂಕರ್, ಅಂಬೇಡ್ಕರ್ ಯುವ ಸಂಘದ ಕಾರ್ಯಕರ್ತರು ಇತರೆ ಸಾರ್ವಜನಿಕರು ಇದ್ದರು.

ನಟಿ ರಮ್ಯಾ ವಿರುದ್ಧ ಅಶ್ಲೀಲ–ಬೆದರಿಕೆ ಸಂದೇಶ: ಮತ್ತಿಬ್ಬರ ಬಂಧನ



ಬೆಂಗಳೂರು: ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಶ್ಲೀಲವಾಗಿ ಕಮೆಂಟ್ ಮಾಡಿದ್ದ ಮತ್ತು ಬೆದರಿಕೆಯೊಡ್ಡಿದ್ದ ಆರೋಪದಡಿ ಮತ್ತಿಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಂಧಿತರನ್ನು ಭುವನ್ ಗೌಡ ಹಾಗೂ ರಾಜೇಶ್ ಎಂದು ಗುರುತಿಸಲಾಗಿದ್ದು, ಈ ಮೂಲಕ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ. ಇದೇ ಪ್ರಕರಣದಲ್ಲಿ ಆಗಸ್ಟ್ 2ರಂದು ಟಿ ಓಬಣ್ಣ ಮತ್ತು ಗಂಗಾಧರ ಎಂಬುವವರನ್ನು ಬಂಧಿಸಲಾಗಿತ್ತು.

ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ನಟಿ ರಮ್ಯಾ ಅವರು ಜುಲೈ 28ರಂದು ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದರು.

ಇನ್‌ಸ್ಟಾಗ್ರಾಂ ಖಾತೆಗಳಿಂದ ಆರೋಪಿಗಳು ರಮ್ಯಾ ಅವರಿಗೆ ಅಶ್ಲೀಲ ಹಾಗೂ ಬೆದರಿಕೆ ಸಂದೇಶವನ್ನು ಕಳುಹಿಸಿದ್ದರು. ಆ ಖಾತೆಗಳ ಪರಿಶೀಲನೆ ನಡೆಸಲಾಗುತ್ತಿದ್ದು, ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಕೋಲಾರ ಮತ್ತು ವಿವಿಧ ಜಿಲ್ಲೆಗಳಲ್ಲಿರುವ ಖಾತೆಗಾರರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಸದ್ಯ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದ್ದು, ತನಿಖೆ ನಡೆಯುತ್ತಿದೆ.

ಹುಲಿಗಳ ಸಾವು ಬೆನ್ನಲ್ಲೇ ಕರ್ನಾಟಕದಲ್ಲಿ 20 ನವಿಲುಗಳ ಅನುಮಾನಾಸ್ಪದ ಮರಣ

ತುಮಕೂರು: ಕರ್ನಾಟಕದಲ್ಲಿ ವನ್ಯಜೀವಿಗಳ ಸರಣಿ ಸಾವು ಪ್ರಕರಣ ಮುಂದುವರೆದಿದ್ದು, 4 ಹುಲಿಗಳ ಸಾವು ಪ್ರಕರಣ ಹಸಿರಾಗಿರುವಂತೆಯೇ ಇತ್ತ 20 ನವಿಲುಗಳು ಅನುಮಾನಾಸ್ಪದವಾಗಿ ಸಾವನ್ನಪ್ಪಿವೆ. ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಿಡಿಗೇಶಿಯ ಹನುಮಂತಪುರ ಗ್ರಾಮದ ಕೆರೆ ಕೋಡಿ ನೀರು ಹರಿಯುವ ಪಕ್ಕದ ಜಮೀನುಗಳಲ್ಲಿ 5 ಗಂಡು ಹಾಗೂ 15 ಹೆಣ್ಣು ಸೇರಿ ಒಟ್ಟು 20 ನವಿಲುಗಳು ನಿಗೂಢವಾಗಿ ಸಾವನ್ನಪ್ಪಿರುವುದು ಪತ್ತೆ ಆಗಿದೆ.

ಬೆಳಗ್ಗೆ ರೈತರು ಜಮೀನಿಗೆ ಬಂದಾಗ ನವಿಲುಗಳ ಮೃತದೇಹಗಳು ಪತ್ತೆ ಆಗಿದ್ದು, ಆಗಸ್ಟ್ 1ರ ರಾತ್ರಿ ನವಿಲುಗಳು ಮೃತಪಟ್ಟ ಬಗ್ಗೆ ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಕ್ರಿಮಿನಾಶಕ ಸೇವನೆ ಶಂಕೆ: ಇನ್ನು ನವಿಲುಗಳ ಸಾವಿಗೆ ನಿಖರ ಮಾಹಿತಿ ತಿಳಿದುಬಂದಿಲ್ಲ. ಕ್ರಿಮಿನಾಶಕ ಸಿಂಪಡಣೆ ಮಾಡಿರುವ ಬೆಳೆಗಳನ್ನು ಸೇವಿಸಿ ನವಿಲುಗಳು ಮೃತಪಟ್ಟಿರುಬಹುದು ಅಥವಾ ಯಾರಾದರೂ ಏನಾದರೂ ಮಾಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಅಧಿಕಾರಿಗಳು ದೌಡು: ಇತ್ತ ನವಿಲುಗಳ ಸಾವಿನ ವಿಚಾರ ತಿಳಿಯುತ್ತಲೇ ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ನ್ಯಾಯಾಧೀಶರ ಅನುಮತಿ ಬಳಿಕ ನವಿಲುಗಳ ಕಳೇಬರಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ಆ ಮೂಲಕ ನವಿಲುಗಳ ಸಾವಿನ ಕಾರಣದ ವರದಿ ಪಡೆಯಲು ಅರಣ್ಯಾಧಿಕಾರಿಗಳು ಮುಂದಾಗಿದ್ದಾರೆ.

ತನಿಖೆಗೆ ಅಧಿಕಾರಿಗಳ ಆದೇಶ



ಸಚಿವ ಈಶ್ವರ್ ಖಂಡ್ರೆ ಆಘಾತ, ತನಿಖೆಗೆ ಆದೇಶ: ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಮಿಡಿಗೇಸಿ ಬಳಿ ರೈತನ ಜಮೀನಿನಲ್ಲಿ 20 ನವಿಲುಗಳು ಸಾವನ್ನಪ್ಪಿದ ಘಟನೆಗೆ ಸಂಬಂಧಿಸಿದಂತೆ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಬಿ ಖಂಡ್ರೆ ಆಘಾತ ವ್ಯಕ್ತಪಡಿಸಿದ್ದು, ಈ ಸಂಬಂಧ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದಾರೆ.

ಡೆತ್‌ನೋಟ್ ಬರೆದಿಟ್ಟು 7ನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: 7ನೇ ತರಗತಿಯ ವಿದ್ಯಾರ್ಥಿಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ದಾರುಣ ಘಟನೆ ಬೆಂಗಳೂರಿನ ಚೆನ್ನಮ್ಮನ ಕೆರೆ ಅಚ್ಚುಕಟ್ಟುವಿನಲ್ಲಿ ನಡೆದಿದೆ.

ಮೃತ ಬಾಲಕನನ್ನು 14 ವರ್ಷದ ಗಾಂಧಾರ್ ಎಂದು ಗುರುತಿಸಲಾಗಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸದ್ಯ ಸಿಕೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತದೇಹ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ.

ಗಾಂಧಾರ್, ಗಿಟಾರ್ ತಂತಿ ಕಿತ್ತು ಅದರಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಇಂದು ಬೆಳಗ್ಗೆ ತಂದೆ ಬಾಲಕನ ರೂಮ್‌ಗೆ ಹೋಗಿ ನೋಡಿದಾಗ ಘಟನೆ ಬೆಳಕಿಗೆ ಬಂದಿದೆ.

ಆತ್ಮಹತ್ಯೆ ಮಾಡಿಕೊಂಡ ಗಾಂಧಾರ್‌ನ ತಂದೆ ಮ್ಯೂಸಿಕ್ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಿದ್ದು, ತಾಯಿ ಸವಿತಾ ಖ್ಯಾತ ಜಾನಪದ ಗಾಯಕಿಯಾಗಿದ್ದಾರೆ.

ಜೈವಿಕ, ವೈದ್ಯಕೀಯ ತ್ಯಾಜ್ಯವನ್ನು ಘನತ್ಯಾಜ್ಯದೊಂದಿಗೆ ಮಿಶ್ರಣ ಮಾಡುವುದು ಅಪಾಯಕಾರಿ!

● ಪಾಲಿಕೆ ಆಯುಕ್ತ ಶೇಖ್ ಆಸೀಫ್ ತನ್ವೀರ್ ಆತಂಕ
● ಪೌರಕಾರ್ಮಿಕರ ಮೇಲೆ ಗಂಭೀರ ಪರಿಣಾಮದ ಎಚ್ಚರಿಕೆ



ಮೈಸೂರು, ಆ.4(ಎಸ್‌ಪಿಎನ್)– ಜೈವಿಕ-ವೈದ್ಯಕೀಯ ತ್ಯಾಜ್ಯವನ್ನು ಪ್ರತಿನಿತ್ಯ ಉತ್ಪತಿಯಾಗುವ ಘನತ್ಯಾಜ್ಯದೊಂದಿಗೆ ಮಿಶ್ರಣ ಮಾಡುವುದು ಸಾರ್ವಜನಿಕರ ಪ್ರವೃತ್ತಿಯಿಂದಾಗಿ ಸ್ವಚ್ಛತಾ ಕಾರ್ಮಿಕರು, ಸಾರ್ವಜನಿಕರ ಆರೋಗ್ಯ ಮತ್ತು ಪರಿಸರಕ್ಕೆ ಗಂಭೀರ ಪರಿಣಾಮವನ್ನುಂಟು ಮಾಡುತ್ತಿವೆ ಎಂದು ಮೈಸೂರು ನಗರ ಪಾಲಿಕೆ ಆಯುಕ್ತ(ಎಂಸಿಸಿ) ಶೇಖ್ ಆಸೀಫ್ ತನ್ವೀರ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ನಗರ ಪಾಲಿಕೆ ವಲಯ ಕಚೇರಿ 3ರ ಸಭಾಂಗಣದಲ್ಲಿ ಪರಿಸರ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯ ವನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ, ಮೈಸೂರು ಮಹಾನಗರ ಪಾಲಿಕೆಯ (ಎಂಸಿಸಿ) ಆಯುಕ್ತ ಶೇಖ್ ಆಸೀಫ್ ತನ್ವೀರ್ ನೇತೃತ್ವದಲ್ಲಿ ಇಂದು ನಗರ ವ್ಯಾಪ್ತಿ ಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಆಸ್ಪತ್ರೆಗಳು, ಚಿಕಿತ್ಸಾಲಯಗಳು ಮತ್ತು ಪ್ರಯೋಗಾಲಯಗಳ ಪ್ರತಿನಿಧಿಗಳೊಂದಿಗೆ ಸೋಮವಾರ ಸಭೆ ನಡೆಸಿದರು.

ಜೈವಿಕ-ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (ಬಿಎಂಡಬ್ಲ್ಯೂ ನಿಯಮಗಳು 2016) ಪರಿಣಾಮಕಾರಿ ಅನುಷ್ಠಾನಗೊಳಿಸಬೇಕು ತಾಕೀತು ಮಾಡಿದರಲ್ಲದೆ, ಜೈವಿಕ-ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಬೇರ್ಪಡುವಿಕೆ ಮತ್ತು ವಿಲೇವಾರಿ ಮಾಡಬೇಕು. ನಗರದ ಎಲ್ಲಾ ಆರೋಗ್ಯ ಸಂಸ್ಥೆಗಳು ಬಿಎಂಡಬ್ಲ್ಯೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಆಗ್ರಹಿಸಿದ್ದಾರೆ.

ಜೈವಿಕ-ವೈದ್ಯಕೀಯ ತ್ಯಾಜ್ಯ ನಿರ್ವಹಣೆಗೆ ರಾಜ್ಯ ಸರ್ಕಾರದ ಆದೇಶಗಳನ್ನು ಪಾಲಿಸಿ ಅನುಷ್ಠಾನಗೊಳಿಸಲು ಸೆ.1 ಕೊನೆಯ ದಿನವಾಗಿದೆ. ಈ ನಿಗದಿತ ದಿನಾಂಕದ ನಂತರ ಮಾನದಂಡಗಳನ್ನು ಪಾಲಿಸಲು ವಿಫಲವಾದರೆ ಕಾನೂನಿನ ನಿಬಂಧನೆಗಳ ಪ್ರಕಾರ ಕಠಿಣ ದಂಡ ವಿಧಿಸಲಾಗುತ್ತದೆ. ಮೈಸೂರು ಸ್ವಚ್ಛ ಮತ್ತು ಸುರಕ್ಷಿತ ನಗರವಾಗಿ ಉಳಿಯುವುದನ್ನು ಖಚಿತಪಡಿಸಿಕೊಳ್ಳಲು ಎಂಸಿಸಿ ಬದ್ಧವಾಗಿದೆ. ಈ ಗುರಿಯನ್ನು ಸಾಧಿಸಲು ಎಲ್ಲಾ ಪಾಲುದಾರರ ಸಹಕಾರ ಅವಶ್ಯವೆಂದು ತಿಳಿಸಿದರು.

ಸದರಿ ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ, ಇತರೆ ವೈದ್ಯಕೀಯ ಸಿಬ್ಬಂದಿ ಮತ್ತು ಇತರೆ ಸಂಸ್ಥೆಯವರು ಹಾಗೂ ಪಾಲಿಕೆಯ ಅಧಿಕಾರಿ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಉಪಕಾರ ಸ್ಮರಣೆ ಇಲ್ಲದ ಜನರಿಂದ ಮಹಾತ್ಮ ನಾಲ್ವಡಿಗೆ ಅಪಮಾನ

● ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪರೋಕ್ಷ ವಾಗ್ದಾಳಿ ● ಡಾ.ರಾಜ್‌ಕುಮಾರ್ ಚಿತ್ರಗೀತೆಗಳ ಸಂಗೀತ ರಸಸಂಜೆ ● ಕರುನಾಡ ಕಣ್ಮಣಿ ಪ್ರಶಸ್ತಿ ಪ್ರದಾನ



ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಕರುನಾಡ ಕಣ್ಮಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಆ.4(ಪಿಎಂ)– ರಾಮರಾಜ್ಯ ಕಲ್ಪನೆಗೂ ಮೀಗಿಲಾದ ರಾಜ್ಯವನ್ನು ನಮಗೆ ಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತಹ ಮಹಾತ್ಮರನ್ನು ಅಪಮಾನಿಸುವ ಕೃತ್ಯವು ಉಪಕಾರ ಸ್ಮರಣೆ ಇಲ್ಲದ ಜನರಿಂದ ಆಗುತ್ತಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪರೋಕ್ಷ ವಾಗ್ದಾಳಿ ನಡೆಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ನಾದ ಬ್ರಹ್ಮ ಸಂಗೀತ ಸಭಾದಲ್ಲಿ ವಿಶ್ವಮಾನವ ಡಾ.ರಾಜ್‌ಕುಮಾರ್ ಸೇವಾ ಸಮಿತಿ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಮಿತಿಯ 5ನೇ ವಾರ್ಷಿಕೋತ್ಸವ, ಕರುನಾಡ ಕಣ್ಮಣಿ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಪ್ರತಿಭಾನ್ವಿತ ಕಲಾವಿದರಿಂದ ಡಾ.ರಾಜ್‌ಕುಮಾರ್ ಚಿತ್ರಗೀತೆಗಳ ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶ್ರೀರಾಮನನ್ನು ಯಾರಾದರೂ ಕಂಡಿದ್ದರೆ ಅದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸ್ವರೂಪದಲ್ಲಿಯೇ ಆಗಿದೆ. ಆದರೆ ಅಂತಹ ಮಹಾತ್ಮರನ್ನು ಕೂಡ ಅಪಮಾನಿಸುವ ಕೃತ್ಯಗಳು ಉಪಕಾರ ಸ್ಮರಣೆ ಇಲ್ಲದ ಜನರಿಂದ ಆಗುತ್ತಿದೆ. ಇಂತಹ ಅಪಮಾನದ ವಿರುದ್ಧ ಚಳವಳಿ ನಡೆಸಬೇಕು ಎಂದರು.

ಡಾ.ರಾಜ್‌ಕುಮಾರ್ ಒಬ್ಬ ಅವತಾರ ಪುರುಷ. ದೇವರು ತಾನು ನೇರವಾಗಿ ಪ್ರತ್ಯಕ್ಷವಾಗಲು ಸಾಧ್ಯವಿಲ್ಲದಿದ್ದಾಗ ಮಾನವ ರೂಪದಲ್ಲಿ ಭೂಮಿಗೆ ಬಂದು ಸಾರ್ಥಕತೆಗೊಳಿಸುತ್ತಾನೆ. ಅಂತಹ ದೇವತಾ ಮನುಷ್ಯ ಡಾ.ರಾಜ್‌ಕುಮಾರ್ ಎಂದು ಸ್ಮರಿಸಿದರು.

ಮೈಸೂರು ಯಾವ ಪರಂಪರೆಯು ಉಳಿಯುತ್ತಿಲ್ಲ. ಪಾರಂಪರಿಕ ಕಟ್ಟಡಗಳು ಇಂದು ಕುಸಿಯುವಂತಾಗಿದೆ. ಪಾರಂಪರಿಕ ಕಟ್ಟಡಗಳೇ ಇಲ್ಲದಿದ್ದರೆ ಮೈಸೂರಿನಲ್ಲಿ ಪರಂಪರೆ ಉಳಿಯಲು ಹೇಗೆ ಸಾಧ್ಯ. ಚಾಮುಂಡಿ ಬೆಟ್ಟದ ಸುತ್ತಮುತ್ತ ಲಾಡ್ಜ್‌ಗಳು, ಲೇಔಟ್‌ಗಳು ಸೇರಿದಂತೆ ಕಾಂಕ್ರೀಟ್ ಕಟ್ಟಡಗಳು ತಲೆ ಎತ್ತುತ್ತಿವೆ. ಬೆಟ್ಟ ಕುಸಿಯುವ ಆತಂಕ ಎದುರಾಗಿದ್ದು, ಅಂತಹ ಪರಿಸ್ಥಿತಿ ಬಾರದಿರಲಿ ಎಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ ಮಾಡು ತ್ತೇನೆ. ಅಂತಹ ಪರಿಸ್ಥಿತಿ ತರಲು ಯತ್ನಿಸುವ ದುಷ್ಟ ಮಹಿಷಾಸುರರನ್ನು ಮರ್ಧನ ಮಾಡುವಂತೆ ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರು ಸಂಗೀತ, ಸಾಹಿತ್ಯ ಮತ್ತು ಕಲೆಗೆ ಪ್ರಥಮ ಸ್ಥಾನ ಹೊಂದಿದೆ. ಎಲ್ಲಾ ಕ್ಷೇತ್ರಗಳಲ್ಲೂ ಮೈಸೂರು ತನ್ನ ಛಾಪು ಮೂಡಿಸಿದೆ. ವಾರದಲ್ಲಿ 2ರಿಂದ 3 ಭರತ ನಾಟ್ಯ ರಂಗಪ್ರವೇಶ ಕಾರ್ಯಕ್ರಮಗಳು ಇಲ್ಲಿ ಸಾಮಾನ್ಯ. ಒಟ್ಟಾರೆ ಮೈಸೂರು ನಮ್ಮ ಕಲೆಗಳಿಗೆ ಉತ್ತೇಜನ ನೀಡುತ್ತಿದೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರಾದ ಮೈಸೂರು ಮಹಾಲಿಂಗು, ರವಿ ಸಂತೋಷ್, ದೇಸಿಗೌಡ್ರು, ರವಿಶಾಸ್ತ್ರಿ, ಲಕ್ಷ್ಮೀದೇವಿ, ಚಿಕ್ಕಳಿ ಪುಟ್ಟಣ್ಣ, ರಾಕೇಶ್ ಗೌಡ, ಕೆರೆಹಳ್ಳಿ ಬಿ.ದೊರೆಸ್ವಾಮಿ, ನರಸಣ್ಣ, ರಾ.ಪರಮೇಶ್‌ಗೌಡ ಅವರಿಗೆ ಕರುನಾಡ ಕಣ್ಮಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ಹಲವು ಗಾಯಕರು ಡಾ.ರಾಜ್‌ಕುಮಾರ್ ಅವರ ಚಿತ್ರಗೀತೆಗಳನ್ನು ಸಾದರಪಡಿಸಿದರು.

ಸಮಾಜ ಸೇವಕ ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡ ಎಂ.ಎನ್.ನವೀನ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಮ.ವಿ.ರಾಮ ಪ್ರಸಾದ್, ಬಿ.ವಿ.ಮಂಜುನಾಥ್, ಪಾರ್ಥಸಾರಥಿ, ಮುಖಂಡ ಗೋಪಾಲ್‌ರಾವ್, ಸೇವಾ ಸಮಿತಿ ಅಧ್ಯಕ್ಷ ಹೆಚ್.ಸುಚೇಂದ್ರ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಟುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಟುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆಬಿಜಿ ಸ್ಮರಣೆ



ಮೈಸೂರಿನ ವಿದ್ಯಾರಣ್ಯಪುರಂ ಠಾಣೆಯ ನಿವೃತ್ತ ಮುಖ್ಯಪೇದೆ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಅಸೋಸಿಯೇಷನ್ ಮಾಜಿ ಉಪಾಧ್ಯಕ್ಷ ಎಂ.ಕೆ. ಪಾಷಾ ಅವರು ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯಲ್ಲಿ ಎಂ.ಎ. ಪದವಿ ಪಡೆದ ವೇಳೆ ಅವರನ್ನು 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ|| ಕೆ.ಬಿ. ಗಣಪತಿ ಅವರು ಅಭಿನಂದಿಸಿದ್ದನ್ನು ಸ್ಮರಿಸಿಕೊಂಡಿದ್ದಾರೆ.

ಗಜಪಡೆಯ 14 ಆನೆ, 43 ಸಿಬ್ಬಂದಿಗೆ 2.04 ಕೋಟಿಯ ವಿಮೆ ಸುರಕ್ಷತೆ

ಆ.4ರಿಂದ ಅ.5ರವರೆಗೆ ವಿಮಾ ಅವಧಿ ಚಾಲ್ತಿ

ಮೈಸೂರು,ಆ.4(ಎಂಟಿವೈ)– ಪ್ರತಿವರ್ಷದಂತೆ ಈ ಸಲವೂ ಅರಣ್ಯ ಇಲಾಖೆ ಗಜಪಡೆ, ಮಾವುತರು, ಕಾವಾಡಿಗಳು ಹಾಗೂ ಉಸ್ತುವಾರಿ ಸಿಬ್ಬಂದಿಗೆ ಒಟ್ಟು 2.04 ಕೋಟಿ ರೂ. ಮೊತ್ತದ ವಿಮೆ ಮಾಡಿಸಿದ್ದು, ಆ.4ರಿಂದ ಅ.5ರವರೆಗೆ ಈ ಸುರಕ್ಷತೆ ಚಾಲ್ತಿಯಲ್ಲಿರುತ್ತದೆ.

ಗಜಪಡೆ ಮೈಸೂರಲ್ಲಿರುವಾಗ ಏನಾದರೂ ಹಾನಿ ಸಂಭವಿಸಿದರೆ, ಅದರ ನಷ್ಟ ಪರಿಹರಿಸಲು ಅರಣ್ಯ ಇಲಾಖೆ ವಿಮಾ ಸೌಲಭ್ಯದ ಮೊರೆ ಹೋಗಿದೆ. ಅರಣ್ಯ ಇಲಾಖೆ ಕರೆದ ಟೆಂಡರ್‌ನಲ್ಲಿ ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಗಜಪಡೆ ಹಾಗೂ ಸಿಬ್ಬಂದಿಗಳಿಗೆ ವಿಮೆ ಮಾಡಿಸುವ ಟೆಂಡರ್ ಪಡೆದು, ವಿಮೆ ಮಾಡಿಸಿದೆ.

ಗಜಪಡೆಯ 14 ಆನೆಗಳಲ್ಲಿ ಈ ಬಾರಿ 10 ಗಂಡಾನೆ ಸೇರಿದ್ದು, ಅವುಗಳಿಗೆ ತಲಾ 5 ಲಕ್ಷ ರೂ., 4 ಹೆಣ್ಣಾನೆಗಳಿಗೆ ತಲಾ 4.50 ಲಕ್ಷ ರೂ. ಸೇರಿದಂತೆ 14 ಆನೆಗಳಿಂದ 68 ಲಕ್ಷ ರೂ. ವಿಮೆ, 14 ಮಾವುತರು, 14 ಮಂದಿ ಕಾವಾಡಿಗಳು, ಡಿಸಿಎಫ್, ಇಬ್ಬರು ಆರ್‌ಎಫ್‌ಓ, ಓರ್ವ ಪಶುವೈದ್ಯಾಧಿಕಾರಿ, ಒಬ್ಬರು ಸಹಾಯಕರು, 10 ಮಂದಿ ವಿಶೇಷ ಮಾವುತ ಹಾಗೂ ಸಹಾಯಕರು ಸೇರಿದಂತೆ ಒಟ್ಟು 43 ಮಂದಿಗೆ ತಲಾ 2 ಲಕ್ಷ ರೂ.ನಂತೆ ಒಟ್ಟು 86 ಲಕ್ಷ ರೂ. ಮೊತ್ತದ ವಿಮೆ ಹಾಗೂ ದಸರಾ ಆನೆಗಳಿಂದ ಸಾರ್ವಜನಿಕ ಆಸ್ತಿ–ಪಾಸ್ತಿ ಹಾಗೂ ಸಾರ್ವಜನಿಕರಿಗೆ ಏನಾದರೂ ತೊಂದರೆಯಾದರೆ ನಷ್ಟ ಭರಿಸಲು 50 ಲಕ್ಷ ರೂ. ಮೊತ್ತದ ವಿಮೆ ಮಾಡಿಸಲಾಗಿದೆ. ಒಟ್ಟು ಮೂರು ವರ್ಗದಿಂದ 2.04 ಕೋಟಿ ರೂ. ಮೊತ್ತದ ವಿಮೆ ಮಾಡಿಸಲಾಗಿದ್ದು, ಇದಕ್ಕೆ ಅರಣ್ಯ ಇಲಾಖೆ 67 ಸಾವಿರ ರೂ. ಪ್ರಿಮಿಯಂ ಮೊತ್ತ ಪಾವತಿಸಿದೆ.

ಇಂದು ಗಜಪಯಣದ ಮೂಲಕ ಮೊದಲ ತಂಡದಲ್ಲಿ ಮೈಸೂರಿಗೆ 9 ಆನೆ ಬಂದಿದ್ದು, ಎರಡನೇ ತಂಡದಲ್ಲಿ 5 ಆನೆಗಳು ಮುಂದಿನ ತಿಂಗಳು ಮೈಸೂರಿಗೆ ಆಗಮಿಸಲಿವೆ. ಮುಂದಿನ ವಾರದಿಂದ ತಾಲೀಮು ಆರಂಭವಾಗಲಿದ್ದು, ಸೆ.22ರಂದು ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದೆ. ಅ.2ರಂದು ಜಂಬೂ ಸವಾರಿ ಮೆರವಣಿಗೆ ನಡೆಯಲಿದ್ದು, ಅ.5ಕ್ಕೆ ಎಲ್ಲಾ 14 ಆನೆಗಳು ಸ್ವಸ್ಥಾನಕ್ಕೆ ಮರಳಲಿವೆ. ಅವುಗಳು ಕ್ಯಾಂಪ್ ತಲುಪುವವರೆಗೂ ವಿಮಾ ಅವಧಿ ಚಾಲ್ತಿಯಲ್ಲಿರುತ್ತದೆ.

ಮೈಸೂರಲ್ಲಿ ಪರ್ಯಾಯ ವ್ಯವಸ್ಥೆ

- ಹೊರ ಗುತ್ತಿಗೆ, ತರಬೇತಿ ಪಡೆಯುತ್ತಿರುವ ನೌಕರರ ನಿಯೋಜನೆ
- ಹೆಚ್ಚು ಪ್ರಯಾಣಿಕರ ರೂಟ್‌ಗಳಲ್ಲಿ ಬಸ್ ಸಂಚಾರ
- ಮುಷ್ಕರ ನಿರತ ನೌಕರರಿಂದ ತೊಂದರೆ ಆಗದಂತೆ ಪೊಲೀಸರ ಕ್ರಮ

ಮೈಸೂರು, ಆ.4(ಬಿಎಲ್‌ಯು)– ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಹೊರಗುತ್ತಿಗೆಯ ಹಾಗೂ ತರಬೇತಿ ಪಡೆಯುತ್ತಿರುವ ಚಾಲಕರು, ನಿರ್ವಾಹಕರನ್ನು ಬಸ್ ಸಂಚಾರಕ್ಕೆ ಪರ್ಯಾಯವಾಗಿ ಬಳಸಿಕೊಳ್ಳಲಾಗುವುದು ಎಂದು ಕೆಎಸ್‌ಆರ್‌ಟಿಸಿಯ ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್ ತಿಳಿಸಿದ್ದಾರೆ.



ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರದ ಬಗ್ಗೆ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ನಿಗಮದ ನೌಕರರ ಮುಷ್ಕರದಿಂದ ಪ್ರಯಾಣಿಕರಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು.

ಮೈಸೂರು ಜಿಲ್ಲೆಯಲ್ಲಿ 2700 ಚಾಲಕರು, ನಿರ್ವಾಹಕರು, ಮೆಕ್ಯಾನಿಕ್ ಸೇರಿದಂತೆ ಇತರೆ ನೌಕರರು ಇದ್ದಾರೆ. ನಾಳೆ ಇವರೆಲ್ಲಾ ಮುಷ್ಕರ ನಡೆಸಿದರೆ ಪ್ರಯಾಣಿಕರಿಗೆ ತೊಂದರೆ ಆಗಬಾರದೆಂದು ಸರ್ಕಾರದ ನಿರ್ದೇಶನದಂತೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಹೊರ ಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 50 ಚಾಲಕರು, ನಿರ್ವಾಹಕರನ್ನು ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿದೆ. ಅಲ್ಲದೆ ತರಬೇತಿಯಲ್ಲಿರುವ 100 ಚಾಲಕರು, ನಿರ್ವಾಹಕರನ್ನು ಕೂಡ ನಿಯೋಜಿಸಲಾಗಿದೆ ಎಂದರು. ಜಿಲ್ಲೆಯಲ್ಲಿ ಒಟ್ಟು 750 ರೂಟ್ ಗಳಿದ್ದು, ಹೆಚ್ಚು ಪ್ರಯಾಣಿಕರು ಸಂಚಾರ ಮಾಡುವ ರೂಟ್‌ಗಳಿಗೆ ಆದ್ಯತೆ ನೀಡಿ, ಅಲ್ಲಿ ಬಸ್‌ಗಳು ಸಂಚಾರ ಮಾಡುವ ವ್ಯವಸ್ಥೆ ಮಾಡಲಾಗಿದೆ ಎಂದು ಶ್ರೀನಿವಾಸ್ ತಿಳಿಸಿದರು.

ಮೈಸೂರು ನಗರದಲ್ಲಿ 120 ರೂಟ್‌ಗಳಿದ್ದು, ಚಾಮುಂಡಿಬೆಟ್ಟ, ನಂಜನಗೂಡು, ಜೆ.ಪಿ.ನಗರ, ಹೆಬ್ಬಾಳು ಸೇರಿದಂತೆ ಇತರೆಡೆ ಬಸ್ ಸಂಚರಿಸಲು ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದು ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಮಾಹಿತಿ ನೀಡಿದರು. ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 265 ಚಾಲಕರು, ನಿರ್ವಾಹಕರು ಹಾಗೂ ತರಬೇತಿ ಪಡೆಯುತ್ತಿರುವ 80 ಚಾಲಕರು, ನಿರ್ವಾಹಕರನ್ನು ನಿಯೋಜನೆ ಮಾಡಲಾಗಿದೆ ಎಂದರು.

ಮುಷ್ಕರ ನಡೆಸುವ ನೌಕರರಿಂದ ಬಸ್ ಸಂಚಾರಕ್ಕೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳುವಂತೆ ಈಗಾಗಲೇ ಸರ್ಕಾರ ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಆದ ಕಾರಣ ಪರ್ಯಾಯ ವ್ಯವಸ್ಥೆಯ ಬಸ್ ಸಂಚಾರಕ್ಕೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ವೀರೇಶ್ ಮಾಹಿತಿ ನೀಡಿದರು.

ರಾಜ್ಯದಲ್ಲಿ 24 ಸಾವಿರ ಬಸ್‌ಗಳಿದ್ದು, ಸೂಕ್ತ ಪರ್ಯಾಯ ವ್ಯವಸ್ಥೆ ಸಾಧ್ಯವೇ?

ಕೋಟ್ಯಾಧಿಪತಿಗಳಿಗೆ ಗೃಹಜ್ಯೋತಿ, ಶಕ್ತಿ ಯೋಜನೆ ನೀಡ್ತಾರೆ!; ನಮ್ಮ ಬಾಕಿ ನೀಡಲು ಮೀನಾಮೇಷ

ಕರ್ನಾಟಕದಲ್ಲಿ 24 ಸಾವಿರ ಬಸ್‌ಗಳಿದ್ದು, ಎಲ್ಲಾ ಬಸ್‌ಗಳಿಗೆ ಹೊರ ಗುತ್ತಿಗೆ ಹಾಗೂ ತರಬೇತಿ ಪಡೆಯುತ್ತಿರುವ ಸಿಬ್ಬಂದಿಗಳನ್ನು ನಿಯೋಜಿಸಲು ಸಾಧ್ಯವೇ ಎಂದು ಮೈಸೂರಿನಲ್ಲಿರುವ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಕುಮಾರ್ ಪ್ರಶ್ನಿಸಿದರು.

ಕೋಟ್ಯಾಂತರ ವೆಚ್ಚದ ಮನೆಯಲ್ಲಿ ವಾಸ ಮಾಡುವವರಿಗೆ ಗೃಹಜ್ಯೋತಿ ಗ್ಯಾರಂಟಿ ಯೋಜನೆಯಡಿ ಉಚಿತ ವಿದ್ಯುತ್ ಸಂಪರ್ಕ ಸೌಲಭ್ಯ ನೀಡುತ್ತಾರೆ. ಲಕ್ಷಾಂತರ ರೂಪಾಯಿ ಸರ್ಕಾರದ ವೇತನ ಪಡೆಯುವ ಮಹಿಳೆಯರಿಗೆ ಶಕ್ತಿ ಯೋಜನೆಯಡಿ ಉಚಿತ ಪ್ರಯಾಣದ ವ್ಯವಸ್ಥೆ ಕಲ್ಪಿಸಿದ್ದಾರೆ. ಆದರೆ ಕಡಿಮೆ ವೇತನ ಪಡೆಯುವ ನಮಗೆ ಬಾಕಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊರ ಊರು ಹಾಗೂ ಹೊರ ರಾಜ್ಯಕ್ಕೆ ಹೋದಾಗ ಬಸ್‌ನಲ್ಲೇ ಮಲಗುತ್ತೇವೆ. ಸೊಳ್ಳೆ ಕಚ್ಚಿಸಿಕೊಂಡು ನಿದ್ರೆ ಇಲ್ಲದೆ ಬವಣೆ ಪಡುತ್ತೇವೆ. ಬೆಳಗ್ಗೆ ಶೌಚಾಲಯದ ವ್ಯವಸ್ಥೆ ಇಲ್ಲದೆ ಪರದಾಡುತ್ತೇವೆ. ಇಷ್ಟೆಲ್ಲ ಕಷ್ಟಪಡುವ ನಮಗೆ ಬಾಕಿ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಹೇಳಿದ್ದಾರೆ.

ನಾವು ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರಂತೆ 7ನೇ ವೇತನ ಆಯೋಗದಂತೆ ವೇತನ ನೀಡಿ ಎಂದು ಕೇಳುತ್ತಿಲ್ಲ. ನೀಡುತ್ತಿರುವ ಕಡಿಮೆ ವೇತನದ ಬಾಕಿ ನೀಡುವಂತೆ ಕೇಳುತ್ತಿದ್ದೇವೆ. ಈ ಸಂಬಂಧ ನಾಳೆ ನಮ್ಮ ಮುಷ್ಕರದ ನಂತರ ಸರ್ಕಾರ ಯಾವ ತೀರ್ಮಾನ ಕೈಗೊಳ್ಳುತ್ತದೆ ಎಂದು ಕಾದು ನೋಡಬೇಕು ಎಂದು ತಿಳಿಸಿದರು. ನಾಳೆ ನಡೆಯುವ ಮುಷ್ಕರದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿರುತ್ತೇವೆ. ಈ ಮೂಲಕ ನಮ್ಮ ಬೇಡಿಕೆ ಈಡೇರುವ ತನಕ ಹೋರಾಟ ಮುಂದುವರೆಸುತ್ತೇವೆ ಎಂದು ಶಿವಕುಮಾರ್ ಹೇಳಿದರು.

ಒಂದು ದಿನ ಮುಷ್ಕರ ಕೈಬಿಡಿ: ಸಾರಿಗೆ ನೌಕರರಿಗೆ ಹೈಕೋರ್ಟ್ ಆದೇಶ

ಬೆಂಗಳೂರು: ಸಾರಿಗೆ ನೌಕರರು ಆಗಸ್ಟ್ 5ರಂದು ರಾಜ್ಯಾದ್ಯಂತ ಮುಷ್ಕರ ನಡೆಸಲು ಕರೆ ನೀಡಿದ್ದರು. ಇದೀಗ ನಾಳೆ ಒಂದು ದಿನದ ಮಟ್ಟಿಗೆ ಮುಷ್ಕರ ಕೈಬಿಡುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿಗೆ ಕರ್ನಾಟಕ ಹೈಕೋರ್ಟ್ ಇಂದು ನಿರ್ದೇಶನ ನೀಡಿದೆ.



ನಾಳಿನ ಮುಷ್ಕರ ಸಂಬಂಧ ಹೈಕೋರ್ಟ್‌ನಲ್ಲಿ ಪಿಐಎಲ್ ಹಾಕಲಾಗಿತ್ತು. ಇಂದು ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ನಾಳೆ ಮುಷ್ಕರ ನಡೆಸದಂತೆ ಆದೇಶಿಸಿದ್ದು, ವಿಚಾರಣೆಯನ್ನು ನಾಳೆಗೆ ಮುಂದೂಡಿದೆ. ಮುಷ್ಕರ ನಡೆದರೆ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆ ಎಂದು ಹೇಳಿರುವ ಹೈಕೋರ್ಟ್ ಸರ್ಕಾರ, ಸಾರಿಗೆ ನಿಗಮಗಳಿಗೆ ನೋಟಿಸ್ ನೀಡಿದೆ.

ಆಗಸ್ಟ್ 5 ರಿಂದ ಆರಂಭವಾಗಲಿರುವ ಪ್ರಸ್ತಾವಿತ ಅನಿರ್ದಿಷ್ಟಾವಧಿ ಮುಷ್ಕರವನ್ನು ಒಂದು ದಿನದ ಮಟ್ಟಿಗೆ ಸ್ಥಗಿತಗೊಳಿಸುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿಗೆ ಕರ್ನಾಟಕ ಹೈಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಮುಷ್ಕರದಿಂದಾಗಿ ಪ್ರಯಾಣಿಕರಿಗೆ ಆಗಬಹುದಾದ ತೊಂದರೆಯನ್ನು ತಪ್ಪಿಸಲು ಹೈಕೋರ್ಟ್ ಮಧ್ಯಪ್ರವೇಶಿಸುವಂತೆ ಕೋರಿ ಸುನಿಲ್ ಜೆ ಮತ್ತು ಇತರ ನಾಲ್ವರು ವಕೀಲರಾದ ದೀಕ್ಷಾ ಎನ್ ಅಮೃತೇಶ್ ಮೂಲಕ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಆಲಿಸಿದ ನಂತರ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಮತ್ತು ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರ ವಿಭಾಗೀಯ ಪೀಠವು ಮಧ್ಯಂತರ ಆದೇಶವನ್ನು ನೀಡಿದೆ.


ಅಂತರರಾಷ್ಟ್ರೀಯ ವೂಶೂ ಪಂದ್ಯಾವಳಿಗೆ ಶ್ರೀಶಾನ್ವಿ ಆಯ್ಕೆ

ಆಗಸ್ಟ್ 6 ರವರೆಗೆ ಜಾರ್ಜಿಯಾ ದೇಶದ ಬಟುಮಿಂಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ವೂಶೂ ಪಂದ್ಯಾವಳಿಯಲ್ಲಿ ಶ್ರೀಶಾನ್ವಿ ಭಾರತ ದೇಶವನ್ನು ಪ್ರತಿನಿಧಿಸುತ್ತಿದ್ದು, ಇವರಿಗೆ ಮೈಸೂರಿನ ಸಿಕೆಸಿ ಪಬ್ಲಿಕ್ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ಶುಭ ಹಾರೈಸಿದ್ದಾರೆ.



ಆ.8ರಿಂದ ರಾಯರ ಆರಾಧನೆ

ರಾಯಚೂರು: ಮಂತ್ರಾಲಯದಲ್ಲಿ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ಆಗಸ್ಟ್ 8ರಿಂದ 14ರವರೆಗೆ 7 ದಿನಗಳ ಕಾಲ ಅದ್ದೂರಿಯಾಗಿ ನಡೆಯಲಿದೆ ಎಂದು ಮಂತ್ರಾಲಯ ರಾಯರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿ ಹೇಳಿದ್ದಾರೆ.



ಮಂತ್ರಾಲಯದಲ್ಲಿ ಮಾತನಾಡಿದ ಶ್ರೀಗಳು, 8ರಂದು ಧ್ವಜಾರೋಹಣ ಕಾರ್ಯಕ್ರಮ ಮೂಲಕ ಆರಾಧನಾ ಮಹೋತ್ಸವಕ್ಕೆ ಚಾಲನೆ ಸಿಗಲಿದೆ. ಆಗಸ್ಟ್ 10ಕ್ಕೆ ಪೂರ್ವಾರಾಧನೆ, 11ಕ್ಕೆ ಮಧ್ಯಾರಾಧನೆ, 12ಕ್ಕೆ ಉತ್ತರಾಧನೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀನಿವಾಸ

ಇವರು ದಿ|| 26-07-2025 ಶನಿವಾರ ದೈವಾಧೀನರಾಗಿದ್ದು. ತತ್ಸಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ|| 05-08-2025 ಮಂಗಳವಾರ ಬೆಳಗ್ಗೆ 11:00 ಗಂಟೆಗೆ ಸ್ವಗೃಹ ಭೈರಾಪುರ ಗ್ರಾಮ, ಕೆ.ಆರ್ ಪೇಟೆ ತಾಲ್ಲೂಕು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ತಾಯಿ ಸುಬ್ಬಮ್ಮ, ಪತ್ನಿ: ಗೀತ, ಮಕ್ಕಳು ಹಾಗೂ ಸ್ಟಾಲ್ ಮಂಜು.

IN THE COURT OF THE IV ADDL. SENIOR CIVIL JUDGE AND CJM COURT AT MYSURU

O.S. No. 1169/2024

Plaintiff: CANARA BANK, A Bank Constituted and Functioning under the Banking Companies (Acquisition and Transfer of Under takings) Act, 1970, having its Head Office at No. 112, J.C. Road, Bangalore-560002, Having number branches and one Such branch at Nanjumalige, Mysuru.

Represented by its duly Constituted Attorney and Senior Manager Sri Rajeesh K., S/o Chandukutty N., Aged about 39 years.

V/s

DEFENDANTS: Chandra D., S/o Devanayaka, Aged about 48 years, # Gangadahosahalli Village, Kyathanahalli Post, Hampapura Hobli, H.D. Kote Taluk, Mysuru Dist.

NOTICE TO DEFENDANT

Whereas the plaintiff has institute suit against the Defendant for recovery of money with other reliefs. The notice is hereby given to you to appear in this court in person or by a pleader duly instructed, and able to answer all material questions relation to the suit, or who shall be accompanied by some person able to answer all such questions, on the 16-09-25 on 11.00 O'clock to answer the claim, and you are direct to produce on that day all the documents upon which you intend to rely in support of your defense.

Take Notice that, in default of your appearance on the day before mentioned the suit will be heard and determined in your absence. Given under my hand and the seal of the Court, this 22-7-25.

BY THE ORDERS OF COURT
Sd/- Chief Ministerial Officer,
Court of Senior Civil Judge and CJM., Mysuru

Advocate for plaintiff
Sd/- Ramya B., Advocate KAR/2104/2005. No.1400-1401, 1St Floor,, N.T. Street, K.R. Mohalla, Mysuru. Mob: 9591654434

PUBLIC NOTICE

Notice is hereby given that my clients are intending to purchase the below mentioned properties from (1) Sri B. Swamy and (2) Sri N. Mahesh and N. Raju and any person or persons claiming any interest on the below mentioned properties or any part thereof, is hereby required to communicate the same to me, with documentary evidence at my Office, situated at No.1063/71A, F-3A, 2nd Main, 8th Cross, Vidyaranyapuram, Mysore 570 008 within 10 (Ten) days from the date of this publication, failing which my client shall proceed with the above mentioned transaction, without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Following Sites carved out of the residentially converted lands bearing Survey Numbers 51/9, 51/10 and 51/1, situated at Maratikyathanahalli Village, Jayapura Hobli, Mysore Taluk, within the Jurisdiction of Bogadi Municipal Council.

SITE NO. 22 ; Measurement (Meters): E-W 16.459233 ; N-S: 9.144018 ; Property No. and Assessment No.: 5690863322 and 597/1 ; Total (Sq.Mtrs.): 150.5035 ; Boundary: East - Site No. 15, West - Road ; North - Site No. 23 ; South - Site No. 21.

SITE NO. 27: Measurement (Meters): E-W 12.192024 ; N-S: 6.096012 ; Property No. and Assessment No.: 5554593126 and 655/1 ; Total (Sq.Mtrs.): 74.322730 ; Boundary: East - Road ; West - Private Layout ; North - Khatha No. 650/1A, Site No. 26 ; South - Khatha No. 655/1A, Site No. 28.

Sd/- Sri Laxmi Y.S., Advocate,
#1063/71A, F-3A, 2nd Main,
8th Cross, Vidyaranyapuram,
Mysore-570 008. Mob: 9743476614
Date: 4-8-2025
Place: Mysore



CHANGE OF NAME

I, POONAM DIXIT SALECHA, residing at #80, Divy Aashiyana, Century Park Layout, Nazarbad, Mysore-570010, have changed my name from POONAM VAGATAVARAMAL PAREKH to POONAM DIXIT SALECHA vide affidavit sworn before Notary L N RAJENDRAN, Mysore. Dated: 04-08-2025.

-POONAM DIXIT SALECHA

IN THE COURT OF THE I ADDL SENIOR CIVIL JUDGE AND CJM COURT AT MYSURU

O.S. No. 1690/2024

Plaintift: CANARA BANK, ABank Constitude and Functioning under the banking comapnies (Acquisition and Transfer of Under takings) Act,1970, Having its Head office at No 112, J.C Road Bangalore-560002, Having number branches and one such branch at nanjun malige, Mysuru. Represented by It's duly Constituted Attorney and Senior Manager Sri. Rajeesh K S/o Chandukutty N. Aged about 39 years.

V/s

Defendants: MahadevappaS/o Late. Siddappa @ Madappa Aged about 75 years, Mandanahalli Village, Jayapura Hobli, Mysuru Taluk.

NOTICE TO DEFENDANT

Whereas the plantiff has institute suit against the Defendant for recovery of money with other reliefs. The notice is hereby given to you to appear in this court to person or by a pleader duly instructed, and able to answer all material questions relation to the suit, or who shall accompanied by some person able to answer all such questions, on the 14.08.2025 on 11.00 O'clock to answer the claim, and you are direct to produce on that day all the documents upon which you intend to rely in support of your defens. Take Notice that, in default of your appearance on the day before mentioned the suit will be heard and determined in your absence. Given under my hand and the seal of the Court, this 22-07-2025.

BY THE ORDERS OF COURT
Sd/- Chief Ministirial Officer,
Court of Senior Civil Judge and CJM., Mysuru

Advocate for plaintiff.
Ramya B.
Advocate KAR/2104/2005 No 1400-1401, 1 Floor N.T. Street, K.R. Mohalla,Mysuru
Ph. 9591654434

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



17ನೇ ವರ್ಷದ ಸವಿನೆನಪು



ಶ್ರೀ ಚಿಕ್ಕನೀಲೆಗೌಡರು (ದಾಸನಕೊಪ್ಪಲು)
ಎಸ್‌ಎಲ್‌ವಿ ಬೋರ್ಡಿಂಗ್ & ಲಾಡ್ಜಿಂಗ್, ಎಸ್.ಡಿ.ಆರ್. ಟ್ರೇಡರ್ಸ್ (ಕೆ.ಎಸ್. ಗದ್ದಿಗೆ)

ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಸಣ್ಣಮ್ಮ APMC ಮಾಜಿ ಸದಸ್ಯರು, ಹುಣಸೂರು
ಲಕ್ಷ್ಮಿ, ಮಮತ ಮತ್ತು ಕೆಂಚೇಗೌಡ
ಸವಿತ ಮತ್ತು ಸುರೇಶ್ ಎನ್.
ಅನಿತ ಮತ್ತು ಕೃಷ್ಣೇಗೌಡ
ಅಶ್ವಿನಿ ಮತ್ತು ಪ್ರವೀಣ್, ಮನುಪ್ರಿಯ ಮತ್ತು ಅರುಣ್,
ರೋಹಿತ್, ನಿತಿನ್ ಮತ್ತು ಮೊಮ್ಮಕ್ಕಳು, ದಾಸನಕೊಪ್ಪಲು

ಶ್ರೀಮತಿ ಪ್ರೇಮ ಮತ್ತು ಸಿದ್ದರಾಮೇಗೌಡ,
ಗ್ರಾ.ಪಂ. ಮಾಜಿ ಸದಸ್ಯರು, ಮರಟಿಕ್ಯಾತನಹಳ್ಳಿ
ಪಲ್ಲವಿ ಮತ್ತು ಸಿದ್ದು
ಕಾವ್ಯ ಮತ್ತು ಮಹೇಶ್
ಕೋಮಲ ಮತ್ತು ಪೈ. ಕಿರಣ್
ನಿಶಾಂತ್ ಎಸ್.ಗೌಡ ಮತ್ತು ಮೊಮ್ಮಕ್ಕಳು
ರೂಪನಗರ, ದಾಸನಕೊಪ್ಪಲು

ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–30/2025–26 ದಿ:29.07.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಸಾಮಾನ್ಯ ನಿಧಿ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act –1999 & 2000ರಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW–2 ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ: 13.08.2025 ಅಪರಾಹ್ನ 4.30 ಗಂಟೆಯೊಳಗೆ ಸಲ್ಲಿಸುವುದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.

ಕ್ರ ಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ವರ್ಗ ಮೀಸಲು
1	DMA/2025-26/RD/WORK_INDENT43712	49.30	1,23,500/-	OTHERS
2	DMA/2025-26/RD/WORK_INDENT43707	49.53	1,24,000/-	OTHERS
3	DMA/2025-26/RD/WORK_INDENT43709	49.55	1,24,000/-	OTHERS
4	DMA/2025-26/RD/WORK_INDENT43711	49.95	1,25,000/-	OTHERS

ಸಹಿ/–ಪೌರಾಯುಕ್ತರು, ನಗರಸಭೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/341/2025–26